ಶುಕ್ರವಾರ, ಜೂನ್ 24, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಟ್ರೇಲರ್ ಬಿಡುಗಡೆ
ಮುಂಬೈನಲ್ಲಿ ಗುರುವಾರ ನಡೆದ 'ವಿಕ್ರಾಂತ್ ರೋಣ' ಚಿತ್ರದ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಜಾಕ್ವೆಲಿನ್ ಫರ್ನಾಂಡಿಸ್ ಮತ್ತು ನಟ ಸುದೀಪ್ ಪಾಲ್ಗೊಂಡಿದ್ದರು

Google

ನಾವು ಜಗತ್ತಿನಲ್ಲಿ ಬೇರೆ ಯಾರಿಗಿಂತಲೂ ಹೆಚ್ಚು ಜನರನ್ನು ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿ ಇರಿಸಿಕೊಳ್ಳುತ್ತೇವೆ.

ಡೀಫಾಲ್ಟ್ ಆಗಿ ಎಲ್ಲಾ Google ಉತ್ಪನ್ನಗಳನ್ನು ಸುರಕ್ಷಿತವಾಗಿಸುವ ಮೂಲಕ, ಸಂಭಾವ್ಯ ಆನ್‌ಲೈನ್ ಬೆದರಿಕೆಗಳಿಂದ ನಾವು ಪ್ರತಿದಿನ ಕೋಟ್ಯಾಂತರ ಜನರನ್ನು ರಕ್ಷಿಸುತ್ತೇವೆ

100 ಮಿಲಿಯನ್
Report phishing ಫಿಶಿಂಗ್ ಪ್ರಯತ್ನಗಳನ್ನು ಪ್ರತಿದಿನ ಬ್ಲಾಕ್ ಮಾಡುತ್ತದೆ

5 ಬಿಲಿಯನ್
ಸಾಧನಗಳನ್ನು ಪ್ರತಿದಿನ ಅಸುರಕ್ಷಿತ ವೆಬ್‌ಸೈಟ್‌ಗಳಿಂದ ರಕ್ಷಿಸುತ್ತದೆ

15 ಬಿಲಿಯನ್
Spam ✕ ಸಂದೇಶಗಳನ್ನು ಪ್ರತಿದಿನ ಬ್ಲಾಕ್ ಮಾಡುತ್ತದೆ

125 ಬಿಲಿಯನ್
ಇನ್‌ಸ್ಟಾಲ್ ಮಾಡಲಾದ ಆ್ಯಪ್‌ಗಳನ್ನು ಪ್ರತಿದಿನ ಮಾಲ್‌ವೇರ್ ಇದೆಯೇ ಎಂದು ಸ್ಕ್ಯಾನ್ ಮಾಡುತ್ತದೆ

Every day is Safer with Google

Google Global Internal Data

g.co/safety

ದಿನಕರ್ ಗುಪ್ತಾ ಎನ್‌ಐಎ ಮುಖ್ಯಸ್ಥ

ನವದೆಹಲಿ (ಪಿಟಿಐ): ಹಿರಿಯ ಐಪಿಎಸ್ ಅಧಿಕಾರಿ ದಿನಕರ್ ಗುಪ್ತಾ ಅವರನ್ನು ಗುರುವಾರ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಮಹಾ ನಿರ್ದೇಶಕರಾಗಿ ನೇಮಕ ಮಾಡಲಾಗಿದೆ ಎಂದು ಸಿಬ್ಬಂದಿ ಸಚಿವಾಲಯ ತಿಳಿಸಿದೆ.

ಪಂಜಾಬ್ ಕೇಡರ್‌ನ 1987ನೇ ಬ್ಯಾಚ್ ಐಪಿಎಸ್ ಅಧಿಕಾರಿ ಗುಪ್ತಾ ಅವರ ನೇಮಕಾತಿಯನ್ನು ಸಂಪುಟ ಸಭೆ ಅನುಮೋದಿಸಿದ್ದು, 2024ರ ಮಾರ್ಚ್ 31ರವರೆಗೆ ಮುಖ್ಯಸ್ಥರಾಗಿರುತ್ತಾರೆ.

ಛತ್ತೀಸಗಡ ಕೇಡರ್‌ನ 1987ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ ಸ್ವಾಗತ್ ದಾಸ್ ಅವರನ್ನು ಗೃಹ ಸಚಿವಾಲಯದ ವಿಶೇಷ ಕಾರ್ಯದರ್ಶಿಯಾಗಿ (ಆಂತರಿಕ ಭದ್ರತೆ)ನೇಮಿಸಿ ಆದೇಶ ಹೊರಡಿಸಲಾಗಿದೆ.

ಪಾಕ್‌ನ ಮೂರು ದೋಣಿಗಳು ವಶ

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಭಾರತ- ಪಾಕಿಸ್ತಾನ ಕಡಲ ಗಡಿಯಲ್ಲಿ ಗಸ್ತು ನಡೆಸುತ್ತಿದ್ದ ಗಡಿ ಭದ್ರತಾ ಪಡೆ, ಅಕ್ರಮವಾಗಿ ನುಸುಳಿ ಬಂದಿದ್ದ ಪಾಕಿಸ್ತಾನದ 3 ದೋಣಿಗಳನ್ನು ಕಚ್‌ನ ಹರಾಮಿನಲ್ಲಾ ಕ್ರೀಕ್ ಪ್ರದೇಶದಿಂದ ಗುರುವಾರ ವಶಪಡಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತದ ಸಾಗರದ ಗಡಿ ದಾಟಿ 15-20 ಕಿ.ಮೀ.ವರೆಗೆ ಬಂದಿದ್ದ ದೋಣಿಗಳು ಮತ್ತು ಕೆಲವು ಮೀನುಗಾರರ ಚಲನವಲನವನ್ನು ಗುರುತಿಸಿ, ಬಿಎಸ್‌ಎಫ್ ಗಸ್ತು ಪಡೆ ವಶಕ್ಕೆ ಪಡೆದಿದೆ.

ದಕ್ಷಿಣ ಕನ್ನಡ: ಮೂರು ಗ್ರಾಮಗಳ ಕೃಷಿಕರಿಗೆ ಆತಂಕ ● ಭೂಮಿ ನೀಡಲು ರೈತರ ವಿರೋಧ

1,091 ಎಕರೆ ಕೃಷಿ ಭೂಮಿ ಕೈಗಾರಿಕೆಗೆ

● ಪ್ರವೀಣ ಕುಮಾರ್ ಪಿ.ವಿ

ಕೈಗಾರಿಕಾ ವಲಯಕ್ಕಾಗಿ ಭೂಸ್ವಾಧೀನ ನಡೆಸಲು ಉದ್ದೇಶಿಸಿರುವ ದಕ್ಷಿಣ ಕನ್ನಡ ಜಿಲ್ಲೆಯ ಕೊಲ್ಲೂರು ಗ್ರಾಮ ಕೃಷಿಕರೊಬ್ಬರ ಹಚ್ಚ ಹಸಿರು ಕಂಗಿನ ತೋಟ – ಪ್ರಜಾವಾಣಿ ಚಿತ್ರ/ ಇರ್ಷಾದ್ ಮಹಮ್ಮದ್

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿ ತಾಲ್ಲೂಕಿನ ಮೂರು ಗ್ರಾಮಗಳಲ್ಲಿ 1,091 ಎಕರೆಗಳಷ್ಟು ಹಚ್ಚಹಸಿರಾದ ಕೃಷಿ ಪ್ರದೇಶವನ್ನು ಕೈಗಾರಿಕಾ ವಲಯ ನಿರ್ಮಾಣಕ್ಕೆ ಬಳಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಮುಂದಾಗಿದೆ. ಕೈಗಾರಿಕೆಗೆ ಕೃಷಿ ಭೂಮಿ ಬಿಟ್ಟುಕೊಡುವುದಿಲ್ಲ ಎಂದು ಈ ಮೂರು ಗ್ರಾಮಗಳ ಬಹುತೇಕ ಕೃಷಿಕರು ಪಟ್ಟು ಹಿಡಿದಿದ್ದಾರೆ.

ಭೂಸ್ವಾಧೀನಕ್ಕಾಗಿ ಬಳ್ಕುಂಜೆ, ಕೊಲ್ಲೂರು ಹಾಗೂ ಉಳೆಪಾಡಿ ಗ್ರಾಮಗಳ ನಿವಾಸಿಗಳಿಗೆ ಕೆಐಎಡಿಬಿ ನೋಟಿಸ್ ಜಾರಿಗೊಳಿಸುತ್ತಿದೆ.

'ಇಲ್ಲಿ ಯಾವೆಲ್ಲ ಕೈಗಾರಿಕೆ ಬರಲಿವೆ ಎಂಬುದನ್ನೂ ತಿಳಿಸದೆ, ನಮ್ಮನ್ನು ಸಂಪೂರ್ಣ ಕತ್ತಲಿನಲ್ಲಿಟ್ಟು ಕೆಐಎಡಿಬಿಯು ಭೂಸ್ವಾಧೀನಕ್ಕೆ ದಿಢೀರ್ ಅಧಿಸೂಚನೆ ಹೊರಡಿಸಿದೆ. ನಮ್ಮೂರಿನ ಫಲವತ್ತಾದ ಕೃಷಿ ಭೂಮಿಯನ್ನು ಕೆಐಎಡಿಬಿ ಬರಡು ಭೂಮಿ ಎಂದು ಬಿಂಬಿಸಿ ಸ್ವಾಧೀನಪಡಿಸಿಕೊಳ್ಳಲು ಯತ್ನಿಸುತ್ತಿದೆ' ಎಂಬುದು ಗ್ರಾಮಸ್ಥರ ಆರೋಪ.

ಈ ಗ್ರಾಮಗಳ ಬಹುತೇಕ ಕೃಷಿಕರು ಸಣ್ಣ ಹಿಡುವಳಿದಾರರು. ಗುಡ್ಡಗಾಡು ಪ್ರದೇಶವನ್ನು ಸಮತಟ್ಟುಗೊಳಿಸಿ, ವರ್ಷಗಟ್ಟಲೆ ಶ್ರಮಪಟ್ಟು ಅಡಿಕೆ, ತೆಂಗು, ಬಾಳೆ, ರಬ್ಬರ್ ತೋಟ ಬೆಳೆಸಿದ್ದಾರೆ. ಗದ್ದೆಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಪ್ರತಿ ವರ್ಷ ಭತ್ತ ಹಾಗೂ ತರಕಾರಿ ಬೆಳೆಯುತ್ತಾರೆ. 5 ಸೆಂಟ್ಸ್- 10 ಸೆಂಟ್ಸ್‌ಗಳಷ್ಟು ಅಲ್ಪ ಜಾಗ ಹೊಂದಿರುವ ಕುಟುಂಬಗಳು ಕೂಡಾ ಮಲ್ಲಿಗೆ ಕೃಷಿಯಿಂದ ಬದುಕು ಕಟ್ಟಿಕೊಂಡಿವೆ. ಹೈನುಗಾರಿಕೆಯೂ ಇಲ್ಲಿನ ಕೃಷಿಕರ ಬದುಕಿಗೆ ಆಸರೆಯಾಗಿದೆ.

ಸಾವಿರ ವರ್ಷಗಳ ಪರಂಪರೆ ಇರುವ ಕಾಂತಬಾರೆ-ಬೂದಬಾರೆ ದೈವಸ್ಥಾನದ ಜಾಗ, 97 ವರ್ಷ ಹಳೆಯ ಸಿಸ್ಟರ್ಸ್ ಆಫ್ ಲಿಟ್ಲ್ ಫ್ಲವರ್ಸ್ ಆಫ್ ಬೆಥನಿಯ ಪ್ರಾವಿಡೆನ್ಸ್ ಕಾನ್ವೆಂಟ್ ಮತ್ತು ಹಾಸ್ಟೆಲ್, 35 ವರ್ಷಗಳಷ್ಟು ಹಳೆಯ ಬಳ್ಕುಂಜೆ ಹಯಾತುಲ್ ಇಸ್ಲಾಂ ಮಸೀದಿಗಳೂ ಕೈಗಾರಿಕಾ ವಲಯಕ್ಕಾಗಿ ನೆಲೆ ಕಳೆದುಕೊಳ್ಳಬೇಕಾಗುತ್ತದೆ.

'ಶೇ 60ರಷ್ಟು ಜನರ ಸಮ್ಮತಿ ಇದೆ'

'ಪ್ರತಿ ಗ್ರಾಮದಲ್ಲಿ ತಲಾ 350 ಎಕರೆ ಭೂಸ್ವಾಧೀನ ಆಗಲಿದೆ. ಇಲ್ಲಿ ಬೈಕಂಪಾಡಿ ಕೈಗಾರಿಕಾ ಪ್ರದೇಶದಂತೆಯೇ ನಾನಾ ಬಗೆಯ ಕೈಗಾರಿಕೆಗಳು ನಿರ್ಮಾಣವಾಗಲಿವೆ.ಜೂನ್ 13ರಿಂದ ಸಾರ್ವಜನಿಕರ ಆಕ್ಷೇಪಣೆ ಸಲ್ಲಿಕೆಗೆ ಅವಕಾಶ ಕಲ್ಪಿಸಿದ್ದೇವೆ. ಶೇ 60 ರಷ್ಟು ಜನರ ಸಮ್ಮತಿ ಇದೆ. ಸಣ್ಣ ಹಿಡುವಳಿದಾರರು ಹಾಗೂ ಕೃಷಿಯಲ್ಲಿ ತೊಡಗಿರುವವರು ಭೂಮಿ ನೀಡಿದರೆ ಸಮಸ್ಯೆ ಆಗುತ್ತದೆ ಎಂದು ಹೇಳಿಕೊಂಡಿದ್ದಾರೆ. ಈ ಬಗ್ಗೆ ವರದಿ ಸರ್ಕಾರಕ್ಕೆ ಸಲ್ಲಿಸಲಿದ್ದೇವೆ' ಎಂದು ಕೆಐಎಡಿಬಿಯ ವಿಶೇಷ ಭೂಸ್ವಾಧೀನಾಧಿಕಾರಿ ಬಿನೋಯ್ ಪಿ.ಕೆ. 'ಪ್ರಜಾವಾಣಿ'ಗೆ ತಿಳಿಸಿದರು.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಕೃಷಿ ಭೂಮಿಯನ್ನು ಕೈಗಾರಿಕೆಗೆ ಬಳಸುವ ಬಗ್ಗೆ ಕೆಐಎಡಿಬಿ ಜಾಹೀರಾತು ನೀಡುವವರೆಗೂ ಮಾಹಿತಿ ಇರಲಿಲ್ಲ. ನಮಗೆ ತಿಳಿಸದೇ ಭೂಸ್ವಾಧೀನ ಮಾಡಲಾಗುತ್ತಿದೆ
ಮಮತಾ ಡಿ.ಪೂಂಜಾ, ಅಧ್ಯಕ್ಷೆ, ಬಳ್ಕುಂಜೆ ಗ್ರಾಮ ಪಂಚಾಯಿತಿ

ಮಹಿಳೆಯರು ತರಕಾರಿ ಬೆಳೆದು, ಹೈನುಗಾರಿಕೆ ನಂಬಿ ಬದುಕು ಕಟ್ಟಿಕೊಂಡಿದ್ದಾರೆ. ಏಕಾಏಕಿ ಒಕ್ಕಲೆಬ್ಬಿಸಿದರೆ, ಬೇರೆಡೆ ಹೋಗಿ ಬದುಕು ಕಟ್ಟಿಕೊಳ್ಳಲು ಸಾಧ್ಯವೇ?
ಫ್ರೀಡಾ ರಾಡ್ರಿಗಸ್, ಭೂ ಸಂತ್ರಸ್ತರ ಹಿತರಕ್ಷಣಾ ಸಮಿತಿಯ ಕಾರ್ಯದರ್ಶಿ

ಕೃಷಿ ನೆಚ್ಚಿಕೊಂಡು ಬದುಕು ಕಟ್ಟಿಕೊಂಡವರು ನಾವು. ಕೃಷಿ ಬಿಟ್ಟು ಬೇರೆ ಬದುಕೇ ಇಲ್ಲ. ಯಾವುದೇ ಕಾರಣಕ್ಕೂ ಕೈಗಾರಿಕೆಗೆ ಕೃಷಿಭೂಮಿ ಬಳಸಲು ಅವಕಾಶ ನೀಡುವುದಿಲ್ಲ
ಡೆನ್ನಿಸ್ ಡಿಸೋಜಾ, ಭೂ ಸಂತ್ರಸ್ತರ ಹಿತರಕ್ಷಣಾ ಸಮಿತಿಯ ಅಧ್ಯಕ್ಷ

3 ಜಿಲ್ಲೆಗಳಲ್ಲಿ ಸೇನಾ ಆಯ್ಕೆ ಪೂರ್ವ ತರಬೇತಿ ಶಾಲೆ

ಮಂಗಳೂರು: ಸೇನೆಗೆ ಸೇರುವ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಉಚಿತವಾಗಿ ತರಬೇತಿ ನೀಡಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ತರಬೇತಿ ಶಾಲೆ ಆರಂಭಿಸಲು ನಿರ್ಧರಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರ್ತಿ ವೀರರಾಣಿ ಅಬ್ಬಕ್ಕ, ಉಡುಪಿ ಜಿಲ್ಲೆಯಲ್ಲಿ ತುಳುನಾಡಿನ ವೀರಪುರುಷರಾದ ಕೋಟಿ ಚೆನ್ನಯ, ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ಹೆಂಜಾ ನಾಯಕ ಹೆಸರಿನಲ್ಲಿ ತರಬೇತಿ ಶಾಲೆ ಆರಂಭಿಸಲು ಜೂನ್ 20ರಂದು ಆದೇಶ ಹೊರಡಿಸಲಾಗಿದೆ.

ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ತರಬೇತಿಗೆ ತಗಲುವ ವೆಚ್ಚವನ್ನು ಇಲಾಖೆಯಿಂದ, ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ತಗಲುವ ವಾರ್ಷಿಕ ವೆಚ್ಚ ₹ 67.50 ಲಕ್ಷವನ್ನು ಸಮಾಜ ಕಲ್ಯಾಣ ಇಲಾಖೆಯಿಂದಲೇ ಭರಿಸುವ ಬಗ್ಗೆ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

'4 ತಿಂಗಳ ವಸತಿಯುತ ತರಬೇತಿ': ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರ ಪರಿಕಲ್ಪನೆಯಂತೆ ಸೇನಾ ಆಕಾಂಕ್ಷಿಗಳಿಗೆ ತರಬೇತಿಗಾಗಿ ಶಾಲೆ ಆರಂಭಿಸಲಾಗುತ್ತಿದೆ. ಕರಾವಳಿ ಭಾಗದಿಂದ ಹಲವು ಮಂದಿ ಮಿಲಿಟರಿ ಸೇವೆಗೆ ಸೇರಲು ಪ್ರಯತ್ನಿಸಿದರೂ ನಾನಾ ಕಾರಣದಿಂದ ವಿಫಲರಾಗುತ್ತಾರೆ. ಅವರನ್ನು ದೈಹಿಕ ಮತ್ತು ಲಿಖಿತ ಪರೀಕ್ಷೆಗೆ ತರಬೇತುಗೊಳಿಸುವ ಉದ್ದೇಶದಿಂದ ಶಾಲೆಗಳನ್ನು ಆರಂಭಿಸಲಾಗುತ್ತಿದೆ.

ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ನೀಡಲಾಗುತ್ತದೆ. ಇದು 4 ತಿಂಗಳ ವಸತಿಯುತ ತರಬೇತಿ. ತಲಾ 100 ಅಭ್ಯರ್ಥಿಗಳಿಗೆ ಅವಕಾಶ ನೀಡುವ ಚಿಂತನೆ ಇದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತ ದಯಾನಂದ ಕೆ.ಎ. ತಿಳಿಸಿದ್ದಾರೆ.

ದತ್ತಾತ್ರೇಯ ದೇಗುಲದ ಅರ್ಚಕರಿಂದಲೇ ಕೃತ್ಯ ● ₹20 ಕೋಟಿ ಸಂಗ್ರಹ ಶಂಕೆ

ವೆಬ್‌ಸೈಟ್ ಸೃಷ್ಟಿಸಿ ದೇಣಿಗೆ ಸಂಗ್ರಹ

ಪ್ರಜಾವಾಣಿ ವಾರ್ತೆ

ಕಲಬುರಗಿ: ಅಫಜಲಪುರ ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಸ್ಥಳ ದೇವಲ ಗಾಣಗಾಪುರದ ದತ್ತಾತ್ರೇಯ ದೇಗುಲದ ಅರ್ಚಕರು ದತ್ತಾತ್ರೇಯ ದೇವರ ಹೆಸರಿನಲ್ಲಿ ನಕಲಿ ವೆಬ್‌ಸೈಟ್ ಸೃಷ್ಟಿಸಿ ಭಕ್ತರಿಂದ ಕೋಟ್ಯಂತರ ರೂಪಾಯಿ ದೇಣಿಗೆ ಸಂಗ್ರಹಿಸಿರುವ ಕುರಿತು ದೇವಸ್ಥಾನದ ಕಾರ್ಯ ನಿರ್ವಹಣಾಧಿಕಾರಿ ನಾಮದೇವ ರಾಠೋಡ ದೂರು ನೀಡಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಆರೋಪಿ ಅರ್ಚಕರು ಪರಾರಿಯಾಗಿದ್ದಾರೆ. ದತ್ತಮಂದಿರ ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ಯಶವಂತ ಗುರುಕರ್ ಅವರ ಸೂಚನೆ ಮೇರೆಗೆ ನಾಮದೇವ ಅವರು ದೇವಲ ಗಾಣಗಾಪುರ ಠಾಣೆಗೆ ದೂರು ನೀಡಿದ್ದಾರೆ.

ದೇವಲ ಗಾಣಗಾಪುರದ ದತ್ತಾತ್ರೇಯ ದೇವಸ್ಥಾನ

'ದತ್ತಾತ್ರೇಯ ದೇವಸ್ಥಾನದ ಅಧಿಕೃತ ವೆಬ್‌ಸೈಟ್ (www.devalganagapur.com) ಹೊರತುಪಡಿಸಿ ದತ್ತಾತ್ರೇಯ ದೇಗುಲದ ಹೆಸರಿನಲ್ಲಿ ಅನಧಿಕೃತ ವೆಬ್‌ಸೈಟ್ ತೆರೆದ ಆರೋಪದ ಮೇಲೆ ವಲ್ಲಭ ದಿನಕರ ಭಟ್ಟ ಪೂಜಾರಿ, ಅಂಕುರ ಆನಂದರಾವ ಪೂಜಾರಿ, ಪ್ರತೀಕ ಸದಾಶಿವ ಪೂಜಾರಿ, ಗಂಗಾಧರ ಶ್ರೀಕಾಂತ ಭಟ್ಟ ಪೂಜಾರಿ, ಶರತ್ ಭಟ್ಟ ನಂದು ಭಟ್ಟ ಪೂಜಾರಿ ಸೇರಿ ಇತರ ಅರ್ಚಕರ ವಿರುದ್ಧ ತನಿಖೆ ನಡೆಸಬೇಕು' ಎಂದು ದೂರಿನಲ್ಲಿ ತಿಳಿಸಲಾಗಿದೆ.

ದೇವಸ್ಥಾನದ ಅರ್ಚಕರು ಬೇರೆ ವೆಬ್‌ಸೈಟ್ ತೆರೆದು ಅದರಿಂದ ದೇಣಿಗೆ ಸಂಗ್ರಹಿಸಿದ ಬಗ್ಗೆ ಮಾಹಿತಿ ಗೊತ್ತಾಗಿದೆ. ಪೊಲೀಸರು ತನಿಖೆ ನಡೆಸಿದ ಬಳಿಕ ಸ್ಪಷ್ಟ ಚಿತ್ರಣ ಸಿಗಲಿದೆ
ಯಶವಂತ ಗುರುಕರ್ ಜಿಲ್ಲಾಧಿಕಾರಿ, ಕಲಬುರಗಿ

'ದತ್ತಾತ್ರೇಯ ದೇವಸ್ಥಾನವು ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿರುವ ಕಾರಣ ಅಧಿಕೃತ ವೆಬ್‌ಸೈಟ್ ಮೂಲಕವೇ ಭಕ್ತರು ಪೂಜಾ ಸೇವೆ ನೆರವೇರಿಸಬೇಕು. ಆದರೆ, ದೇವಸ್ಥಾನದಲ್ಲಿ ಹಲವು ವರ್ಷಗಳಿಂದ ಬೀಡುಬಿಟ್ಟಿರುವ ಕೆಲ ಅರ್ಚಕರು ನಕಲಿ ವೆಬ್‌ಸೈಟ್ ಆರಂಭಿಸಿ ಆನ್‌ಲೈನ್ ಮೂಲಕ ಸೇವೆ ನೀಡುವುದಾಗಿ ಭಕ್ತರನ್ನು ನಂಬಿಸಿದ್ದರು. ಇದಕ್ಕಾಗಿ ₹ 10 ಸಾವಿರದಿಂದ ₹ 50 ಸಾವಿರದವರೆಗೆ ಹಣವನ್ನು ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದರು' ಎಂಬ ಆರೋಪವಿದೆ.

'ವಿವಿಧ ಧಾರ್ಮಿಕ ಸೇವೆಗಳಿಗಾಗಿ ವೆಬ್‌ಸೈಟ್ ಮೂಲಕ 2 ಸಾವಿರ ಭಕ್ತರು ಹಣ ಪಾವತಿಸಿದ್ದಾರೆ. ಅರ್ಚಕರ ಖಾತೆಗಳಲ್ಲಿ ₹20 ಕೋಟಿಗೂ ಹೆಚ್ಚು ಹಣ ಸಂಗ್ರಹವಾಗಿದೆ' ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಜುಲೈ ಅಂತ್ಯದಲ್ಲಿ ಹೇಳಿಕೆ ನೀಡಲು ಸೋನಿಯಾಗೆ ಇ.ಡಿ ಸೂಚನೆ

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದ ವಿಚಾರಣೆಗೆ ಹಾಜರಾಗುವ ದಿನಾಂಕ ಮುಂದೂಡುವಂತೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಅವರು ಸಲ್ಲಿಸಿದ್ದ ಮನವಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಪುರಸ್ಕರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಈ ಸಂಬಂಧ ಸೋನಿಯಾ ಅವರ ವಿಚಾರಣೆಯನ್ನು ನಾಲ್ಕು ವಾರಗಳವರೆಗೆ ಮುಂದೂಡಲಾಗಿದೆ. ಜುಲೈ ಕೊನೆ ವಾರದಲ್ಲಿ ಇ.ಡಿ ಮುಂದೆ ಹಾಜರಾಗಿ ಹೇಳಿಕೆ ದಾಖಲಿಸಲು ಅವರಿಗೆ ಸೂಚಿಸಲಾಗಿದೆ' ಎಂದು ಕೇಂದ್ರ ತನಿಖಾ ಸಂಸ್ಥೆಯ ಮೂಲಗಳು ಹೇಳಿವೆ.

ಸೋನಿಯಾ ಅವರಿಗೆ ಜೂನ್ 5ರಂದು ವಿಚಾರಣೆಗೆ ಹಾಜರಾಗುವಂತೆ ಇ.ಡಿ ಮೊದಲ ನೋಟಿಸ್ ನೀಡಿತ್ತು. ಸೋನಿಯಾ ಅವರಿಗೆ ಕೋವಿಡ್ ಸೋಂಕು ಇರುವುದು ದೃಢಪಟ್ಟ ನಂತರ ವಿಚಾರಣೆ ಮುಂದೂಡಿ, ಜೂನ್ 23ರಂದು ವಿಚಾರಣೆಗೆ ಹಾಜರಾಗಲು ಇ.ಡಿ ಎರಡನೇ ನೋಟಿಸ್ ನೀಡಿತ್ತು. ಆದರೆ, ಕೋವಿಡ್ ಮತ್ತು ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿರುವ ಸೋನಿಯಾ ಅವರು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದು, ವೈದ್ಯರು ಅವರಿಗೆ ಮನೆಯಲ್ಲಿಯೇ ಇದ್ದು ವಿಶ್ರಾಂತಿ ಪಡೆಯಲು ಸಲಹೆ ನೀಡಿದ್ದಾರೆ.

ಅಭಯಾ ಕೊಲೆ ಪ್ರಕರಣ: ಪಾದ್ರಿ, ಸನ್ಯಾಸಿನಿಗೆ ಜಾಮೀನು

ಕೊಚ್ಚಿ (ಪಿಟಿಐ): ಸಿಸ್ಟರ್ ಅಭಯಾ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಕ್ಯಾಥೋಲಿಕ್ ಪಾದ್ರಿ ಥಾಮಸ್ ಕೊಟ್ಟೂರು ಮತ್ತು ಸನ್ಯಾಸಿನಿ ಸೆಫಿಗೆ ಕೇರಳ ಹೈಕೋರ್ಟ್ ಗುರುವಾರ ಜಾಮೀನು ಮಂಜೂರು ಮಾಡಿದೆ.

ನ್ಯಾಯಮೂರ್ತಿಗಳಾದ ಕೆ. ವಿನೋದ್ ಚಂದ್ರನ್ ಮತ್ತು ಸಿ. ಜಯಚಂದ್ರನ್ ಅವರನ್ನೊಳಗೊಂಡ ಪೀಠವು, ಶಿಕ್ಷೆಯನ್ನು ಅಮಾನತುಗೊಳಿಸಿ, ತಲಾ ₹5 ಲಕ್ಷ ಬಾಂಡ್ ಖಾತರಿ ಒದಗಿಸುವಂತೆ ಸೂಚಿಸಿ, ಜಾಮೀನು ನೀಡಿದೆ.

ವಿಶೇಷ ಸಿಬಿಐ ನ್ಯಾಯಾಲಯ ವಿಧಿಸಿದ್ದ ಜೀವಾವಧಿ ಶಿಕ್ಷೆ ಪ್ರಶ್ನಿಸಿ, ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಮೊದಲು ಸ್ಥಳೀಯ ಪೊಲೀಸರು, ನಂತರ ಅಪರಾಧ ವಿಭಾಗದ ಪೊಲೀಸರು ತನಿಖೆ ನಡೆಸಿ, ಇದು ಆತ್ಮಹತ್ಯೆ ಎಂಬ ನಿರ್ಧಾರಕ್ಕೆ ಬಂದಿದ್ದರು. 2008ರಲ್ಲಿ ಸಿಬಿಐ ತನಿಖೆ ನಡೆಸಲು ಆರಂಭಿಸಿತು. ಹಲವು ಸಾಕ್ಷಿಗಳು ಪ್ರತಿಕೂಲ ಸಾಕ್ಷ್ಯ ನುಡಿದರು.

21 ವರ್ಷದ ಸಿಸ್ಟರ್ ಅಭಯಾ ಅವರ ಮೃತ ದೇಹ 1992ರಲ್ಲಿ ಕೋಟಯಂನಲ್ಲಿರುವ ಸೇಂಟ್ ಪಿಯಸ್ ಕಾನ್ವೆಂಟ್ ಬಾವಿಯಲ್ಲಿ ಪತ್ತೆಯಾಗಿತ್ತು

ಬಾಡಿಗೆ ತಾಯಿ: ವಿಮೆ ಖರೀದಿ ಕಡ್ಡಾಯ

ನವದೆಹಲಿ (ಪಿಟಿಐ): ಬಾಡಿಗೆ ತಾಯ್ತನ ವಿಧಾನದ ಮೂಲಕ ಮಕ್ಕಳನ್ನು ಹೊಂದಲು ಬಯಸುವ ದಂಪತಿ, ಬಾಡಿಗೆ ತಾಯಿ ಹೆಸರಿನಲ್ಲಿ ಮೂರು ವರ್ಷಗಳ ಅವಧಿಯ ಆರೋಗ್ಯ ವಿಮೆ ಖರೀದಿಸಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ.

ಗರ್ಭ ಧರಿಸಿದ ಅವಧಿ ಹಾಗೂ ಹೆರಿಗೆ ನಂತರ ಕಾಣಿಸಿಕೊಳ್ಳುವ ಆರೋಗ್ಯ ಸಮಸ್ಯೆಗಳ ಚಿಕಿತ್ಸೆಗೆ ತಗಲುವ ವೆಚ್ಚವನ್ನು ಈ ಪಾಲಿಸಿಯ ವಿಮಾ ಮೊತ್ತ ಸರಿದೂಗಿಸುವಂತಿರಬೇಕು ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ. ಬಾಡಿಗೆ ತಾಯ್ತನ (ನಿಯಂತ್ರಣ) ಕಾಯ್ದೆಯ ನಿಯಮಗಳಿಗೆ ಸಂಬಂಧಿಸಿ ಸಚಿವಾಲಯ ಜೂನ್ 21ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ ಈ ಅಂಶವನ್ನು ವಿವರಿಸಲಾಗಿದೆ. ಬಾಡಿಗೆ ತಾಯಿಯಾಗಲು ಒಪ್ಪಿಕೊಂಡವರು ಗರಿಷ್ಠ ಮೂರು ಬಾರಿ ಬಾಡಿಗೆ ತಾಯ್ತನ ವಿಧಾನಕ್ಕೆ ಒಳಗಾಗಬಹುದು. ಕಾಯ್ದೆಯಡಿ, ಗರ್ಭಪಾತ ಮಾಡಿಸಿಕೊಳ್ಳಲು ಅವರಿಗೆ ಅನುಮತಿ ನೀಡಬೇಕು ಎಂದೂ ನಿಯಮದಲ್ಲಿ ಹೇಳಲಾಗಿದೆ.

ಪ್ರಜಾವಾಣಿ
ಎಡ್ಯುವರ್ಸ್™
DH DECCAN HERALD
ಜ್ಞಾನ ದೇಗುಲ® - 2022 (12ನೇ ಆವೃತ್ತಿ)
ಎ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೊ
ನಿಮ್ಮ ಸ್ಟಾಲ್ ಬುಕ್ ಮಾಡಿದ್ದೀರಾ?
ಸಿಇಟಿ ಮತ್ತು ಕಾಮೆಡ್-ಕೆ ಅಧಿಕಾರಿಗಳಿಂದ ಉಚಿತ ಕೌನ್ಸೆಲಿಂಗ್ ಸೆಷನ್ಸ್

CET, NEET, COMED-K ಸಿಬ್ಬಂದಿಗಳನ್ನು ಭೇಟಿಯಾಗುವ ಅವಕಾಶ
ಮತ್ತು ಪ್ರತಿಷ್ಠಿತ ಕಾಲೇಜುಗಳೊಡನೆ ನೇರ ಸಂದರ್ಶನ
ಬೆಂಗಳೂರು - 2 - 3 ಜುಲೈ, 2022
ಜಯಮಹಲ್ ಪ್ಯಾಲೆಸ್ ಹೋಟೆಲ್ ಗ್ರೌಂಡ್ಸ್
ಹುಬ್ಬಳ್ಳಿ - 9 - 10 ಜುಲೈ, 2022
ಗೋಕುಲ್ ಗಾರ್ಡನ್ಸ್
ಕರ್ನಾಟಕದ ಅತಿ ದೊಡ್ಡ ವಿದ್ಯಾರ್ಥಿಗಳು ಮತ್ತು ವಿದ್ಯಾ ಸಂಸ್ಥೆಗಳು ಸೇರುವ ಎಡ್ಯುವರ್ಸ್ 2022, ಪುನಃ ಆರಂಭವಾಗಿದೆ!
● ಮೆಗಾ ಎಜುಕೇಶನ್ ಎಕ್ಸ್‌ಪೋ ● ಶೈಕ್ಷಣಿಕ ತಜ್ಞರ ಭೇಟಿ ● ಮಲ್ಟಿಪಲ್ ಕರಿಯರ್ ಡಿಸಿಪ್ಲೀನ್ ಕುರಿತ ಮಾಹಿತಿ ಮತ್ತು ಮಾರ್ಗದರ್ಶನ ● ವಿದ್ಯಾರ್ಥಿಗಳಿಗೆ ವಿವಿಧ ಕಾಲೇಜುಗಳನ್ನು ಪರಿಚಯಿಸಬಲ್ಲ ಏಕಮಾತ್ರ ತಾಣ
UNIVERSITY PAVILION
CMR UNIVERSITY · ICFAI GROUP · MIT-ADT UNIVERSITY PUNE INDIA · PRESIDENCY UNIVERSITY · RAMAIAH UNIVERSITY OF APPLIED SCIENCES · REVA UNIVERSITY Bengaluru, India
INNOVATIVE PAVILION
Dayananda Sagar Institutions Bengaluru
GOLD SPONSOR
CAMBRIDGE INSTITUTE OF TECHNOLOGY · EAST POINT GROUP OF INSTITUTIONS · KAMMAVARI SANGHAM GROUP OF INSTITUTIONS · KLE ACADEMY OF HIGHER EDUCATION AND RESEARCH, BELAGAVI (Deemed-to-be-University) · MS ENGINEERING COLLEGE
SILVER SPONSOR
ADICHUNCHANAGIRI UNIVERSITY · EAST WEST GROUP OF INSTITUTIONS BENGALURU · Karnataka Bank · KLE TECHNOLOGICAL UNIVERSITY · KRUPANIDHI GROUP OF INSTITUTIONS · SAMBHRAM INSTITUTIONS
BANKING PARTNER
SBI The banker to every Indian
EXHIBITOR
ATRIA INSTITUTE OF TECHNOLOGY · Bank of Baroda · HINDUSTAN AVIATION ACADEMY · IAS BABA · Symbiosis Skills and Professional University · VVCE
IN ASSOCIATION WITH
Ab advertising
TECHNOLOGY PARTNER
Lenovo
ಸ್ಪಾನ್ಸರ್‌ಶಿಪ್ ಮತ್ತು ಸ್ಟಾಲ್ ಬುಕ್ಕಿಂಗ್‌ಗಾಗಿ ಸಂಪರ್ಕಿಸಿ: ಬೆಂಗಳೂರು: ದಿನೇಶ್ (99860 06598)

ಶುಕ್ರವಾರ, ಜೂನ್ 24, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 174 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಗೀತಾ ಶಿವರಾಜ್‌ಕುಮಾರ್ ಅವರ ದಶಕದ ಕನಸು ಇದೀಗ ಚಿಗುರಿದೆ. ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಶಿವರಾಜ್‌ಕುಮಾರ್ ಅವರ 125ನೇ ಸಿನಿಮಾ 'ವೇದಾ' ಅದ್ಧೂರಿಯಾಗಿ ನಿರ್ಮಾಣವಾಗುತ್ತಿದೆ



ಆಳ-ಅಗಲ
ಕೋವಿಡ್ ಸಾವು: ಸರ್ಕಾರದ ತಪ್ಪು ಲೆಕ್ಕ
₹ 60 ಸಾವಿರ ಕೋಟಿ ದಾನ ನೀಡುವುದಾಗಿ ಹೇಳಿದ ಅದಾನಿ 7
'ಪ್ರತ್ಯೇಕ ರಾಜ್ಯದ ಪ್ರಸ್ತಾವ ಇಲ್ಲ' 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,265 ▲	15,556 ▲	₹52,780 (ಬೆಂಗಳೂರು) ▲	₹62,000 (ಬೆಂಗಳೂರು) ▼	78.32

ಪಕ್ಷ ಉಳಿಸಲು ಹರಸಾಹಸ

ಮಹಾ ವಿಕಾಸ ಆಘಾಡಿ ಕೂಟ ತೊರೆಯಲು ಸಿದ್ಧ: ಬಂಡಾಯ ಶಾಸಕರಿಗೆ ಶಿವಸೇನಾ ಸಂದೇಶ

ಮುಂಬೈ (ಪಿಟಿಐ): ಸರ್ಕಾರ ಕೈತಪ್ಪಿದರೂ ಪಕ್ಷವನ್ನು ಉಳಿಸಿಕೊಳ್ಳಬೇಕು ಎಂಬ ನಿಲುವಿಗೆ ಶಿವಸೇನಾ ಬಂದಿದೆ. ಮಹಾರಾಷ್ಟ್ರದ ಆಡಳಿತಾರೂಢ ಮಹಾ ವಿಕಾಸ ಆಘಾಡಿ (ಎಂವಿಎ) ಮೈತ್ರಿಕೂಟದಿಂದ ಹೊರ ನಡೆಯಲು ಸಿದ್ಧ ಎಂದು ಸೇನಾ ಹೇಳಿದೆ. ಆದರೆ, ಅಸ್ಸಾಂನಲ್ಲಿ ತಂಗಿರುವ ಸೇನಾ ಶಾಸಕರು 24 ತಾಸುಗಳೊಳಗೆ ಮುಂಬೈಗೆ ಬರಬೇಕು ಎಂದು ಪಕ್ಷದ ಮುಖ್ಯ ವಕ್ತಾರ ಸಂಜಯ ರಾವುತ್ ಗುರುವಾರ ಹೇಳಿದ್ದಾರೆ.

ಸೇನಾ ನಿಲುವಿನಲ್ಲಿ ಆಗಿರುವ ದಿಢೀರ್ ಬದಲಾವಣೆಯು ಮಿತ್ರ ಪಕ್ಷಗಳನ್ನು ಅಚ್ಚರಿಗೆ ಕೆಡವಿದೆ. ಮೈತ್ರಿಕೂಟದ ಸರ್ಕಾರವು ಅವಧಿ ಪೂರೈಸಬೇಕು ಎಂಬ ಅಭಿಪ್ರಾಯವನ್ನು ಎನ್‌ಸಿಪಿ ವ್ಯಕ್ತಪಡಿಸಿದೆ.

ಮುನಿಸಿಕೊಂಡಿರುವ ಶಾಸಕರಿಗೆ ಪಕ್ಷದ ಬಾಗಿಲು ತೆರೆದಿದೆ. ಎಲ್ಲ ಸಮಸ್ಯೆಗಳನ್ನು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಜತೆ ಚರ್ಚಿಸಿ ಬಗೆಹರಿಸಿಕೊಳ್ಳಬಹುದು ಎಂದು ರಾವುತ್ ಹೇಳಿದ್ದಾರೆ.

ಮಹಾರಾಷ್ಟ್ರದ ಸಚಿವ ಮತ್ತು ಸೇನಾದ ಪ್ರಭಾವಿ ನಾಯಕ ಏಕನಾಥ ಶಿಂಧೆ ಅವರು ಪಕ್ಷದ ಹಲವು ಶಾಸಕರ ಜತೆಗೂಡಿ ಬಂಡಾಯ ಎದ್ದಿದ್ದಾರೆ. ಹೀಗಾಗಿ ಎಂವಿಎ ಸರ್ಕಾರವು ಬಿಕ್ಕಟ್ಟಿಗೆ ಸಿಲುಕಿದೆ. ಸೇನಾದ ಇನ್ನೂ ಮೂವರು ಶಾಸಕರು, ಬಂಡಾಯ ಶಾಸಕರು ತಂಗಿರುವ ಗುವಾಹಟಿಯ ಪಂಚತಾರಾ ಹೋಟೆಲ್‌ಗೆ ಗುರುವಾರ ತಲುಪಿದ್ದಾರೆ ಎನ್ನಲಾಗಿದೆ. ಶಿಂಧೆ ಅವರ ಜತೆಗೆ ಸೇನಾದ 37 ಶಾಸಕರು ಮತ್ತು ಪಕ್ಷೇತರರಾಗಿ ಗೆದ್ದಿರುವ ಒಂಬತ್ತು ಶಾಸಕರು ಇದ್ದಾರೆ ಎಂದು ಹೇಳಲಾಗುತ್ತಿದೆ. 'ಬಂಡಾಯ' ಶಾಸಕರ ಪರವಾಗಿ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಶಿಂಧೆ ಅವರಿಗೆ ನೀಡುವ ತೀರ್ಮಾನವನ್ನು ಅವಿರೋಧವಾಗಿ ತೆಗೆದುಕೊಳ್ಳಲಾಗಿದೆ ಎಂದು ಶಿಂಧೆ ಅವರ ಕಚೇರಿಯು ತಿಳಿಸಿದೆ.

8ನೇ ಪುಟ ನೋಡಿ

ಶಿವಸೇನಾ ಬಂಡಾಯ ಶಾಸಕ ಏಕನಾಥ ಶಿಂಧೆ ಅವರು ಗುರುವಾರ ಗುವಾಹಟಿಯ ಹೋಟೆಲ್‌ನಲ್ಲಿ ಬೆಂಬಲಿಗ ಶಾಸಕರ ಜೊತೆ ಸಮಾಲೋಚನೆ ನಡೆಸಿದರು –ಪಿಟಿಐ ಚಿತ್ರ

ನಮ್ಮ ಬಂಡಾಯವನ್ನು ಚಾರಿತ್ರಿಕ ಎಂದು ರಾಷ್ಟ್ರೀಯ ಪಕ್ಷವೊಂದು ಬಣ್ಣಿಸಿದೆ. ನಮಗೆ ಎಲ್ಲ ನೆರವು ನೀಡುವ ಭರವಸೆ ಕೊಟ್ಟಿದೆ

ಏಕನಾಥ ಶಿಂಧೆ, ಶಿವಸೇನಾ ಬಂಡಾಯ ಗುಂಪಿನ ನಾಯಕ

12 ಶಾಸಕರ ಅನರ್ಹತೆಗೆ ಯತ್ನ?

ಮುಂಬೈ: ಶಿವಸೇನಾದ ಬಂಡಾಯ ನಾಯಕ ಏಕನಾಥ ಶಿಂಧೆ ಅವರೊಂದಿಗೆ ಗುರುತಿಸಿಕೊಂಡಿರುವ ಸುಮಾರು 12 ಶಾಸಕರನ್ನು ಅನರ್ಹಗೊಳಿಸುವಂತೆ ಕೋರಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಬಳಗ ಮಹಾರಾಷ್ಟ್ರದ ವಿಧಾನಸಭೆಯ ಉಪ ಸ್ಪೀಕರ್‌ಗೆ ಮನವಿ ಸಲ್ಲಿಸಲು ಚಿಂತಿಸಿದೆ.

ವಿಧಾನಸಭೆಯಲ್ಲಿ ಶಿವಸೇನಾ ಪಕ್ಷವನ್ನು ವಿಭಜಿಸುವುದಕ್ಕೆ ಅಗತ್ಯವಿರುವ 37 ಶಾಸಕರ ಸಂಖ್ಯೆಯನ್ನು ಗುವಾಹಟಿಯಲ್ಲಿರುವ ಬಂಡಾಯ ಗುಂಪು ಹೊಂದಿದೆ. ಈ ಮೂಲಕ ಅವರು ಪಕ್ಷಾಂತರ ನಿಷೇಧ ಕಾಯ್ದೆಯ ಅನರ್ಹತೆಯ ತೂಗುಕತ್ತಿಯಿಂದ ಪಾರಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

7B ಪುಟ ನೋಡಿ

'ಕಮ್ಯುನಿಸ್ಟ್ ಸಿದ್ಧಾಂತ ಹೇರಿದ್ದ ಸಿದ್ದರಾಮಯ್ಯ'

'ಪರಿಷ್ಕೃತ ಪಠ್ಯ ವಾಪಸ್ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಸಮಿತಿ ಪರಿಷ್ಕರಿಸಿರುವ ಪಠ್ಯಪುಸ್ತಕಗಳನ್ನು ಹಿಂದಕ್ಕೆ ಪಡೆಯುವ ಪ್ರಶ್ನೆಯೇ ಇಲ್ಲ. ಯಾರ ಒತ್ತಡಕ್ಕೂ ಮಣಿಯುವುದಿಲ್ಲ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಲವು ಸಾಹಿತಿಗಳೂ ತಮ್ಮ ಪಾಠಗಳನ್ನು ಹಿಂದಕ್ಕೆ ಪಡೆದಿರುವುದಾಗಿ ಹೇಳಿದ್ದಾರೆ. ಆದರೆ, ಈ ಬಾರಿ ಪಠ್ಯ ಪುಸ್ತಕಗಳಲ್ಲಿ ಅವರೆಲ್ಲರ ಪಾಠಗಳು ಇರಲಿವೆ. ಯಾವುದೇ ಪಾಠ ತೆಗೆಯುವುದಿಲ್ಲ' ಎಂದು ತಿಳಿಸಿದರು.

'ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಏಳೆಂಟು ಸಣ್ಣ– ಪುಟ್ಟ ದೋಷಗಳು ಉಳಿದಿವೆ. ದೊಡ್ಡ ಮಟ್ಟದ ತಪ್ಪುಗಳು ಆಗಿಲ್ಲ. ಅವುಗಳನ್ನು ಸರಿಪಡಿಸಿ ಮುಂದಿನ ಎಂಟು– ಹತ್ತು ದಿನಗಳಲ್ಲಿ ವಿದ್ಯಾರ್ಥಿಗಳಿಗೆ ವಿತರಿಸುತ್ತೇವೆ. ಬರಗೂರು ರಾಮಚಂದ್ರಪ್ಪ ಅವರ ಪರಿಷ್ಕರಣೆ ಮಾಡಿದಾಗ ಪಠ್ಯಗಳಲ್ಲಿ 150 ತಪ್ಪುಗಳಿದ್ದವು. ಆಗಲೂ ಸಿದ್ದರಾಮಯ್ಯ ಸರ್ಕಾರ ಹೊಸದಾಗಿ ಪುಸ್ತಕ ಮುದ್ರಿಸಿ ವಿತರಿಸಿಲ್ಲ. ಹೆಚ್ಚುವರಿ ಪುಟಗಳನ್ನಷ್ಟೇ ಸೇರಿಸಿದ್ದರು. ಅದೇ ಮಾದರಿ ಅನುಸರಿಸುತ್ತೇವೆ' ಎಂದು ಅಶೋಕ ತಿಳಿಸಿದರು.

'ಸಿದ್ದರಾಮಯ್ಯ ಅವರು ಬರಗೂರು ರಾಮಚಂದ್ರಪ್ಪ ಮೂಲಕ ಪಠ್ಯಪುಸ್ತಕಗಳಲ್ಲಿ ಕಮ್ಯುನಿಸ್ಟ್ ಸಿದ್ಧಾಂತವನ್ನು ಹೇರಿದರು. ಹಿಂದೂ ಧರ್ಮ, ಹಿಂದೂ ಅಸ್ಮಿತೆಯ ಪದಗಳು, ರಾಮಾಯಣ, ಮಹಾಭಾರತದ ಅಂಶಗಳು, ಈಶ್ವರ, ರಾಮ, ಕೃಷ್ಣರ ಕುರಿತು ಇದ್ದ ಅಂಶಗಳು ಮತ್ತು ಹೆಸರುಗಳನ್ನೂ ಪಠ್ಯಪುಸ್ತಕಗಳಿಂದ ತೆಗೆಸಿ ಹಾಕಿದರು. ಹಿಂದೂ ರಾಜರು, ಚಕ್ರವರ್ತಿಗಳನ್ನು ಕಡೆಗಣಿಸಿ, ಟಿಪ್ಪು ಮತ್ತು ಮೊಗಲರನ್ನು ವೈಭವೀಕರಿಸಿದರು. ತಮ್ಮ ಸೈದ್ಧಾಂತಿಕ ಕಾರ್ಯಸೂಚಿಗೆ ಹೊಂದದ ವ್ಯಕ್ತಿಗಳು ಮತ್ತು ವಿಷಯಗಳನ್ನು ನಿರ್ದಾಕ್ಷಿಣ್ಯವಾಗಿ ಕಿತ್ತು ಹಾಕಿದರು' ಎಂದು ಅವರು ಹೇಳಿದರು.

ಜಿ.ಎಸ್.ಮುಡಂಬಡಿತ್ತಾಯ, ಬರಗೂರು ರಾಮಚಂದ್ರಪ್ಪ ಮತ್ತು ರೋಹಿತ್ ಚಕ್ರತೀರ್ಥ ನೇತೃತ್ವದ ಪರಿಷ್ಕರಣಾ ಸಮಿತಿಗಳು ಸಮಾಜ ವಿಜ್ಞಾನ ಮತ್ತು ಕನ್ನಡ ಭಾಷಾ ಪಠ್ಯಗಳ ಪರಿಷ್ಕರಣೆ, ಮರು ಪರಿಷ್ಕರಣೆ, ಅವುಗಳಲ್ಲಿ ಆಗಿರುವ ವ್ಯತ್ಯಾಸಗಳ ಪ್ರಮುಖ ಅಂಶಗಳ ಒಳಗೊಂಡ ಹೊತ್ತಗೆಯನ್ನು ಸಚಿವ ಅಶೋಕ ಬಿಡುಗಡೆ ಮಾಡಿದರು. ಸಚಿವರಾದ ಸಿ.ಸಿ.ಪಾಟೀಲ, ಭೈರತಿ ಬಸವರಾಜ, ಶಿವರಾಂ ಹೆಬ್ಬಾರ್ ಸುದ್ದಿಗೋಷ್ಠಿಯಲ್ಲಿ ಇದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್

ಮರುವಿಂಗಡಣೆ ಕರಡು ಪ್ರಕಟ

ಪ್ರಜಾವಾಣಿ ವಾರ್ತೆ

'ಕೈ' ಶಾಸಕರ ಕ್ಷೇತ್ರದಲ್ಲಿ ವಾರ್ಡ್ ಕಡಿತ

ಕಾಂಗ್ರೆಸ್ ಶಾಸಕರು ಪ್ರತಿನಿಧಿಸುವ ಮೂರು ಕ್ಷೇತ್ರಗಳಲ್ಲಿ ತಲಾ ಒಂದೊಂದು ವಾರ್ಡ್‌ಗಳನ್ನು ಕೈಬಿಡಲಾಗಿದೆ. ಶಿವಾಜಿನಗರ, ಚಾಮರಾಜಪೇಟೆ ಮತ್ತು ಜಯನಗರ ಕ್ಷೇತ್ರಗಳಲ್ಲಿ ತಲಾ ಏಳು ವಾರ್ಡ್‌ಗಳಿದ್ದವು. ಅವುಗಳನ್ನು ತಲಾ ಆರಕ್ಕೆ ಇಳಿಕೆ ಮಾಡಲಾಗಿದೆ. ಬಿಜೆಪಿ ಶಾಸಕರು ಪ್ರತಿನಿಧಿಸುವ ಬಹುತೇಕ ಕ್ಷೇತ್ರಗಳಲ್ಲಿ ವಾರ್ಡ್‌ಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳ ಮಾಡಲಾಗಿದೆ.

ಬೆಂಗಳೂರು: ಎಂಟು ವಾರದೊಳಗೆ ಬಿಬಿಎಂಪಿ ಚುನಾವಣೆಗೆ ಅಧಿಸೂಚನೆ ಹೊರಡಿಸುವಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶದಿಂದ ಎಚ್ಚೆತ್ತುಕೊಂಡ ರಾಜ್ಯ ಸರ್ಕಾರ, ಚುನಾವಣೆಗೆ ಪೂರಕವಾಗಿ ವಾರ್ಡ್‌ಗಳ ಮರು ವಿಂಗಡಣೆಯ ಕರಡನ್ನು ಕೊನೆಗೂ ಪ್ರಕಟಿಸಿದೆ.

ಬಿಬಿಎಂಪಿಯ 8 ವಲಯಗಳ ವ್ಯಾಪ್ತಿಯೊಳಗೇ ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಏರಿಕೆ ಮಾಡಲಾಗಿದೆ. 2001ರಿಂದ 2011ರ ಅವಧಿಯಲ್ಲಿ ಜನಸಂಖ್ಯೆ ಶೇ 44ರಷ್ಟು ಹೆಚ್ಚಳವಾಗಿದೆ. 2011ರ ಜನಗಣತಿ ಪ್ರಕಾರ ಜನಸಂಖ್ಯೆ 84,43,675 ಇತ್ತು. ಈ ಜನಸಂಖ್ಯೆಯನ್ನೇ ಆಧರಿಸಿ ವಾರ್ಡ್‌ಗಳ ಮರುವಿಂಗಡಣೆಯನ್ನು ಬಿಬಿಎಂಪಿ ಮಾಡಿದೆ.

198 ವಾರ್ಡ್‌ಗಳಿದ್ದಾಗ ಕೆಲ ವಾರ್ಡ್‌ಗಳಲ್ಲಿ ಕಡಿಮೆ ಜನಸಂಖ್ಯೆ ಇದ್ದರೆ, ಕೆಲವು ವಾರ್ಡ್‌ಗಳಲ್ಲಿ ಜಾಸ್ತಿ ಜನಸಂಖ್ಯೆ ಇತ್ತು. ಈ ಅಸಮಾನತೆ ಸರಿಪಡಿಸಿ ವಾರ್ಡ್‌ಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ ಎಂದು ಬಿಬಿಎಂಪಿ ಹೇಳಿದೆ.

ವಿಧಾನಸಭಾ ಕ್ಷೇತ್ರ, ವಾರ್ಡಿನ ವಿಸ್ತೀರ್ಣ, ಸೇವಾ ಸೌಲಭ್ಯಗಳ ನಿರ್ವಹಣೆ, ಸರಳ ಆಡಳಿತಾತ್ಮಕ ಅನುಕೂಲತೆಗಳನ್ನು ಗಮನದಲ್ಲಿ ಇಟ್ಟುಕೊಂಡು ವಾರ್ಡ್ ವಿಂಗಡಣೆ ಮಾಡಲಾಗಿದೆ. ವಿಂಗಡಣೆಯಾದ ವಾರ್ಡ್ ಎರಡು ವಿಧಾನಸಭಾ ಕ್ಷೇತ್ರಕ್ಕೆ ಹಂಚಿಕೆಯಾಗದೆ ಒಂದೇ ಕ್ಷೇತ್ರಕ್ಕೆ ಸೀಮಿತ ಇರುವಂತೆ ನೋಡಿಕೊಳ್ಳಲಾಗಿದೆ. ವಾರ್ಡ್‌ಗಳ ಸಂಖ್ಯೆ ಹೆಚ್ಚಳವಾಗಿದ್ದರೂ, ಪಾಲಿಕೆ ವ್ಯಾಪ್ತಿಯನ್ನು ಮೀರಿಲ್ಲ ಎಂದು ಸ್ಪಷ್ಟಪಡಿಸಿದೆ.

ಈ ಹಿಂದಿದ್ದ ಪಾಲಿಕೆ ಸದಸ್ಯರ ಅವಧಿ 2020ರ ಸೆಪ್ಟೆಂಬರ್‌ಗೆ ಮುಕ್ತಾಯಗೊಂಡಿದ್ದು, ಆಕ್ಷೇಪಣೆ ಸಲ್ಲಿಸಲು ಗುರುವಾರದಿಂದ(ಜೂ.23) 15 ದಿನಗಳ ಕಾಲಾವಕಾಶ ನೀಡಲಾಗಿದೆ.

ಒಳ ಪುಟಗಳು

ಜಿಸ್ಯಾಟ್‌–24 ಉಪಗ್ರಹ ಉಡಾವಣೆ ಯಶಸ್ವಿ 8
ಅಸ್ಸಾಂ ಪ್ರವಾಹ: ಮತ್ತೆ 12 ಮಂದಿ ಸಾವು 8

₹6 ಕೋಟಿ ವೆಚ್ಚ • ವಿವರಣೆ ಕೇಳಿದ ಪ್ರಧಾನಿ ಕಚೇರಿ

ಮೂರೇ ದಿನದಲ್ಲಿ ಕುಸಿದ ರಸ್ತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಭೇಟಿಗಾಗಿ ಬೆಂಗಳೂರಿನಲ್ಲಿ ಅಭಿವೃದ್ಧಿಪಡಿಸಿದ ₹6 ಕೋಟಿ ವೆಚ್ಚದ ರಸ್ತೆ ಮೂರೇ ದಿನದಲ್ಲಿ ಕಿತ್ತುಹೋಗಿದೆ. ಈ ಬಗ್ಗೆ ಸಮಗ್ರ ವರದಿ ನೀಡುವಂತೆ ಕರ್ನಾಟಕ ಸರ್ಕಾರಕ್ಕೆ ಪ್ರಧಾನಿ ಕಚೇರಿ ಗುರುವಾರ ಸಂಜೆ ನಿರ್ದೇಶನ ನೀಡಿದೆ.

₹33 ಸಾವಿರ ಕೋಟಿ ಮೊತ್ತದ ಕಾಮಗಾರಿಗಳ ಉದ್ಘಾಟನೆಗಾಗಿ ಜೂನ್ 20ರಂದು ಪ್ರಧಾನಿ ಅವರು ಬೆಂಗಳೂರಿಗೆ ಬಂದಿದ್ದರು. ಪ್ರಧಾನಿ ಸಾಗುವ ರಸ್ತೆ ಅಭಿವೃದ್ಧಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ₹24 ಕೋಟಿ ವೆಚ್ಚ ಮಾಡಿತ್ತು. ಜ್ಞಾನಭಾರತಿಯ ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಮಿಕ್ಸ್ (ಬೇಸ್) ಕ್ಯಾಂಪಸ್ ಬಳಿ ₹6 ಕೋಟಿ ವೆಚ್ಚದಲ್ಲಿ ರಸ್ತೆ ಡಾಂಬರೀಕರಣ ಮಾಡಲಾಗಿತ್ತು. ಆ ರಸ್ತೆಯ ಕೆಲವು ಭಾಗ ಮೂರೇ ದಿನದಲ್ಲಿ ಕುಸಿದುಹೋಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಬರುವ ಕಾರಣಕ್ಕೆ ರಾಷ್ಟ್ರೀಯ ಕಾನೂನು ಶಾಲೆಯ ಬಳಿ ನಿರ್ಮಿಸಿದ್ದ ಡಾಂಬರು ರಸ್ತೆ ಕುಸಿದಿತ್ತು. ಅದನ್ನು ಅಗೆದು ಪೈಪ್‌ಲೈನ್ ಸರಿಪಡಿಸುವ ಕಾಮಗಾರಿ ಗುರುವಾರ ನಡೆಯಿತು –ಪ್ರಜಾವಾಣಿ ಚಿತ್ರ

'ಪ್ರಧಾನಿ ಸಾಗಿದ ರಸ್ತೆಯ ಸ್ಥಿತಿ ನೋಡಿ. ಇದು ಬಿಬಿಎಂಪಿಯ ಕಳಪೆ ಕಾಮಗಾರಿಗೆ ಸಾಕ್ಷಿ. ಶೇ 40 ಭ್ರಷ್ಟಾಚಾರಕ್ಕೆ ಮತ್ತೊಂದು ಉದಾಹರಣೆ' ಎಂದು ಕುಸಿದ ರಸ್ತೆಯ ಚಿತ್ರವನ್ನು ಟ್ಯಾಗ್ ಮಾಡಿದ್ದ ಕೆಲವರು ಸಾಮಾಜಿಕ ಜಾಲ ತಾಣಗಳಲ್ಲಿ ಟೀಕಿಸಿದ್ದರು. ಈ ಬಗ್ಗೆ ಪ್ರಧಾನಿ ಕಚೇರಿಗೆ ಮಾಹಿತಿ ಹೋಗಿತ್ತು.

7ನೇ ಪುಟ ನೋಡಿ

ಮೈಸೂರು ಭಾಗದಲ್ಲಿ ಭೂಕಂಪನ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಭಾಗದ ಮೈಸೂರು, ಕೊಡಗು, ಹಾಸನ ಮತ್ತು ಮಂಡ್ಯ ಜಿಲ್ಲೆಯ ಕೆಲವೆಡೆ ಗುರುವಾರ ಬೆಳಗಿನ ಜಾವ 4.37ರಲ್ಲಿ ಭೂಕಂಪನದ ಅನುಭವವಾಗಿದೆ. ಜನ ಗಾಬರಿಯಿಂದ ಮನೆಯಿಂದ ಹೊರಗೆ ಓಡಿ ಬಂದರು. ಎಲ್ಲೆಡೆ ಆತಂಕ ಆವರಿಸಿತು.

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಮಾಲುಗೇನಹಳ್ಳಿ ಕಂಪನದ ಕೇಂದ್ರಬಿಂದುವಾಗಿದ್ದು, 40–50 ಕಿ.ಮೀ. ವ್ಯಾಪ್ತಿಯಲ್ಲಿ ಕಂಪನದ ಅನುಭವವಾಗಿದೆ. ರಿಕ್ಟರ್ ಮಾಪನದಲ್ಲಿ 3.4 ರಷ್ಟು ತೀವ್ರತೆ ದಾಖಲಾಗಿದೆ. ದೊಡ್ಡಕಾಡನೂರಿನಲ್ಲಿ ಮಣ್ಣಿನ ಗೋಡೆಯ ಮನೆ ಕುಸಿದಿದ್ದು, ಆಲೂರು ತಾಲ್ಲೂಕಿನ ಕೆಲ ಶಾಲೆ, ಮನೆಗಳ ಗೋಡೆಗಳಲ್ಲಿ ಬಿರುಕು ಮೂಡಿದೆ.

ಅರಕಲಗೂಡು ಪಟ್ಟಣ, ತಾಲ್ಲೂಕಿನ ಮುದ್ದನಹಳ್ಳಿ, ಹನೆಮಾರನಹಳ್ಳಿ, ಕಾರಳ್ಳಿ, ಹೊಳೆನರಸೀಪುರ ತಾಲ್ಲೂಕಿನ ಚಿಟ್ನಳ್ಳಿ, ಹೌಸಿಂಗ್ ಬೋರ್ಡ್, ಆಲೂರು ತಾಲ್ಲೂಕಿನ ಕೆ.ಹೊಸಕೋಟೆ ಹೋಬಳಿಯಲ್ಲಿ ಭೂಕಂಪನವಾಗಿದೆ.

ಮೈಸೂರು ಜಿಲ್ಲೆಯ ಸಾಲಿಗ್ರಾಮ ಪಟ್ಟಣ, ತಾಲ್ಲೂಕಿನ ತಂದ್ರೆ, ಅಂಕನಹಳ್ಳಿ, ಹೆಬ್ಬೂರಿನಲ್ಲೂ ಭೂಕಂಪನವಾಗಿದೆ. ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿ ಹೋಬಳಿ ವ್ಯಾಪ್ತಿಯ ಕೆಲ ಗ್ರಾಮಗಳು, ಕೊಡಗು ಜಿಲ್ಲೆಯ ಸೋಮವಾರಪೇಟೆ ಪಟ್ಟಣದ ರೇಂಜರ್ ಬ್ಲಾಕ್, ಅಮ್ಮಳ್ಳಿ ಮತ್ತು ನೇಗಳ್ಳೆ ಗ್ರಾಮ, ಮಡಿಕೇರಿ ತಾಲ್ಲೂಕಿನ ದೇವಸ್ತೂರಿನಲ್ಲಿ ಭೂಮಿ ಕಂಪಿಸಿದೆ.

'ಕುವೆಂಪು, ಕೆಂಪೇಗೌಡರ ಪಾಠ ತೆಗೆಸಿದ್ದು ಸಿದ್ದರಾಮಯ್ಯ' 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ಪ್ರದಾನ

ಎಲೆಮರೆ ಸಾಧಕರ ಸಂಗಮ; ಮೂಡಿದ ಧನ್ಯತಾಭಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅವರ ಮೊಗದಲ್ಲಿ ಸಂತಸ ಮೂಡಿತ್ತು. ಎಲೆಮರೆಯ ಕಾಯಿಯಂತೆ ಸಾಮಾಜಿಕ ಕೈಂಕರ್ಯದಲ್ಲಿ ತೊಡಗಿದ್ದ ತಮ್ಮನ್ನು ಗುರುತಿಸಿದ್ದಕ್ಕೆ ಧನ್ಯತಾಭಾವ ವ್ಯಕ್ತಪಡಿಸಿದರು.

ನಗರದ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಸರ್ ಎಂ.ವಿ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ 'ಪ್ರಜಾವಾಣಿ ಸಾಧಕರು–2022' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಸಾಧಕರು ತಾವು ಕೈಗೊಂಡ ಕಾರ್ಯಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಕ್ಕೆ ಹೆಮ್ಮೆ ವ್ಯಕ್ತಪಡಿಸಿದರು.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ (ಕೆಎಸ್‌ಡಿಎಲ್) ಪ್ರಾಯೋಜಕತ್ವ ಹಾಗೂ ಎಫ್‌ಕೆಸಿಸಿಐ ಸಹಯೋಗದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಅನಾಥ ಶವಗಳಿಗೆ ಅಂತ್ಯಸಂಸ್ಕಾರ ನೆರವೇರಿಸುತ್ತಿರುವ ಚನ್ನಪಟ್ಟಣದ ಅಶಾ, ಟೋಕಿಯೊ ಪ್ಯಾರಾಲಿಂಪಿಕ್ಸ್ ಈಜುಪಟು ನಿರಂಜನ್ ಮುಕುಂದನ್, ಅಂತರರಾಷ್ಟ್ರೀಯ ಮಟ್ಟದ 'ಯೋಗ' ಗುರು ಭಾಗೀರಥಿ ಕನ್ನಡತಿ ಸೇರಿದಂತೆ ವಿವಿಧ ಸಾಮಾಜಿಕ, ಶೈಕ್ಷಣಿಕ, ಕ್ರೀಡೆ, ವೈದ್ಯಕೀಯ, ಉದ್ಯಮ, ವಿಜ್ಞಾನ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡವರನ್ನು ಗುರುವಾರ ಗೌರವಿಸಲಾಯಿತು. ಚಪ್ಪಾಳೆಯ ಕರತಾಡನದ ಮೂಲಕ ಗಣ್ಯರು ಮತ್ತು ಸಭಿಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಕುಟುಂಬ ಸದಸ್ಯರು ಈ ಕ್ಷಣಕ್ಕೆ ಸಾಕ್ಷಿಯಾದರು. ತಮ್ಮವರ ಸಾಧನೆಗೆ ಸಿಕ್ಕ ಗೌರವವನ್ನು ಕಣ್ತುಂಬಿಕೊಂಡು ಸಂಭ್ರಮಿಸಿದರು.

ತೆರೆಮರೆಯಲ್ಲಿ ಕೈಗೊಂಡಿದ್ದ ಕಾರ್ಯಗಳನ್ನು 'ಪ್ರಜಾವಾಣಿ' ಗುರುತಿಸಿ ಪ್ರೋತ್ಸಾಹಿಸಿದೆ. 'ಇದರಿಂದಾಗಿ, ನಮ್ಮ ಮೇಲಿನ ಜವಾಬ್ದಾರಿ ಮತ್ತಷ್ಟು ಹೆಚ್ಚಾಗಿದೆ. ಈ ಕಾರ್ಯಗಳನ್ನು ಮುಂದುವರಿಸುವ ಇಚ್ಛಾಶಕ್ತಿಯನ್ನು ಬಲಪಡಿಸಿದೆ ಎನ್ನುವುದು ಪ್ರಶಸ್ತಿ ಪುರಸ್ಕೃತರ ಅಭಿಮತವಾಗಿತ್ತು.

ಬೆಂಗಳೂರು, ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ, ರಾಮನಗರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಒಟ್ಟು 22 ಜನರಿಗೆ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

'ಇನ್ನಷ್ಟು ಸಾಧನೆಗೆ ಪ್ರೇರಣೆ: ನಟ ನಾಗಭೂಷಣ್ ಮಾತನಾಡಿ, 'ಹಲವು ಸಾಧಕರು ಬೆಳಕಿಗೆ ಬರುವುದು ಕಡಿಮೆ. ಸಾಧನೆಯನ್ನು ಗುರುತಿಸುವವರು ಸಹ ಕಡಿಮೆ. ಶಾಲೆ ಸೇರುವ ಮೊದಲು ರ‍್ಯಾಂಕ್ ಬಗ್ಗೆ ಯೋಚಿಸುವ ಸಮಾಜ ಇದು. ಹಲವರ ಸಾಧನೆಯನ್ನು ಮುತ್ತಪಟ್ಟ ಮೇಲೆಯೇ ಗುರುತಿಸಲಾಗಿದೆ. ಜೀವಿತಾವಧಿಯಲ್ಲಿ ಗುರುತಿಸುತ್ತಿರುವುದು 'ಇನ್ನೂಬ್ಬರಿಗೂ ಪ್ರೇರಣೆಯಾಗಲಿದೆ' ಎಂದರು.

'ನಾನು ಸರ್ಕಾರಿ ಶಾಲೆಯಲ್ಲಿ ಓದಿದವನು. ಕಲಿತ ಜ್ಞಾನವನ್ನು ಇನ್ನೊಬ್ಬರಿಗೆ ದಾಟಿಸುವುದು ಮುಖ್ಯ. ಮಾನವೀಯ ಗುಣಗಳಿರುವ ಸಾಧಕರನ್ನು ಗುರುತಿಸಲಾಗಿದೆ. ಅನಾಥ ಶವಗಳಿಗೆ ಸಂಸ್ಕಾರ ನೀಡುವುದು ಸಹ ಶ್ಲಾಘನೀಯ' ಎಂದರು. 'ನಾವು ಮುಂದಿನ ಪೀಳಿಗೆಗೆ ಯಾವ ರೀತಿಯ ಪರಿಸರ ಬಿಟ್ಟು ಹೋಗುತ್ತೇವೆ ಎನ್ನುವುದು ಮುಖ್ಯ. ಹೀಗಾಗಿ, ಸುಸ್ಥಿರ ಅಭಿವೃದ್ಧಿಯತ್ತ ಗಮನ ಹರಿಸಬೇಕಾಗಿದೆ. ಮೈಸೂರು ಸ್ಯಾಂಡಲ್ ಸಾಬೂನು ಜಗದ್ವಿಖ್ಯಾತಿ ಹೊಂದಬೇಕು ಎನ್ನುವುದು ನನ್ನ ಬಯಕೆ' ಎಂದರು.

ನಗರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ 'ಪ್ರಜಾವಾಣಿ ಸಾಧಕರು–2022' ಪ್ರಶಸ್ತಿ ಪುರಸ್ಕೃತರನ್ನು ಸನ್ಮಾನಿಸಲಾಯಿತು. ಕೆಎಸ್‌ಡಿಎಲ್ ಅಧ್ಯಕ್ಷ ಮತ್ತು ಶಾಸಕ ಕೆ. ಮಾಡಾಳ್ ವಿರೂಪಾಕ್ಷಪ್ಪ, ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್, ಎಫ್‌ಕೆಸಿಸಿಐ ಅಧ್ಯಕ್ಷ ಡಾ. ಐ.ಎಸ್. ಪ್ರಸಾದ್, ನಟ ನಾಗಭೂಷಣ್, ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಮತ್ತು ಡೆಪ್ಯುಟಿ ಎಡಿಟರ್ ಎಂ. ನಾಗರಾಜ ಇದ್ದರು. ಪ್ರಜಾವಾಣಿ ಚಿತ್ರ

ಕೋವಿಡ್ ಸಂದರ್ಭದಲ್ಲಿ ಮೃತರ ಅಂತ್ಯಸಂಸ್ಕಾರಕ್ಕೆ ಕುಟುಂಬದ ಸದಸ್ಯರೇ ನಿರಾಕರಿಸಿದ ಪ್ರಸಂಗಗಳು ನಡೆದಿವೆ. ಆದರೆ, ಕೋವಿಡ್ ಸಂದರ್ಭದಲ್ಲೇ 'ಇಕ್ಕಟ್' ಸಿನಿಮಾ ತಯಾರಿಸಿದ್ದೆ. ಅದು ಕೆಲವರ ಮೊಗದಲ್ಲಿ ಸಂತಸ ಮೂಡಿಸಿದ್ದು ನನಗೆ ಹೆಮ್ಮೆಯ ಕ್ಷಣವಾಗಿತ್ತು

ನಾಗಭೂಷಣ್ ಚಲನಚಿತ್ರ ನಟ

'ಸಮಾಜ ಸೇವೆ ನಿಜವಾದ ಸಾಧನೆ'

'ನನ್ನ ಸಾಧನೆಯ ಹಿಂದೆ 40 ಸ್ವಯಂ ಸೇವಕರು ಇದ್ದಾರೆ. ಸಾಮಾನ್ಯವಾಗಿ ಸ್ಮಾರಕಗಳನ್ನು ಗುರುತಿಸಲಾಗುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ದಿನ ಬೆಳಗಾಗುವುದರೊಳಗೆ ಸ್ಮಾರಕಗಳನ್ನು ಸ್ವಚ್ಛಗೊಳಿಸುತ್ತಾರೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸಮಾಜ ಸೇವೆ ಮಾಡುವುದು ನಿಜವಾದ ಸಾಧನೆ.

ರವಿ ಮಡೋಡಿ, ಬೆಂಗಳೂರು

'ನೇತ್ರದಾನದ ಬಗ್ಗೆ ಅರಿವಿನ ಕೊರತೆ'

'ಎಷ್ಟೋ ಜನರಿಗೆ ನೇತ್ರದಾನದ ಬಗ್ಗೆ ಅರಿವಿಲ್ಲ. ಕಣ್ಣಿಗೆ ಗಾಯವಾಗುವುದು, ಅಪಘಾತ, ಅನುವಂಶೀಯ ಸಮಸ್ಯೆ ಸೇರಿದಂತೆ ವಿವಿಧ ಕಾರಣಗಳಿಂದ ಕೆಲವರು ದೃಷ್ಟಿ ಕಳೆದುಕೊಳ್ಳುತ್ತಿದ್ದಾರೆ. ಅಂತಹವರಿಗೆ ನೇತ್ರವನ್ನು ದಾನ ಮಾಡಿದಲ್ಲಿ ಸಾವಿನಲ್ಲೂ ಸಾರ್ಥಕತೆ ಕಾಣಲು ಸಾಧ್ಯ. ನೇತ್ರದಾನಕ್ಕೆ ವಯೋಮಿತಿಯ ನಿರ್ಬಂಧವಿಲ್ಲ. ಅಧಿಕ ರಕ್ತದೊತ್ತಡ, ಮಧುಮೇಹ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆ ಇರುವವರು ಕೂಡ ನೇತ್ರದಾನಕ್ಕೆ ಅರ್ಹರು. ಒಂದು ಜೊತೆ ನೇತ್ರಗಳು ಇಬ್ಬರಿಗೆ ಸಹಕಾರಿಯಾಗಲಿದೆ. ಚಲನಚಿತ್ರ ನಟ ಪುನೀತ್ ರಾಜ್‌ಕುಮಾರ್ ಅವರ ನೇತ್ರಗಳು ನಾಲ್ವರಿಗೆ ದೃಷ್ಟಿ ನೀಡಿದೆ.

ಗಾಯತ್ರಿ ನಾರಾಯಣ್, ತುಮಕೂರು

ಅಡಿಕೆ ಸಂಶೋಧನೆಗೆ ಉತ್ತೇಜನ: ಮಾಡಾಳ್ ವಿರೂಪಾಕ್ಷಪ್ಪ



'ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲೂ ಪ್ರಜಾವಾಣಿ ತನ್ನದೇ ಆದ ಛಾಪು ಮೂಡಿಸಿ ವೇಗವಾಗಿ ಬೆಳೆಯುತ್ತಿದೆ. ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವವರನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವ 'ಪ್ರಜಾವಾಣಿ' ಕಾರ್ಯ ಶ್ಲಾಘನೀಯ. ಸಾಲು ಮರದ ತಿಮ್ಮಕ್ಕ ಅವರ ಕಾರ್ಯವನ್ನು ಗುರುತಿಸದೇ ಇದ್ದಿದ್ದರೆ ಅವರ ಪರಿಚಯವೇ ಆಗುತ್ತಿರಲಿಲ್ಲ. ಹೀಗಾಗಿ, ಅಪರೂಪದ ಸಾಧಕರನ್ನು ರಾಜ್ಯಕ್ಕೆ ಪರಿಚಯಿಸುವ ಮೂಲಕ ಉತ್ತಮ ಕಾರ್ಯ ಕೈಗೊಳ್ಳಲಾಗಿದೆ' ಎಂದು ಚನ್ನಗಿರಿ ಶಾಸಕ ಮತ್ತು ಕೆಎಸ್‌ಡಿಎಲ್ ಅಧ್ಯಕ್ಷ ಕೆ. ಮಾಡಾಳ್ ವಿರೂಪಾಕ್ಷಪ್ಪ ಪ್ರಶಂಸೆ ವ್ಯಕ್ತಪಡಿಸಿದರು.

'ರಾಜ್ಯದಲ್ಲಿ ಅಡಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಅಡಿಕೆಯಿಂದ ಹಲವಾರು ಉತ್ಪನ್ನಗಳನ್ನು ತಯಾರಿಸಬಹುದು. ಈ ಬಗ್ಗೆ ಸಂಶೋಧನೆ ಕೈಗೊಂಡಿರುವ ಸಾಧಕರ ಕಾರ್ಯ ಶ್ಲಾಘನೀಯ. ಅಡಿಕೆ ಸಂಶೋಧನೆಗಳಿಗೆ ಸರ್ಕಾರದ ವತಿಯಿಂದ ಎಲ್ಲ ರೀತಿಯ ಸಹಕಾರ ಮತ್ತು ಪ್ರೋತ್ಸಾಹ ನೀಡಲಾಗುವುದು. ತಂಬಾಕು ನಿಷೇಧವಾದರೆ ಅಡಿಕೆ ಬೆಳೆಗಾರರಿಗೆ ಸಮಸ್ಯೆಯಾಗಲಿದೆ ಎನ್ನುವ ಆತಂಕವಿದೆ. ಆದರೆ, ಈ ರೀತಿಯ ಆವಿಷ್ಕಾರಗಳಿಂದ ಅಡಿಕೆ ಬೆಳೆಗಾರರಿಗೆ ಅನುಕೂಲವಾಗಲಿದೆ' ಎಂದು ವಿವರಿಸಿದರು.

'ಸಾಧಕರ ಸೇವೆ ಮಾಡುವ ಅವಕಾಶವನ್ನು ಕೆಎಸ್‌ಡಿಎಲ್‌ಗೂ ನೀಡಿರುವುದು ಸ್ಮರಣೀಯ ಕಾರ್ಯ' ಎಂದು ಹೇಳಿದರು.

ಪ್ರಸಕ್ತ ಸಾಲಿನ ಪುರಸ್ಕೃತರು...

ಬೆಂಗಳೂರು: ಆರೋಗ್ಯ ಪರಿವೀಕ್ಷಕಿ ಕಲಾವತಿ ಜೆ., ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಪದಕ ಗೆದ್ದ ಪ್ರಿಯಾ ಮೋಹನ್, ಟೋಕಿಯೊ ಒಲಿಂಪಿಕ್ಸ್ ಈಜುಪಟು ಶ್ರೀಹರಿ ನಟರಾಜ್, ಟೋಕಿಯೊ ಪ್ಯಾರಾಲಿಂಪಿಕ್ಸ್ ಈಜುಪಟು ನಿರಂಜನ್ ಮುಕುಂದನ್, ಜೂನಿಯರ್ ಭಾರತ ತಂಡದ ಹಾಕಿ ಆಟಗಾರ ಹರೀಶ ಮುತಗಾರ, ಸ್ತನ ಕ್ಯಾನ್ಸರ್ ಪತ್ತೆಗೆ ಸಾಧನ ಆವಿಷ್ಕಾರ ಮಾಡಿದ ಗೀತಾ ಮಂಜುನಾಥ್, ಅಂತರರಾಷ್ಟ್ರೀಯ ಮಟ್ಟದ 'ಯೋಗ' ಗುರು ಭಾಗೀರಥಿ ಕನ್ನಡತಿ, ಗುಬ್ಬಿ ಲ್ಯಾಬ್ಸ್ ಸಂಸ್ಥಾಪಕ ಎಚ್.ಎಸ್.ಸುಧೀರ, 'ಬೆಂಗಳೂರು ಹುಡುಗರು' ತಂಡ'ದ ಸ್ಥಾಪಕ ಎಸ್. ವಿನೋದ್, ಯಕ್ಷಗಾನ ಪ್ರಸಂಗಗಳನ್ನು ಡಿಜಿಟಲೀಕರಣಗೊಳಿಸಿದ ರವಿ ಮಡೋಡಿ, ಹಾರ್ಟ್ ಟು ಸ್ಟಾರ್ಟ್ ಅರ್ಜುನ ಜೆ.ಸಿ. ಹನುಮಂತ, ನ್ಯಾನೋ ತಂತ್ರಜ್ಞಾನ ಬಳಸಿ ಅಡಕೆಯಿಂದ ಗಾಜು ಸೇರಿದಂತೆ ವಿವಿಧ ಉತ್ಪನ್ನಗಳನ್ನು ಆವಿಷ್ಕಾರ ಮಾಡಿದ ಗುರುಮೂರ್ತಿ ಹೆಗಡೆ, ಹಾವುಗಳ ಚಿಕ್ಕ ನವೋದ್ಯಮದ ಸ್ಥಾಪಕ ರವಿತೇಜ, ಕೋವಿಡ್ ಸಮಯದಲ್ಲಿ ಬೈಕ್‌ನಲ್ಲಿ ನೂರಾರು ಕಿ.ಮೀ. ಸಂಚರಿಸಿ ಕೋವಿಡೇತರ ರೋಗಿಗಳಿಗೆ ಔಷಧ ಒದಗಿಸಿದ ವಿಜ್ಞಾನ ಶಿಕ್ಷಕಿ ದಕ್ಷಿ ರಾಣಿ.

ಚಿಕ್ಕಬಳ್ಳಾಪುರ: ಮಕ್ಕಳಲ್ಲಿ ಸೃಜನಶೀಲ ವ್ಯಕ್ತಿತ್ವ ಬೆಳೆಸಲು ಶ್ರಮಿಸುತ್ತಿರುವ ಶಿಡ್ಲಘಟ್ಟ ತಾಲ್ಲೂಕು ಸಾತಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯ ಶಿಕ್ಷಕ ಎಸ್.ಕಲಾಧರ್.

ರಾಮನಗರ: ಅನಾಥ ಶವಗಳಿಗೆ ಅಂತ್ಯಸಂಸ್ಕಾರ ನೆರವೇರಿಸಿದ ಚನ್ನಪಟ್ಟಣದ ಆಶಾ.

ತುಮಕೂರು: ನೇತ್ರದಾನ, ರಕ್ತದಾನದ ಬಗ್ಗೆ ಅರಿವು ಮೂಡಿಸುತ್ತಿರುವ ಮಧುಗಿರಿಯ ಗಾಯತ್ರಿ ನಾರಾಯಣ್, ಪ್ರತಿ ನಿತ್ಯ 300ರಿಂದ 500 ವಿದ್ಯಾರ್ಥಿಗಳಿಗೆ ಊಟ, ತಿಂಡಿ ಒದಗಿಸುತ್ತಿರುವ ವೆಂಕಟೇಶ್.

ಬೆಂಗಳೂರು ಗ್ರಾಮಾಂತರ: ಅರ್ಧ ಎಕರೆಯಲ್ಲಿ ತೈವಾನ್ ಸೀಬೆ ಬೆಳೆದು ಉತ್ತಮ ಆದಾಯ ಗಳಿಸುತ್ತಿರುವ ದೇವನಹಳ್ಳಿ ಯುವ ರೈತ ಸಂತೋಷ, ಮಾನಸಿಕ ರೋಗಿಗಳು, ಅಂಗವಿಕಲರು, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರ ಪರವಾಗಿ ಕೆಲಸ ಮಾಡುತ್ತ ಬಂದಿರುವವರು ದೊಡ್ಡಬಳ್ಳಾಪುರ ನಗರದ ಅಮಲಿ ನಾಯಕ್.

ಕೋಲಾರ: ಅಂಗನವಾಡಿ ಮತ್ತು ಶಾಲಾ ಮಕ್ಕಳಿಗೆ ಅವರು ಕೋರಿದ ಬಟ್ಟೆ ಕೊಡಿಸುತ್ತಿರುವ ಜಂಗಮಗುರ್ಜೇನಹಳ್ಳಿ ಸರ್ಕಾರಿ ಶಾಲಾ ಶಿಕ್ಷಕ ಎಸ್.ಆರ್. ಧರ್ಮೇಶ್, 'ಮುಬಾರಕ್ ಹೋಟೆಲ್' ಮೂಲಕ ಬಡವರು ಹಾಗೂ ಕೂಲಿ ಕಾರ್ಮಿಕರಿಗೆ ನಿತ್ಯವೂ ಉಚಿತವಾಗಿ ಊಟ ಕೊಡುತ್ತಿರುವ ಬಂಗಾರಪೇಟೆಯ ಸಯ್ಯದ್ ಅಫ್ಸರ್ ಪಾಷಾ.

'ಸಾಧಕರು ಮತ್ತಷ್ಟು ಕೊಡುಗೆ ನೀಡಲಿ'

'ಸಾಧಕರು ನಿರಂತರವಾಗಿ ಸಮಾಜಕ್ಕೆ ಕೊಡುಗೆ ನೀಡಲಿ. ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವವರನ್ನು ಪ್ರಜಾವಾಣಿ ಗುರುತಿಸುತ್ತಿರುವುದು ಶ್ಲಾಘನೀಯ' ಎಂದು ಎಫ್‌ಕೆಸಿಸಿಐ ಅಧ್ಯಕ್ಷ ಡಾ. ಐ.ಎಸ್. ಪ್ರಸಾದ್ ಮೆಚ್ಚುಗೆ ವ್ಯಕ್ತಪಡಿಸಿದರು.

'ಅನೇಕ ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿದ್ದೇ. ಲಯನ್ಸ್ ಸಂಸ್ಥೆ ಮೂಲಕ 1.5 ಲಕ್ಷ ಜನರಿಗೆ ನೇತ್ರ ಶಸ್ತ್ರಚಿಕಿತ್ಸೆ ಮತ್ತು 11 ಸಾವಿರ ಜನರಿಗೆ ಕಾರ್ನಿಯಾ ಚಿಕಿತ್ಸೆ ಕೈಗೊಳ್ಳಲಾಗಿದೆ. ಇದೇ ರೀತಿ ಕ್ಯಾನ್ಸರ್ ಫೌಂಡೇಶನ್ ಮೂಲಕವೂ ಹಲವು ರೋಗಿಗಳಿಗೆ ನೆರವು ನೀಡಿದ್ದೇವೆ' ಎಂದು ವಿವರಿಸಿದರು.

ಇಂದು 'ಸಪ್ತ ರಂಗ್‌–2022'

ಪ್ರಜಾವಾಣಿ ವಾರ್ತೆ

ಯಲಹಂಕ: ಹೆಬ್ಬಾಳದ ಎಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಜೂನ್ 24 ಮತ್ತು 25ರಂದು ಅಂತರಕಾಲೇಜು ಸಾಂಸ್ಕೃತಿಕ ಉತ್ಸವ 'ಸಪ್ತ ರಂಗ್‌–2022' ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಪ್ರಾಂಶುಪಾಲ ಡಾ.ಟಿ.ಎನ್. ಶ್ರೀನಿವಾಸ್ ತಿಳಿಸಿದ್ದಾರೆ.

ಉತ್ಸವದಲ್ಲಿ ನಗರದ 20ಕ್ಕೂ ಹೆಚ್ಚು ತಾಂತ್ರಿಕ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ಶಾಸ್ತ್ರೀಯ ನೃತ್ಯ, ಸಮೂಹ ನೃತ್ಯ, ಮೆಹಂದಿ ಸೇರಿದಂತೆ 20ಕ್ಕೂ ಹೆಚ್ಚು ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಚಿತ್ರನಟ ಶ್ರೇಯಸ್ ಮಂಜು, ಚಿತ್ರನಟ ರಿಷ್ಯ ನಾಣಯ್ಯ, ಎಟ್ರಿಯಾ ಶಿಕ್ಷಣ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಶಮೀನ್ ರೆಹಮಾನ್ ಅವರು ಭಾಗವಹಿಸಲಿದ್ದಾರೆ.

ಜುಲೈ 1ರಿಂದ ಅನಿರ್ದಿಷ್ಟ ಮುಷ್ಕರ: ಪೌರ ಕಾರ್ಮಿಕರ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಎಲ್ಲ ಪೌರಕಾರ್ಮಿಕರ ಕೆಲಸಗಳನ್ನು ಕಾಯಂಗೊಳಿಸದಿದ್ದರೆ ಜುಲೈ 1ರಿಂದ ಅನಿರ್ದಿಷ್ಟ ಕಾಲ ಮುಷ್ಕರ ನಡೆಸಲಾಗುವುದು ಎಂದು ಸಫಾಯಿ ಕರ್ಮಚಾರಿ ಹಾಗೂ ಪೌರಕಾರ್ಮಿಕರ ಸಂಘ ಎಚ್ಚರಿಕೆ ನೀಡಿದೆ.

'ಈಗಿನ ವ್ಯವಸ್ಥೆಯಲ್ಲಿ ಸರ್ಕಾರಿ ಅನುದಾನಿತ ಗುಲಾಮರಂತೆ ಕೆಲಸ ಮಾಡಬೇಕಿದೆ. ಆರೋಗ್ಯ ಸುರಕ್ಷೆ, ಕುಡಿಯುವ ನೀರು, ಹೆರಿಗೆ ರಜಾ, ಶೌಚಾಲಯಗಳನ್ನು ಬಳಸುವ ಅವಕಾಶವನ್ನು ಪೌರಕಾರ್ಮಿಕರಿಗೆ ನೀಡಬೇಕೆಂದು ಪದೇ ಪದೇ ಒತ್ತಾಯಿಸಿದರೂ ನಮ್ಮನ್ನು ಗುತ್ತಿಗೆದಾರರು, ಅಧಿಕಾರಿಗಳು ನಿರ್ಲಕ್ಷಿಸುತ್ತಾ ಬಂದಿದ್ದಾರೆ' ಎಂದು ಗುರುವಾರ ನಗರದಲ್ಲಿ ಪ್ರತಿಭಟನೆ ನಡೆಸಿದ ಸಂಘದ ಸದಸ್ಯರು ಹೇಳಿದರು.

ಸದ್ಯಕ್ಕೆ ಬಹುತೇಕ ಪೌರಕಾರ್ಮಿಕರು ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಸುರಕ್ಷಾ ಪರಿಕರಗಳಿಲ್ಲ, ವೃತ್ತಿಯ ಘನತೆಯೂ ಇಲ್ಲ. ಸುರಕ್ಷಾ ಪರಿಕರಗಳು ಬೇಕೆಂದು ಹಾಗೂ ಗುತ್ತಿಗೆ ಪದ್ಧತಿ ರದ್ದತಿಗೆ ಆಗ್ರಹಿಸಿ ಈ ಹಿಂದೆ ನಡೆಸಿದ ಪ್ರತಿಭಟನೆಗಳನ್ನು ಕೂಡ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಲಿಲ್ಲ. ಮಕ್ಕಳ ಶಿಕ್ಷಣಕ್ಕೆ ನೆರವು ನೀಡುವ ಖಾತರಿಯೂ ದೊರೆಯುತ್ತಿಲ್ಲ ಎಂದು ಪ್ರತಿಭಟನಾನಿರತರು ದೂರಿದರು.

ಕುಟುಂಬಕ್ಕೆ ಅನ್ನ ಕೆಲಸ ಮಾಡುವವರು ಕೋವಿಡ್‌ನಿಂದ ವೈಯಕ್ತಿಕ ಪರಿಣಾಮಗಳನ್ನು ಎದುರಿಸಿದ್ದಾರೆ. ವೈದ್ಯಕೀಯ ವೆಚ್ಚ ಏರುತ್ತಿರುವ ಈ ದಿನಗಳಲ್ಲಿ, ನಾಗರಿಕರು ಕೂಡ ಪೌರಕಾರ್ಮಿಕರನ್ನು ಕೆಟ್ಟದಾಗಿ ನೋಡುತ್ತಿದ್ದಾರೆ. ಅವರನ್ನು ಕೊಳಕರು ಎಂಬ ದೃಷ್ಟಿಯಿಂದ ಕಾಣುತ್ತಿದ್ದಾರೆ. ವಾರ್ಷಿಕ ಸಂಬಳದಲ್ಲಿ ಏರಿಕೆ ಮಾಡುವ ಭರವಸೆಯೂ ಗೂಣಪ್ರಮಾಣದಲ್ಲಿ ಈಡೇರಿಲ್ಲ ಎಂದೂ ದೂರಿದರು.

ಹಲ್ಲೆಗೆ ಖಂಡನೆ

ಪರಿಷ್ಕೃತ ಪಠ್ಯಪುಸ್ತಕ ವಾಪಸು ಪಡೆಯುವಂತೆ ಆಗ್ರಹಿಸಿ ಇತ್ತೀಚೆಗೆ ನಡೆದ ಪ್ರತಿಭಟನೆ ವೇಳೆ ಖಾಸಗಿ ಯುಟ್ಯೂಬ್ ಚಾನೆಲ್‌ನ ಪತ್ರಕರ್ತನ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ಸಾಮಾಜಿಕ ವೇದಿಕೆ ವತಿಯಿಂದ ನಗರದ ಫ್ರೀಡಂ ಪಾರ್ಕ್‌ನಲ್ಲಿ ಗುರುವಾರ ಪ್ರತಿಭಟನೆ ನಡೆಯಿತು ಪ್ರಜಾವಾಣಿ ಚಿತ್ರ



PVR CINEMAS (Phoenix Market City, Forum Mall, Orion Mall, Orion Uptown Mall, Spirit Mall, VR Mall, Vaishnavi Saphire Mall, Vega City Mall, The Cinema @ GT Mall, The Aura, Whitefield, Central Mall, JP Nagar, Forum Value Mall, Mantri Mall, Brookefield Mall, Seegehalli, Garuda, Yelahanka, Galleria Mall, Shantiniketan, Sigma Mall, Innovation Mall, Arch Mall, Grand Mall, Legacy Mall, Signature Mall) | INOX (Garuda Mall, Lido, MSR Regalia Mall, Arena Mall, Mall of Asia, Central Mall, Binny Mall, Konanakunte) | CINEPOLIS (Royal Meenakshi Mall, ETA Mall, East Orion Mall, SJR Spectrum Mall, Nexus Shantiniketan) | GOPALAN | INNOVATIVE MULTIPLEX (Marathahalli) | ROCKLINE CINEMA (Peenya) | KINO CINEMAS (Kadugodi) | SWAGATH SHANKARNAG | ABHINAY THEATRE (KG Road) | ANAND THEATRE (Tanny Road) | SANTOSH THEATRE (RPC Layout) | VINAYAKA THEATRE (D J Halli) | BALAJI THEATRE (Chikkakallasandra) | HMT (Jalhalli) | CINEPOLIS (City Centre Mall, Mangalore) | PVR CINEMAS (Fiza Mall, Mangalore, Garuda Mall, Mysore) | INOX (Central, Manipal) | Satyam Mall, Mysore | BHARATH CINEMAS (Mangalore) | DRC CINEMAS (Mysore) | STERLING (Mysore) | MOVIETIME (Davangere) | VASANTHA (Davangere) | BALA (Hospete) | RAGAVENDRA (Bellary)

farnazfever

ವೃಂದಾವನ ವಿವಾದ: ಭಕ್ತರ ಆಕ್ರೋಶ

ಕಲಬುರಗಿ: 'ಮಾಧ್ವ ಸಂಪ್ರದಾಯದ ಜಯತೀರ್ಥರ ಸಮಾಧಿ (ಮೂಲ ವೃಂದಾವನ) ಸೇಡಂ ತಾಲ್ಲೂಕಿನ ಮಳಖೇಡದಲ್ಲಿದ್ದೂ ಮಂತ್ರಾಲಯ ಮಠದವರು ಆನೆಗೊಂದಿಯಲ್ಲಿದೆ ಎನ್ನುವ ಮೂಲಕ ಕಲ್ಯಾಣ ಕರ್ನಾಟಕದ ಮಾಧ್ವಭಕ್ತರ ಭಾವನೆಗಳಿಗೆ ನೋವುಂಟು ಮಾಡಿದ್ದಾರೆ' ಎಂದು ಆರೋಪಿಸಿ ಜಯತೀರ್ಥರ ಭಕ್ತವೃಂದ ದವರು ಗುರುವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

'ಗಂಗಾವತಿಯ ಆನೆಗೊಂದಿ ಸಮೀಪದ ನವವೃಂದಾವನ ಗಡ್ಡೆಯಲ್ಲಿನ ರಘುವರ್ಯತೀರ್ಥರ ಸಮಾಧಿಯನ್ನು ಜಯತೀರ್ಥರ ಸಮಾಧಿಯೆಂದು ಬಿಂಬಿಸಿ ಹೇಳಿಕೆ ನೀಡಿ, ಜಯತೀರ್ಥರ ಆರಾಧನೆ ವೃಂದಾವನದಲ್ಲೇ ಆಚರಿಸುವುದಾಗಿ ಮಂತ್ರಾಲಯ ಮಠದ ಶ್ರೀಗಳು ಘೋಷಿಸಿದ್ದು ಕಲ್ಯಾಣ ಕರ್ನಾಟಕದ ಮಾಧ್ವ ವರ್ಗದವರಿಗೆ ಘಾಸಿಗೊಳಿಸಿದೆ' ಎಂದು ಭಕ್ತರು ಅಸಮಾಧಾನ ವ್ಯಕ್ತಪಡಿಸಿದರು.

ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ರಾಜ್ಯ ಕುಂಚಿಟಿಗ–ಒಕ್ಕಲಿಗರಸಂಘವು 2022–23ನೇ ಶೈಕ್ಷಣಿಕ ಸಾಲಿನ ಬಾಲಕರ ವಸತಿನಿಲಯಕ್ಕೆ ಅರ್ಜಿ ಆಹ್ವಾನಿಸಿದೆ. ಪಿಯುಸಿ, ಡಿಪ್ಲೊಮಾ, ಪದವಿ, ಇತರ ಉನ್ನತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಜೂನ್ 30ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ 9945043754 ಸಂಪರ್ಕಿಸಬೇಕು.

ಸ್ಮಶಾನಕ್ಕೆ ಜಾಗ: ಆದೇಶ ಜಾರಿಯಾಗದ ಪ್ರಕರಣ

ನ್ಯಾಯಾಂಗ ನಿಂದನೆ ಪ್ರಕ್ರಿಯೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶವ ಸಂಸ್ಕಾರಕ್ಕೆ ಜಾಗವಿಲ್ಲದ ಗ್ರಾಮ ಮತ್ತು ಪಟ್ಟಣ ಪ್ರದೇಶಗಳಿಗೆ ಜಮೀನು ಒದಗಿಸುವಂತೆ ಸೂಚಿಸಿರುವ ಆದೇಶವನ್ನು ಪಾಲನೆ ಮಾಡಿಲ್ಲ ಎಂಬ ಕಾರಣಕ್ಕೆ ರಾಜ್ಯ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳ ವಿರುದ್ಧ ನ್ಯಾಯಾಂಗ ನಿಂದನೆಯ ಆರೋಪ ನಿಗದಿಪಡಿಸಲು ಹೈಕೋರ್ಟ್ ನಿರ್ಧರಿಸಿದೆ.

ಈ ಕುರಿತಂತೆ ನಗರದ ಮೊಹಮ್ಮದ್ ಇಕ್ಬಾಲ್ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ವಿರುದ್ಧ ಇದೇ 30ರಂದು ನ್ಯಾಯಾಂಗ ನಿಂದನೆ ಪ್ರಕರಣದಡಿ ಆರೋಪ ನಿಗದಿಪಡಿಸುವ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ತಿಳಿಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ನ್ಯಾಯಪೀಠಕ್ಕೆ ಮೆಮೊ ಸಲ್ಲಿಸಿ, 'ರಾಜ್ಯದಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲ. ಹಾಗಾಗಿ ಖಾಸಗಿಯವರ ಜಮೀನನ್ನು ಖರೀದಿಸಲು ಯೋಜನೆ ರೂಪಿಸಲಾಗಿದೆ. ಆದರೆ, ಸ್ಮಶಾನಕ್ಕೆ ಜಮೀನು ನೀಡಲು ಸಾರ್ವಜನಿಕರು ಉತ್ಸಾಹ ತೋರುತ್ತಿಲ್ಲ' ಎಂದು ವಿವರಿಸಿದರು.

'ಪ್ರತಿಯೊಂದು ಹಳ್ಳಿಯಲ್ಲೂ ವಿವಿಧ ಧರ್ಮ–ಜಾತಿಯ ಜನರು ತಮ್ಮದೇ ಆದ ವಿಭಿನ್ನ ಆಚರಣೆ ಮತ್ತು ಸಂಪ್ರದಾಯಗಳನ್ನು ಹೊಂದಿದ್ದಾರೆ. ಇದರಿಂದ ಸ್ಮಶಾನಕ್ಕೆ ಜಾಗ ಒದಗಿಸಲು ಕಷ್ಟವಾಗಿದೆ. ಎರಡು ವರ್ಷ ಕಾಲಾವಕಾಶ ನೀಡಿದರೆ 1,428 ಗ್ರಾಮಗಳು ಮತ್ತು ಒಂದು ಪಟ್ಟಣದಲ್ಲಿ ಸ್ಮಶಾನಕ್ಕೆ ಜಾಗ ಒದಗಿಸಲಾಗುವುದು' ಎಂದು ವಿವರಿಸಿದರು.

ಇದನ್ನು ಒಪ್ಪದ ನ್ಯಾಯಪೀಠ, 'ಸರ್ಕಾರ ಈಗಾಗಲೇ ಸಾಕಷ್ಟು ಕಾಲಾವಕಾಶ ಪಡೆದಿದೆ. ನಾವು ಮೌನವಾಗಿದ್ದರೆ ಸರ್ಕಾರ ಇನ್ನೂ 20 ವರ್ಷದಷ್ಟು ಸಮಯ ಕೇಳುತ್ತದೆ. ಹಾಗಾಗಿ, ಮುಂದಿನ ವಿಚಾರಣೆ ವೇಳೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣದಡಿ ಆರೋಪ ನಿಗದಿಪಡಿಸಲಾಗುವುದು' ಎಂದು ತಿಳಿಸಿ ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿತು.

ಮಂಗಳೂರು; ತೈಲ ಸೋರಿಕೆ ಭೀತಿ

ಮಂಗಳೂರು: ಸಮೀಪದ ಬಟ್ಟಪ್ಪಾಡಿಯಲ್ಲಿ ಮುಳುಗುತ್ತಿರುವ ವಿದೇಶಿ 'ಪ್ರಿನ್ಸೆಸ್ ಮಿರಾಲ್' ಹಡಗಿನಿಂದ ತೈಲ ಸೋರಿಕೆ ಯಾಗುವ ಅಪಾಯ ಎದುರಾಗಿದೆ.

ಹಡಗಿನಲ್ಲಿ 160 ಟನ್ ಫರ್ನೆಸ್ ತೈಲ ಮತ್ತು 60 ಟನ್ ಎಂಜಿನ್ ತೈಲ ಇದೆ ಎಂದು ಅಂದಾಜಿಸಲಾಗಿದೆ. ತೈಲ ಸೋರಿಕೆಯಾಗುವ ಸಾಧ್ಯತೆ ಇರುವುದರಿಂದ ನೆರೆಯ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯೂ ಎಚ್ಚರಿಕೆ ಸಂದೇಶ ರವಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

6 ಹಡಗು, 2 ಡಾರ್ನಿಯರ್ ವಿಮಾನಗಳು, ಎರಡು ಸ್ಥಳೀಯ ಹಡಗುಗಳ ಮೂಲಕ ತೈಲ ಸೋರಿಕೆ ಬಗ್ಗೆ ನಿಗಾವಹಿಸಲಾಗುತ್ತಿದೆ. ವಿಶೇಷ ಮಾಲಿನ್ಯ ನಿಯಂತ್ರಣ ನೌಕೆ 'ಐಸಿಜಿಎಸ್ ಸಮುದ್ರ ಪಾವಕ್' ಪೋರ್‌ಬಂದರ್‌ನಿಂದ ಹೊರಟಿದ್ದು, ಜೂನ್ 25ರಂದು ಮಂಗಳೂರು ತಲುಪುವ ಸಾಧ್ಯತೆ ಇದೆ. ಮುಳುಗುತ್ತಿರುವ ಹಡಗಿನ ಸುತ್ತ ನಿರಂತರ ನಿಗಾ ವಹಿಸಲಾಗಿದೆ ಎಂದು ಕೋಸ್ಟ್ ಗಾರ್ಡ್ ಅಧಿಕಾರಿಗಳು ತಿಳಿಸಿದ್ದಾರೆ.

ಈ ಹಡಗು 8 ಸಾವಿರ ಟನ್ ಉಕ್ಕಿನ ಕಾಯಿಲ್‌ಗಳನ್ನು ಚೀನಾದ ಟಿಯಾಂಜಿನ್‌ನಿಂದ ಲೆಬನಾನ್‌ಗೆ ಸಾಗಿಸುತ್ತಿತ್ತು. ಪ್ರಯಾಣದ ವೇಳೆ ಹಡಗಿನ ಒಳಭಾಗದಲ್ಲಿ ಸಣ್ಣ ರಂಧ್ರದ ಮೂಲಕ ನೀರು ಒಳಗೆ ನುಗ್ಗಿತ್ತು. ಅದನ್ನು ದುರಸ್ತಿ ಪಡಿಸುವ ಸಲುವಾಗಿ ಈ ಹಡಗನ್ನು ನವಮಂಗಳೂರು ಬಂದರಿಗೆ ತರಲಾಗುತ್ತಿತ್ತು. ಅರಬ್ಬೀ ಸಮುದ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ತೀರದಿಂದ 5.2 ಮೈಲಿ ದೂರದಲ್ಲಿ ಈ ಹಡಗು ಮಂಗಳವಾರ ಅಲುಗಾಡಲು ಶುರು ಹಾಕಿತ್ತು. ಅದರಲ್ಲಿದ್ದ ಸಿರಿಯಾ ದೇಶದ 15 ನಾವಿಕರನ್ನು ಭಾರತೀಯ ಕರಾವಳಿ ರಕ್ಷಣಾ ಪಡೆ ರಕ್ಷಿಸಿತ್ತು.

ಕೊಮ್ಮಘಟ್ಟ ಮಾದರಿ ಎಲ್ಲೆಡೆ ಬರಲಿ

ಬಾಪೂಜಿನಗರ: ಗುಂಡಿಗಳ ತವರು

ಬಾಪೂಜಿನಗರದಲ್ಲಿ ಕಳೆದ 7–8 ವರ್ಷಗಳಲ್ಲಿ ರಸ್ತೆಗಳಿಗೆ ಟಾರ್ ಹಾಕಿಲ್ಲ. ಚರಂಡಿ ಸ್ವಚ್ಛಗೊಳಿಸದೇ ವರ್ಷಗಳೇ ಕಳೆದಿವೆ. ವಾರ್ಡ್‌ನ ಮಧ್ಯ-ಭಾಗದಲ್ಲಿ ರಾಜಕಾಲುವೆ ಇದ್ದು, ಮಳೆಗಾಲದಲ್ಲಿ ಮನೆಗಳಿಗೆ ಅಲ್ಲಿಂದ ನೀರು ನುಗ್ಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಸರಿಯಾಗಿ ಸ್ಪಂದಿಸಿಲ್ಲ. ನಮ್ಮ ವಾರ್ಡ್ ರಸ್ತೆಗುಂಡಿಗಳ ತವರೂರು ಆಗಿದೆ. ಈ ಭಾಗದಲ್ಲಿ ಸಾರ್ವಜನಿಕ ಶೌಚಾಲಯವಿಲ್ಲ. ಆದ್ದರಿಂದ ಮಹಿಳೆಯರು ಮತ್ತು ಮಕ್ಕಳು ಪೊದೆಗಳನ್ನೆ ಆಶ್ರಯಿಸಿದ್ದಾರೆ. ಇಲ್ಲಿನ ಜನರಿಗೆ ಮೂಲ ಸೌಲಭ್ಯಗಳನ್ನು ಒದಗಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

ಅರ್ಚನಾ.ಕೆ.ಆರ್, ಸ್ಥಳೀಯ ನಿವಾಸಿ



ಬೇಗೂರು ವಾರ್ಡಿನ ಬಸಾಪುರ ಮುಖ್ಯರಸ್ತೆಯ ಚರಂಡಿ ಉಕ್ಕಿ ಹರಿಯುತ್ತಿರುವುದು

ನಿಮ್ಮ ಪ್ರದೇಶದ ಸಮಸ್ಯೆ ತಿಳಿಸಿ

40 ವರ್ಷಗಳಿಂದ ಆಗದ ಅಭಿವೃದ್ಧಿಯನ್ನು 40 ತಿಂಗಳಲ್ಲಿ ಮಾಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸಿದ್ದಾರೆ. ಬೆಂಗಳೂರಿನಲ್ಲಿ ನಿಮ್ಮ ಪ್ರದೇಶದ ಏನೆಲ್ಲಾ ಅಭಿವೃದ್ಧಿ ಬಾಕಿ ಇವೆ, ಜ್ವಲಂತ ಸಮಸ್ಯೆಗಳು ಏನೇನಿವೆ ಎಂಬುದನ್ನು ಸಾರ್ವಜನಿಕರು 'ಪ್ರಜಾವಾಣಿ' ಜತೆ ಹಂಚಿಕೊಳ್ಳಿ. ವಾಟ್ಸ್‌ಆ್ಯಪ್ ಮೂಲಕ ಸಂಕ್ಷಿಪ್ತವಾಗಿ ವಿವರ ಕಳುಹಿಸಿ. ಸಮಸ್ಯೆ ಬರೆಯುವುದರ ಜತೆಗೆ ನಿಮ್ಮದೊಂದು ಪಾಸ್‌ಪೋರ್ಟ್ ಅಳತೆಯ ಫೋಟೊ ಕೂಡ 'ಅಟ್ಯಾಚ್' ಮಾಡಿ ಕಳುಹಿಸಿ.

9606038256

ರಸ್ತೆ ಗುಂಡಿ ಮುಚ್ಚಿ

ಗಂಗಮ್ಮ ಬಡಾವಣೆ ಹಾಗೂ ಬೈರವೇಶ್ವರ ಬಡಾವಣೆಯಲ್ಲಿದ್ದ ರಸ್ತೆಗಳನ್ನು ಅಗೆದು ಎರಡು ವರ್ಷವಾದರೂ ದುರಸ್ತಿಯಾಗಿಲ್ಲ. ರಸ್ತೆಯಲ್ಲಿ ಮಕ್ಕಳು, ವೃದ್ಧರು ಸಾರ್ವಜನಿಕರಿಗೆ ತೊಂದರೆಯಾಗಿದೆ. ನಮಗೆ ಸ್ಮಾರ್ಟ್ ಸಿಟಿಯ ಅವಶ್ಯಕತೆಯಿಲ್ಲ. ರಸ್ತೆಯಲ್ಲಿರುವ ಗುಂಡಿಗಳನ್ನು ಮುಚ್ಚಿದರೆ ಸಾಕು. ಪ್ರಧಾನಿ ಬಂದಾಗ ದೊಡ್ಡ ರಸ್ತೆಗಳು ರಿಪೇರಿ ಆಗಿವೆ. ನಮ್ಮ ಸಣ್ಣ ರಸ್ತೆಗಳ ದುರಸ್ತಿಗೆ ಯಾರನ್ನು ಕರೆಯೋಣ? ಸಂಬಂಧಪಟ್ಟವರು ಈ ಕಡೆ ಗಮನ ಹರಿಸಿ ಸುಗಮ ಸಂಚಾರ ಅವಕಾಶ ಕಲ್ಪಿಸಬೇಕು.

ತಿ.ಮಾ.ಸೋಮೇಶ್ ಗೌಡ, ಸ್ಥಳೀಯ ನಿವಾಸಿ

ಬಸಾಪುರ: ಒಳಚರಂಡಿಯ ಅಲಂಕಾರ

ಬೇಗೂರು ವಾರ್ಡಿನ ಬಸಾಪುರ ಮುಖ್ಯರಸ್ತೆಯ ಯಲ್ಲಮ್ಮ ದೇವಸ್ಥಾನದ ಹತ್ತಿರ ರಸ್ತೆಯ ಒಂದು ಬದಿಯಲ್ಲಿ ಮಾತ್ರ ಚರಂಡಿ ವ್ಯವಸ್ಥೆ ಮಾಡಲಾಗಿದ್ದು. ಸರಿಯಾಗಿ ಮಳೆಯ ನೀರು ರಾಜಕಾಲುವೆಗೆ ತಲುಪದೇ ತಗ್ಗು ಪ್ರದೇಶದ ಮನೆಗಳಿಗೆ ಮೋರಿ ನೀರು ನುಗ್ಗುತ್ತಿದೆ. ಈ ಸಮಸ್ಯೆಯು ಹತ್ತು ವರ್ಷಗಳಿಂದ ಇದ್ದು, ರಸ್ತೆ ವಿಸ್ತರಣೆಯಾಗಿದೆ. ಆದರೆ ಚರಂಡಿ ವ್ಯವಸ್ಥೆ ಹದಗೆಟ್ಟಿದೆ. ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಚರಂಡಿ ನೀರು ಸರಾಗವಾಗಿ ಹರಿಯಲು ಸಾಧ್ಯವಾಗುವಂತೆ ತಾತ್ಕಾಲಿಕ ಪರಿಹಾರ ಒದಗಿಸಿ ಚರಂಡಿ ನೀರು ರಾಜಕಾಲುವೆಗೆ ಹರಿಯುವಂತೆ ಮಾಡಬೇಕು.

ಸಂತೋಷ ಆರ್, ಸ್ಥಳೀಯ ನಿವಾಸಿ

ಮಿದುಳಿನ ನರಕೋಶಗಳಿಗೆ ಹಾನಿ ಮಾಡುವ ಹಂಟಿಂಗ್ಟನ್ ಕಾಯಿಲೆ ಬಗ್ಗೆ ಆರೋಗ್ಯ ಇಲಾಖೆಯು ನಗರದಲ್ಲಿ ಗುರುವಾರ ಜಾಗೃತಿ ಮೂಡಿಸಿತು. ಆರೋಗ್ಯ ಭವನವನ್ನು ನೀಲಿ ಮತ್ತು ನೇರಳೆ ಬಣ್ಣದಿಂದ ಬೆಳಗಿಸಲಾಯಿತು.

'ಬಂದೂಕು ಕೊಂಡೊಯ್ಯುವ ಹಕ್ಕಿದೆ'

ವಾಷಿಂಗ್ಟನ್ (ಎಎಫ್‌ಪಿ): ಸಾರ್ವಜನಿಕ ಸ್ಥಳಗಳಲ್ಲಿ ಬಂದೂಕುಗಳನ್ನು ಕೊಂಡೊಯ್ಯುವ ಮೂಲಭೂತ ಹಕ್ಕು ಅಮೆರಿಕದ ನಾಗರಿಕರಿಗೆ ಇದೆ ಎಂದು ಅಲ್ಲಿನ ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಅಮೆರಿಕದ ವಿವಿಧ ನಗರಗಳಲ್ಲಿ ಗುಂಡು ಹಾರಾಟ ಪ್ರಕರಣಗಳು ನಡೆಯುತ್ತಿರುವ ನಡುವೆಯೇ ಸುಪ್ರೀಂ ಕೋರ್ಟ್ ಈ ಆದೇಶ ನೀಡಿದೆ.

ಅಧ್ಯಕ್ಷ ಜೋ ಬೈಡನ್ ಅವರು ಈ ನಿರ್ಧಾರವನ್ನು ಖಂಡಿಸಿದ್ದು, 'ಇದು ಸಂವಿಧಾನಕ್ಕೆ ವಿರುದ್ಧವಾಗಿದೆ, ಇದರಿಂದ ಮುಂದೆ ತೊಂದರೆ ಉಂಟಾಗಲಿದೆ' ಎಂದಿದ್ದಾರೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ | A Government of India Undertaking
ಸಿಂಡಿಕೇಟ್ Syndicate
ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310039/25310038

ಸ್ಥಳಾವಕಾಶ ಬೇಕಾಗಿದೆ

ಕೆಳಗಿನ ಸ್ಥಳದಲ್ಲಿ ಶಾಖೆಗಾಗಿ ವಾಣಿಜ್ಯ ಸ್ಥಳಾವಕಾಶವನ್ನು ಹೊಂದಿರುವ ಮಾಲೀಕರಿಂದ ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ಫ್ರೇಜರ್ ಟೌನ್, ಬೆಂಗಳೂರು (ಕೋಲ್ಸ್ ರಸ್ತೆ, ಕೋಲ್ಸ್ ಪಾರ್ಕ್, ಸ್ಪೆನ್ಸರ್ ರಸ್ತೆ ಮತ್ತು ಫ್ರೇಜರ್ ಟೌನ್ ಬಸ್ ನಿಲ್ದಾಣದ ಹತ್ತಿರ ಒಳಗೊಂಡು)	2200 ಚ.ಅಡಿಗಳಿಂದ 2500 ಚ.ಅಡಿಗಳವರೆಗೆ

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ http://www.canarabank.com ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ **Announcement → Tenders** ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : 15–07–2022 ರಂದು ಸಂಜೆ 3.00 ಗಂಟೆಯವರೆಗೆ. ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"

ಸ್ಥಳ : ಬೆಂಗಳೂರು
ದಿನಾಂಕ : 24–06–2022
ಸಹಿ/–
ಸಹಾಯಕ ಮಹಾ ಪ್ರಬಂಧಕರು

'ರಾಜಕಾರಣಕ್ಕೆ ಧರ್ಮ ಬಳಕೆ ಸರಿಯಲ್ಲ'

ಬೆಂಗಳೂರು: 'ಧರ್ಮಗಳು ಹೃದಯಗಳನ್ನು ಬೆಸೆಯುವ ಪಾಠ ಕಲಿಸುತ್ತದೆ. ಆದರೆ, ಇಂದು ಧರ್ಮಗಳ ನಡುವೆ ಸಂಶಯದ ಗೋಡೆಗಳು ನಿರ್ಮಾಣಗೊಂಡಿವೆ' ಎಂದು ದೆಹಲಿ ಧಾರ್ಮಿಕ್ ಜನ್ ಮೋರ್ಚಾದ ಸಂಚಾಲಕ ಡಾ.ಮಹಮ್ಮದ್ ಸಲೀಂ ಆತಂಕ ವ್ಯಕ್ತಪಡಿಸಿದರು.

ನಗರದಲ್ಲಿ ಕರ್ನಾಟಕ ಧಾರ್ಮಿಕ ಸೌಹಾರ್ದ ವೇದಿಕೆ ವತಿಯಿಂದ ನಡೆದ ದುಂಡುಮೇಜಿನ ಸಭೆಯಲ್ಲಿ ಅವರು ಮಾತನಾಡಿದರು.

'ಇದು ಧರ್ಮ ಪ್ರಧಾನ ದೇಶವಾಗಿದೆ. ಇಲ್ಲಿರುವಷ್ಟು ಧರ್ಮಗಳು ಜಗತ್ತಿನ ಬೇರೆ ಯಾವ ದೇಶದಲ್ಲೂ ಇಲ್ಲ. ಎಲ್ಲ ಧರ್ಮಗಳನ್ನೂ ಸಮಾನವಾಗಿ ಕಾಣಬೇಕು' ಎಂದು ಸಲಹೆ ನೀಡಿದರು.

ಕೆಲವು ಶಕ್ತಿಗಳು ಧರ್ಮದ ವೇಷವನ್ನು ಧರಿಸಿಕೊಂಡು ಅಧರ್ಮವನ್ನು ಪ್ರಚಾರ ಮಾಡುತ್ತಿರುವುದು ದುರಂತ ಎಂದು ಹೇಳಿದರು.

ವಿವಿಧ ಧರ್ಮಗಳ ಧಾರ್ಮಿಕ ಮುಖಂಡರ ನಡುವೆ ಉತ್ತಮ ವಾತಾವರಣ ಬೆಳೆಯಬೇಕಾಗಿರುವುದು ಈ ಕಾಲದ ಬೇಡಿಕೆ ಆಗಿದೆ ಎಂದು ನುಡಿದರು.

'ಜನರ ನಡುವೆ ಘರ್ಷಣೆಗೆ ಕಾರಣ ಧರ್ಮವಲ್ಲ. ಧರ್ಮಗಳು ಹೃದಯಗಳನ್ನು ಬೆಸೆಯುವ ಪಾಠ ಕಲಿಸುತ್ತದೆ. ನಮ್ಮ ಅಭಿಪ್ರಾಯ, ಆಚರಣೆಗಳು ಭಿನ್ನ ಆಗಿರಬಹುದು. ಆದರೆ, ಸೌಹಾರ್ದ ವಾತಾವರಣ ನಿರ್ಮಾಣ ಆಗಬೇಕು. ಪರಸ್ಪರ ಗೌರವದ ಭಾವನೆ ಮೂಡಬೇಕು' ಎಂದು ಪ್ರತಿಪಾದಿಸಿದರು.

ರಾಜಕಾರಣಕ್ಕಾಗಿ ಧರ್ಮದ ಬಳಕೆಯನ್ನು ತಡೆಯಬೇಕಾದ ಅಗತ್ಯ ಇದೆ. ಎಲ್ಲ ಮನುಷ್ಯರನ್ನೂ ಸಮಾನರಾಗಿ ಕಾಣಬೇಕಾಗಿದೆ ಎಂದು ಹೇಳಿದರು.

ಕರ್ನಾಟಕ ಧಾರ್ಮಿಕ ಸೌಹಾರ್ದ ವೇದಿಕೆಯ ಸಂಚಾಲಕ ಮುಹಮ್ಮದ್ ಕುಂಞಿ ಪ್ರಾಸ್ತಾವಿಕ ಮಾತನಾಡಿ, 'ರಾಜ್ಯ ಹಾಗೂ ರಾಷ್ಟ್ರದಲ್ಲಿ ಮನಸ್ಸು ಕದಡಿದ ವಾತಾವರಣ ಇದೆ. ಸೌಹಾರ್ದ ನೆಲೆಸುವುದು ಅಗತ್ಯವಾಗಿದೆ' ಎಂದರು.

ಆರ್ಯ ಸಮಾಜದ ವನಪ್ರಸ್ಥಿ ಸ್ವಾಮೀಜಿ, ಸ್ವಾಮಿ ದಿವ್ಯ ಜ್ಞಾನಾನಂದ, ಸಿಖ್ ಧರ್ಮಗುರು ಜಸ್ಬೀರ್ ಸಿಂಗ್, ಮೌಲಾನಾ ಇಫ್ತಿಕಾರ್ ಖಾಸಿಂ, ವಹೀದುದ್ದೀನ್ ಖಾನ್ ಉಮರಿ, ಮಹಮ್ಮದ್ ಸಾದ್ ಹಾಜರಿದ್ದರು.

ಮಗು ಎತ್ತಿಕೊಂಡೇ ವಿಚಾರಣೆಗೆ ಬಂದ ಅಭಿಷೇಕ್ ಪತ್ನಿ

ಕೋಲ್ಕತ್ತ(ಪಿಟಿಐ): ಬಹುಕೋಟಿ ಕಲ್ಲಿದ್ದಲು ಹಗರಣದ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯ(ಇ.ಡಿ) ತೃಣಮೂಲ ಕಾಂಗ್ರೆಸ್ ಸಂಸದ ಅಭಿಷೇಕ್ ಬ್ಯಾನರ್ಜಿ ಅವರ ಪತ್ನಿ ರುಜಿರಾ ನರುಲಾ ಬ್ಯಾನರ್ಜಿ ಅವರನ್ನು ವಿಚಾರಣೆ ನಡೆಸಿದೆ.

ಗುರುವಾರ ಬೆಳಗ್ಗೆ ಸುಮಾರು 11 ಗಂಟೆ ವೇಳೆ ಮಗುವನ್ನು ಕಂಕುಳಲ್ಲಿ ಎತ್ತಿಕೊಂಡು ಇ.ಡಿ ಕಚೇರಿಗೆ ಬಂದ ರುಜಿರಾ ಅವರನ್ನು ಇಬ್ಬರು ಮಹಿಳೆಯರು ಇದ್ದ ಅಧಿಕಾರಿಗಳ ತಂಡ ವಿಚಾರಣೆ ನಡೆಸಿದೆ. ಬ್ಯಾಂಕಾಕ್‌ನಲ್ಲಿ ನಡೆದ ಬ್ಯಾಂಕ್ ಖಾತೆಯ ಕೆಲವು ವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ. ಅವರು ನೀಡಿದ ಮಾಹಿತಿಯನ್ನು ತಾಳೆ ಹಾಕಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ, ಕಚೇರಿ ಅಧೀಕ್ಷಕ ವಶಕ್ಕೆ

ಎಚ್.ಡಿ.ಕೋಟೆ: ನಿವೃತ್ತ ಶಿಕ್ಷಕರಿಂದ ಲಂಚ ಪಡೆದ ಆರೋಪದ ಮೇಲೆ ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಚಂದ್ರಕಾಂತ್ ಹಾಗೂ ಕಚೇರಿ ಅಧೀಕ್ಷಕ ಶಂಕರ್ ಅವರನ್ನು ಇಲಾಖೆ ಕಚೇರಿಯಲ್ಲೇ ಗುರುವಾರ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಗುರುವಾರ ವಶಕ್ಕೆ ಪಡೆದರು.

ನಿವೃತ್ತಿ ವೇತನಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಬೆಂಗಳೂರಿನ ಮಹಾ ಲೆಕ್ಕಾಧಿರಿಗಳ ಕಚೇರಿಗೆ ಕಳಿಸುವ ಸಂಬಂಧ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಅಧೀಕ್ಷಕ ಮತ್ತು ದ್ವಿತೀಯ ದರ್ಜೆ ಸಹಾಯಕರು, ₹9 ಸಾವಿರ ಕೊಡುವಂತೆ ಆಗ್ರಹಿಸಿದ್ದಾರೆಂದು ನಂಜನಗೂಡು ತಾಲ್ಲೂಕು ರಾಂಪುರ ಗ್ರಾಮದ ನಿವೃತ್ತ ಶಿಕ್ಷಕ ಸಿದ್ದರಾಜು ಅವರು ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗ ದೂರು ಕೊಟ್ಟಿದ್ದರು.

'ಬೇಡಜಂಗಮ ಮೀಸಲಾತಿ ಹೋರಾಟ ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇಡ-ಜಂಗಮ ಮೀಸಲಾತಿ ಸೌಲಭ್ಯ ಪಡೆಯುವ ದಿಸೆಯಲ್ಲಿ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲು ಇದೇ 30ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸಲು ಉದ್ದೇಶಿಸಲಾಗಿರುವ ಬೃಹತ್ ಪ್ರತಿಭಟನಾ ಸಮಾವೇಶ ಕೈಬಿಡಬೇಕು' ಎಂದು ವೀರಶೈವ ಜಂಗಮರು ಹಾಗೂ ಜಂಗಮ ಮಠಾಧಿಪತಿಗಳಿಗೆ ಮನವಿ ಮಾಡಲಾಗಿದೆ.

ಈ ಕುರಿತಂತೆ ಹೈಕೋರ್ಟ್‌ನ ಹಿರಿಯ ವಕೀಲರೂ ಆದ ಗಂಗಾಧರ ಆರ್.ಗುರುಮಠ ಸಮಾಜ ಬಾಂಧವರು ಹಾಗೂ ಮಠಾಧಿಪತಿಗಳಲ್ಲಿ ಮನವಿ ಮಾಡಿದ್ದು, 'ಬೇಡ-ಜಂಗಮ ಮೀಸಲಾತಿಗೆ ಸಂಬಂಧಿಸಿದಂತೆ ಯಾವುದೇ ತೀರ್ಮಾನ ತೆಗೆದುಕೊಳ್ಳಲು ಸಂವಿಧಾನಾತ್ಮಕವಾಗಿ ರಾಜ್ಯ ಸರ್ಕಾರಕ್ಕೆ ಅಧಿಕಾರ ಇಲ್ಲ. ಈ ಹಿಂದೆ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮಲ್ಲಿಕಾರ್ಜುನ ಖರ್ಗೆ ಕಂದಾಯ ಸಚಿವರಾಗಿದ್ದ ಕಾಲದಲ್ಲಿ ಹೊರಡಿಸಲಾಗಿದ್ದ ಸರ್ಕಾರಿ ಅಧಿಸೂಚನೆಯನ್ನು 25 ವರ್ಷಗಳ ಹಿಂದೆಯೇ ಹೈಕೋರ್ಟ್ ಅಸಿಂಧುಗೊಳಿಸಿದೆ. ಆದ್ದರಿಂದ, ಉದ್ದೇಶಿತ ಬೀದಿ ಹೋರಾಟ ಕೈಬಿಡಬೇಕು' ಎಂದು ಹೇಳಿದ್ದಾರೆ.

'ಬೇಡ-ಜಂಗಮ ಸಮಾಜದ ಅಧ್ಯಕ್ಷರೂ ಆದ ಧಾರವಾಡದ ವಕೀಲ ಬಿ.ಡಿ.ಹಿರೇಮಠ ನೇತೃತ್ವದಲ್ಲಿ ನಡೆಸಲು ಉದ್ದೇಶಿಸಲಾಗಿರುವ ಈ ಪ್ರತಿಭಟನೆ ಸೂಕ್ತವಲ್ಲ. ವೀರಶೈವ ಜಂಗಮ ಸಮಾಜದ ಯಾವುದೇ ವ್ಯಕ್ತಿ, ಸಂಘಟನೆ ಅಥವಾ ಮಠಾಧಿಪತಿಗಳು ಬೀದಿ ಹೋರಾಟ, ಚಳವಳಿಗಳಿಗೆ ಮುಂದಾಗಬಾರದು. ಇಂತಹ ಸಂಘರ್ಷಾತ್ಮಕ ನಿಲುವುಗಳು ಮತ್ತು ನಡವಳಿಕೆಗಳನ್ನು ತಕ್ಷಣದಿಂದ ನಿಲ್ಲಿಸಿ ಕಾನೂನಾತ್ಮಕ ಪರಿಹಾರ ಕಂಡುಕೊಳ್ಳಬೇಕು' ಎಂದು ಗಂಗಾಧರ ಆರ್.ಗುರುಮಠ ಅವರು ಸಲಹೆಯನ್ನು ಈ ವೇಳೆ ನೀಡಿದ್ದಾರೆ.

'ಪ್ರತಿಭಟನೆ ಅಥವಾ ಸಮಾವೇಶಗಳ ಮೂಲಕ ವೀರಶೈವ ಜಂಗಮರಿಗೆ ಬೇಡ-ಜಂಗಮ ಮೀಸಲಾತಿ ಸೌಲಭ್ಯ ಸಿಗುವುದು ಅಸಾಧ್ಯ ಎಂಬುದನ್ನು ನಾಲ್ಕು ದಶಕಗಳ ವ್ಯರ್ಥ ಪ್ರಯತ್ನಗಳು ಈಗಾಗಲೇ ಸಾಬೀತುಗೊಳಿಸಿವೆ. ಇಂತಹ ಪ್ರತಿಭಟನೆಗಳಿಂದ ಕೆಲವು ವಕೀಲರ ವೃತ್ತಿ ಸಂಬಂಧಿತ ಏಳಿಗೆಯಾಗಿದೆಯೇ ಹೊರತು ಸಮಸ್ತ ಜಂಗಮ ಸಮಾಜಕ್ಕೆ ಯಾವುದೇ ರೀತಿಯ ಅನುಕೂಲವಾಗಿರುವುದಿಲ್ಲ' ಎಂದು ಗುರುಮಠ ಅವರು ಈ ಸಂದರ್ಭದಲ್ಲಿ ತಿಳಿಸಿದ್ದಾರೆ.

E-BOOK TODAY AT WWW.MARUTISUZUKI.COM OR VISIT YOUR NEAREST MARUTI SUZUKI DEALERSHIP.

MARUTI SUZUKI AUTHORISED DEALERS: BENGALURU: BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS, BUDIGERE, GUDIBANDA, HESARGHATTA PH: 080-30693069. KALYANI: MYSORE ROAD, BANNERGHATTA ROAD, NAGARBHAVI, BANASWADI, LALBAGH, RAMANAGARAM, CHANNAPATNA, KANAKPURA, BANNERGATTA, BIDADI: 95909 90011. MANDOVI: BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. KATARIA: KANAKAPURA ROAD, PH: 78990 40000. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. RNS MOTORS: YESHWANTHPUR, BOMMANAHALLI, NELAMANGALA, PH: 9538965804. SURAKSHAA CAR CARE: ELECTRONICS CITY, KORAMANGALA, BANGARPET, ATTIBELLE, SRINIVASAPURA, HAROHALLI PH: 8884442299. VARUN MOTORS: MALLESHWARAM, HEBBAL, 78991 00200. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

*Offer includes consumer offer, exchange bonus and institutional offer (wherever applicable) on selected models/ variants. Above mentioned savings amount is the value of maximum savings on selected models. *Terms and conditions apply. Terms and conditions are subject to change without any prior notice. ##As certified by Test Agency Under Rule 115 (G) of CMVR 1989. ^^1.0L VXI AGS petrol variants. For more details, please contact your nearest ARENA dealership. **Features and accessories shown may not be part of standard fitment. Images used are for illustration purposes only. Car color may vary due to printing on paper. Black Glass Shade on the vehicle is due to the lighting effect. Offers vary across variants. Maruti Suzuki India Limited reserves the right to discontinue offers without notice. Above offers are valid till 30th June, 2022

ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ-2)
ವಿಕಾಸ ಸೌಧ, ಬೆಂಗಳೂರು

ಸಂ.: ನಅಇ 66 ಬಿಬಿಎಸ್ 2022, ಬೆಂಗಳೂರು   ದಿನಾಂಕ: 23.06.2022

ಅಧಿಸೂಚನೆ

ಸರ್ಕಾರವು ಅಧಿಸೂಚನೆ ಸಂಖ್ಯೆ: ನಅಇ 73 ಬಿಬಿಎಸ್ 2020(ಇ), ದಿನಾಂಕ: 06.01.2021 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 ಅನ್ನು ದಿನಾಂಕ: 11.01.2021ರಿಂದ ಜಾರಿಗೆ ತಂದಿರುತ್ತದೆ. ಅದರಂತೆ, ಅಧಿಸೂಚನೆ ಸಂಖ್ಯೆ: ನಅಇ 17 ಬಿಬಿಎಲ್ 2020(ಭಾಗ-1) (ಇ), ದಿನಾಂಕ: 21.01.2021ರಲ್ಲಿ ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲರ್‌ಗಳ ಸಂಖ್ಯೆಯನ್ನು 243 (ಇನ್ನೂರ ನಲವತ್ತ ಮೂರು) ಎಂದು ನಿಗದಿಪಡಿಸಲಾಗಿದೆ. ಮುಂದುವರೆದು, ಅಧಿಸೂಚನೆ ಸಂಖ್ಯೆ: ನಅಇ 17 ಬಿಬಿಎಲ್ 2020(ಭಾಗ-1) (ಇ), ದಿನಾಂಕ: 29.01.2021ರಲ್ಲಿ ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರದೇಶಕ್ಕೆ ಸಂಬಂಧಿಸಿದಂತೆ ವಾರ್ಡ್‌ಗಳ ಪುನರ್ ವಿಂಗಡಣೆಗಾಗಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ವಾರ್ಡ್‌ಗಳ ಪುನರ್ ವಿಂಗಡಣಾ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ: 09.06.2022ರಂದು ಸರ್ಕಾರಕ್ಕೆ ವಾರ್ಡ್‌ಗಳ ಪುನರ್ ವಿಂಗಡಣಾ ವರದಿಯನ್ನು ಸಲ್ಲಿಸಿರುತ್ತದೆ. ಸರ್ಕಾರವು ಸದರಿ ವಾರ್ಡ್‌ಗಳ ಪುನರ್ ವಿಂಗಡಣಾ ವರದಿಯನ್ನು ಒಪ್ಪಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020ರ ಕಲಂ 7ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, 2011ರ ಜನಗಣತಿಯ ಆಧಾರದ ಮೇರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಕರಡು ವಾರ್ಡುವಾರು ಕ್ಷೇತ್ರ ಪುನರ್ ವಿಂಗಡಣೆಯನ್ನು ನಿಗದಿಪಡಿಸಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಅಧಿಸೂಚನೆಯ ಪೂರ್ಣ ವಿವರವನ್ನು **https://erajyapatra.karnataka.gov.in** ರಲ್ಲಿ ನೋಡಬಹುದು.

ಈ ಬಗ್ಗೆ ಯಾವುದೇ ಆಕ್ಷೇಪಣೆ/ಸಲಹೆಗಳನ್ನು ಸಲ್ಲಿಸಲು ಇಚ್ಛಿಸುವ ವ್ಯಕ್ತಿಗಳು/ಸಂಸ್ಥೆಗಳು ತಮ್ಮ ಪೂರ್ಣ ವಿಳಾಸ, ಸಹಿಯೊಂದಿಗೆ ಸೂಕ್ತ ಕಾರಣ/ವಿವರಣೆಗಳೊಂದಿಗೆ ಲಿಖಿತ ರೂಪದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಕೊಠಡಿ ಸಂಖ್ಯೆ 436, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು-560 001 ಇವರಿಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ 15 ದಿನಗಳೊಳಗಾಗಿ ಸಲ್ಲಿಸುವುದು. ನಿಗದಿತ ಅವಧಿಯ ನಂತರ ಸ್ವೀಕೃತಗೊಂಡ ಆಕ್ಷೇಪಣೆ/ಸಲಹೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ-2)

ವಾಸಾಸಂಇ/ಉನಿ-ಸಿ.ಪಿ/1042/ಎಂಸಿಎ/2022-23

ದೇಶಗಳ ಸಾರ್ವಭೌಮತ್ವ ಗೌರವಿಸಲು 'ಬ್ರಿಕ್ಸ್' ಬದ್ಧತೆ

ನವದೆಹಲಿ (ಪಿಟಿಐ): ಎಲ್ಲಾ ದೇಶಗಳ ಸಾರ್ವಭೌಮತೆ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸಲು ಬದ್ಧತೆ ವ್ಯಕ್ತಪಡಿಸಿದ 'ಬ್ರಿಕ್ಸ್' ನಾಯಕರು, ಉಕ್ರೇನ್ ಬಿಕ್ಕಟ್ಟು ಮತ್ತು ಅಫ್ಘಾನಿಸ್ತಾನ ಸಮಸ್ಯೆಗಳ ಶಾಂತಿಯುತ ಪರಿಹಾರಕ್ಕೆ ಒತ್ತು ನೀಡುವುದಾಗಿ ಘೋಷಿಸಿದರು.

ವಿಶ್ವದ ಐದು ದೊಡ್ಡ ಅಭಿವೃದ್ಧಿಶೀಲ ರಾಷ್ಟ್ರಗಳಾದ ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾವನ್ನು ಒಳಗೊಂಡಿರುವ 'ಬ್ರಿಕ್ಸ್'ನ ಎರಡು ದಿನಗಳ ಶೃಂಗಸಭೆ ವರ್ಚುವಲ್ ಆಗಿ ಗುರುವಾರ ಬೀಜಿಂಗ್‌ನಲ್ಲಿ ಆರಂಭಗೊಂಯಿತು.

ರಷ್ಯಾ ಮತ್ತು ಉಕ್ರೇನ್ ನಡುವಿನ ಮಾತುಕತೆಗಳನ್ನು ಬ್ರಿಕ್ಸ್‌ನ ನಾಯಕರು ಬೆಂಬಲಿಸಿದರು. ಪೂರ್ವ ಯುರೋಪ್ ಮತ್ತು ಸುತ್ತಮುತ್ತಲಿನ ಮಾನವೀಯ ಪರಿಸ್ಥಿತಿಯ ಬಗ್ಗೆ ನಾಯಕರು ಈ ವೇಳೆ ಕಳವಳ ವ್ಯಕ್ತಪಡಿಸಿದರು.

ಜಾಗತಿಕ ಆರ್ಥಿಕ ಚೇತರಿಕೆಗೆ ಸಹಕರಿಸಿ: 'ಬ್ರಿಕ್ಸ್' ಸದಸ್ಯ ರಾಷ್ಟ್ರಗಳ ಪರಸ್ಪರ ಸಹಕಾರವು ಕೋವಿಡ್ ನಂತರ ಜಾಗತಿಕ ಆರ್ಥಿಕ ಚೇತರಿಕೆಗೆ ಉಪಯುಕ್ತ ಕೊಡುಗೆ ನೀಡಬಹುದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಕೆಲವು ವರ್ಷಗಳಲ್ಲಿ ಬ್ರಿಕ್ಸ್‌ನಲ್ಲಿ ಕೈಗೊಂಡ ರಚನಾತ್ಮಕ ಬದಲಾವಣೆಗಳು ಗುಂಪಿನ ಪ್ರಭಾವವನ್ನು ಹೆಚ್ಚಿಸಿವೆ. ಸದಸ್ಯ ರಾಷ್ಟ್ರಗಳ ನಡುವಿನ ಸಹಕಾರವು ಅವರ ನಾಗರಿಕರಿಗೆ ಪ್ರಯೋಜನ ತಂದಿದೆ. ಶೃಂಗದಲ್ಲಿ ನಡೆಯುವ ಚರ್ಚೆಗಳು ಸದಸ್ಯ ದೇಶಗಳ ನಡುವಿನ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುತ್ತವೆ ಎಂಬ ವಿಶ್ವಾಸವಿದೆ ಎಂದರು.

ಎರಡು ದಿನಗಳ ವರ್ಚುವಲ್ ಶೃಂಗಸಭೆಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಬ್ರೆಜಿಲ್ ಅಧ್ಯಕ್ಷ ಜೈರ್ ಬೊಲ್ಸೊನಾರೊ ಮತ್ತು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಭಾಗವಹಿಸಿದ್ದರು.

ವಿಶ್ವಸಂಸ್ಥೆ ಸುಧಾರಣೆ ಅಗತ್ಯ

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯನ್ನು ಒಳಗೊಂಡಂತೆ ವಿಶ್ವಸಂಸ್ಥೆಯ ಸಮಗ್ರ ಸುಧಾರಣೆಯ ಅಗತ್ಯವನ್ನು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬ್ರಿಕ್ಸ್ ರಾಷ್ಟ್ರಗಳ ನಾಯಕರು ಒತ್ತಿಹೇಳಿದರು. ಭದ್ರತಾ ಮಂಡಳಿಯಲ್ಲಿ ಪ್ರಾತಿನಿಧಿತ್ವವನ್ನು ಹೆಚ್ಚಿಸುವ ಮೂಲಕ ಮಂಡಳಿ ಕಾರ್ಯವನ್ನು ದಕ್ಷ ಮತ್ತು ಪರಿಣಾಮಕಾರಿಯನ್ನಾಗಿಸಬೇಕಿದೆ ಎಂದರು.

ವಿಶ್ವಸಂಸ್ಥೆಯಲ್ಲಿ ಭಾರತ, ಬ್ರೆಜಿಲ್, ದಕ್ಷಿಣ ಆಫ್ರಿಕಾಕ್ಕೆ ಹೆಚ್ಚಿನ ಸ್ಥಾನಮಾನ ಮತ್ತು ಪ್ರಾಮುಖ್ಯತೆ ದೊರೆಯಬೇಕು ಎಂಬುದಕ್ಕೆ ರಷ್ಯಾ ಮತ್ತು ಚೀನಾ ಸಹಮತ ವ್ಯಕ್ತಪಡಿಸಿವೆ.

ಕಾಬೂಲ್: ಭಾರತದ ರಾಜತಾಂತ್ರಿಕ ಕಚೇರಿ ಮತ್ತೆ ಆರಂಭ

ನವದೆಹಲಿ (ಪಿಟಿಐ): ಅಫ್ಘಾನಿಸ್ತಾನವನ್ನು ತಾಲಿಬಾನಿಗಳು ವಶಪಡಿಸಿಕೊಂಡ 10 ತಿಂಗಳ ಬಳಿಕ ಭಾರತವು ಕಾಬೂಲ್‌ನಲ್ಲಿರುವ ತನ್ನ ರಾಯಭಾರ ಕಚೇರಿಗೆ ತಂಡವೊಂದನ್ನು ನಿಯೋಜಿಸಿದೆ. ಈ ಮೂಲಕ ಭಾರತವು ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿ ರಾಯಭಾರ ಕಚೇರಿಯನ್ನು ಪುನಃ ತೆರೆದಿದೆ. 'ಅಫ್ಘಾನಿಸ್ತಾನದ ಜನರಿಗೆ ಮಾನವೀಯ ನೆರವು ಒದಗಿಸಲು ಭಾರತ ತನ್ನ ರಾಜತಾಂತ್ರಿಕ ಸಂಬಂಧ ವನ್ನು ಮುಂದುವರಿಸುತ್ತದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಚಲಿಸುವ ಮೋಡಗಳು

ಮೋಡ ಕವಿದ ವಾತಾವರಣ ಇದ್ದ ನಗರದಲ್ಲಿ ಗುರುವಾರ ಮೋಡಗಳ ನಡುವೆ ಆಗೊಮ್ಮೆ ಈಗೊಮ್ಮೆ ಸೂರ್ಯ ಇಣುಕುತ್ತಿದ್ದ. ಆಗಸದಲ್ಲಿ ಮೋಡಗಳು ಚದುರಿದ್ದ ದೃಶ್ಯ ವಿಧಾನಸೌಧದ ಬಳಿ ಕಂಡಿದ್ದು ಹೀಗೆ - ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಪ್ರಭಾವಿಗಳಿಗೆ ಬ್ಲ್ಯಾಕ್‌ಮೇಲ್; ದೂರು

ಬೀದರ್: ಸಾಮಾಜಿಕ ಜಾಲತಾಣದಲ್ಲಿ ಪ್ರಭಾವಿ ವ್ಯಕ್ತಿಗಳನ್ನು ಪರಿಚಯಿಸಿಕೊಂಡು ಸ್ನೇಹ ಬೆಳೆಸಿ ಅವರ ನಗ್ನ ವಿಡಿಯೊ ಚಿತ್ರೀಕರಿಸಿ ನಂತರ ಹಣ ವಸೂಲಿ ಮಾಡುವ ಜಾಲಕ್ಕೆ ಒಂದು ವರ್ಷದಲ್ಲಿ ಜಿಲ್ಲೆಯ 15 ಮಂದಿ ಸಿಲುಕಿ, ಹಣ ಕಳೆದುಕೊಂಡಿದ್ದಾರೆ.

'ರಾಜಸ್ತಾನ, ಜಾರ್ಖಂಡ್‌ನ ಜಾಲವು ಸಾಮಾಜಿಕ ಜಾಲತಾಣಗಳಲ್ಲಿ ಯುವತಿಯ ಚೆಂದದ ಚಿತ್ರದ ಡಿಪಿ ಇಟ್ಟು ಮಧ್ಯ ವಯಸ್ಕರು, ರಾಜಕಾರಣಿಗಳು, ಉದ್ಯಮಿಗಳು ಹಾಗೂ ಪ್ರಭಾವಿಗಳನ್ನು ಗುರಿ ಮಾಡುತ್ತಿದೆ' ಎಂದು ವಂಚನೆ ಒಳಗಾದವರು ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿದ್ದಾರೆ.

'ಅಪರಾಧ ಕೃತ್ಯದಲ್ಲಿ ತೊಡಗಿದವರು ಬೇರೆಯವರ ಮೊಬೈಲ್ ನಂಬರ್, ವಿಳಾಸ ಕೊಟ್ಟು ತೆರೆಮರೆಯಲ್ಲಿ ಇಂತಹ ಕೆಲಸ ನಡೆಸಿದ್ದಾರೆ. ಸಾರ್ವಜನಿಕರು ಅಪರಿಚಿತರಿಗೆ ಮೊಬೈಲ್ ನಂಬರ್ ಕೊಡಬಾರದು. ಯಾವುದೇ ರೀತಿಯ ಮಾಹಿತಿ ಹಂಚಿಕೊಳ್ಳಬಾರದು. ಮೊಬೈಲ್ ಕಳ್ಳತನವಾಗಿದ್ದರೆ ನಂಬರ್ ತಕ್ಷಣ ಬ್ಲಾಕ್ ಮಾಡಿಸಬೇಕು. ಬ್ಯಾಂಕ್ ಅಕೌಂಟ್ ಕೂಡ ಬ್ಲಾಕ್ ಮಾಡಿಸಬೇಕು. ಕಳ್ಳತನದ ಮೊಬೈಲ್‌ನಲ್ಲಿರುವ ಸಿಮ್ ಬಳಸಿ ವಂಚಿಸುತ್ತಿರುವುದು ಹೆಚ್ಚಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ಕಿಶೋರ್‌ಬಾಬು ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Drivers

DRIVERS WANTED: 4 nos for Water tankers office in Jayanagar Bangalore. Call 9448171416

Teachers/ Professors

JAME UL ULOOM GROUP OF INSTITUTIONS AND M.M.I GROUP OF INSTITUTIONS
Requires the following faculty for Bangalore City, Nayandahalli and Residential School Bannikuppa (Near Wonder la)
- Administrator : MBA/BE (minimum 5 yrs experience)
- Principal: Post Graduate with B.Ed (minimum 5 yrs experience)
- Lecturer for Biology: M.Sc, B.Ed
- Lecturer for Computer Science: M.C.A/M.Sc. / B.E
- Librarian : M.Lib / B.Lib
- High School Teachers: Post graduates with B.Ed.
- Primary teachers :graduates with B.Ed. / D.Ed / TCH
- Nursery Teachers NTT / D.Ed
- Computer Teacher: BCA/MCA With Experience
- Physical Education Teacher : B.PEd. / C.PEd.
- Accounts Section B.Com with knowledge of Tally ERP9
- Drivers With heavy Driving license
- Security Guards

Apply with detail resumes and applications for the post applied within a week to
SECRETARY
Jamia Masjid Muslim Charitable Fund Trust
S.J.P.Road, Bangalore - 02.
Contact Nos.: 080-2960 2086 / 2223 9495.
E-Mail: jameululoom84@gmail.com

URGENTLY REQUIRED experienced FEMALE TEACHERS for Maths, Science and Kannada WISDOM INTERNATIONAL SCHOOL, Richmond Town. Teacher with multiple subject handling. Walk-in-interview Contact: 7676709640, 9960723904.

WANTED TEACHERS to handle Maths & Science (Primary), Social Science & English (High School). Contact No. 9379191544, Cambridge English School, Mathikere, Yeshwanthpur, Bangalore

WANTED TEACHERS ENGLISH, MATHEMATICS, SOCIALSTUDIES, PHYSICAL EDUCATION, ART & CRAFT FRANK PUBLIC SCHOOL. JP.Nagar, 9731910479. Frankoffice127@gmail.com

GLOBAL ACADEMY FOR LEARNING
Next Gen School
Affiliated to CBSE, New Delhi
International Dimension in Schools 2022-25

Our GAFL family is expanding.
We are looking for dynamic, passionate and competent female teaching staff with good communication skills to fit the following positions

Vice-Principal
Trained Post Graduate with 5 years experience in the same post

Academic Coordinator : Pre Primary
The candidate should have been in a similar role for at least 2 years experience

Pre-Primary Teachers
Graduates with NTT/Montessori teacher training from a recognised Institution.

* Primary and secondary school Teachers : Trained B.Ed, Graduates
With Minimum 3 Years Experience
English | Mathematics | Social Studies| EVS | Sanskrit | Hindi | Kannada

Eligible candidates should submit their updated CV on madhu@gaflschool.com within 7 days.

For more details :8880400900
website: www.gaflschool.com
Global academy for learning,
Near global village , Pattangere main road, Rajarajeshwarinagar, Bangalore-560059

WANTED LECTURERS
Commerce, Economics, English with NET, SLET and PhD for Degree classes. Chemistry, Economics, Hindi, English with Masters and B.Ed for P.U. Classes to Abbas Khan Degree/ PU Collge for Women, Cubbonpet, Bengaluru. B.A, B.Ed, B.Sc, B.Ed D.Ed English Medium for CMA Girls/ Boys High School/ Primary School Momipura Yeshwanthpur Bengaluru. Apply within 5 days to General Secretary Central Muslim Association of Karnataka OTC Road Cross Cubbonpet Bengaluru- 560002.

Walk-in

SILICON CITY COLLEGE
(A Unit of MJ Education Trust)
Re-Accredited By NAAC with 'A' Grade
Recognised under Section 2(f) & 12(B) by UGC, Affiliated to Bengaluru North University
Walk in Interview
Applications are invited from eligible candidates having minimum 3 years of teaching experience for the post of
Assistant Professors
Associate Professors
Professors
in Commerce, Management, Statistics, Computer Science, Physics and Kannada
Candidates may attend walk - in - interview & demo along with their original testimonials and recent passport size photo on Saturday & Sunday 25th & 26th June 2022, 9.30AM to 3.30PM
PH: 8147093466
8147093467, 7411072259
email id: chairman@siliconcitycollege.ac.in
#26/2 Ravindra Layout, K R Puram, Bengaluru 560036, Karnataka.
www.siliconcitycollege.ac.in

Wanted

WANTED VEG and Non Veg Cooking Manager Delivery Boy Cashier 50 Nos Contact: 8892501007/ 9606701007

General

WANTED IMMEDIATELY From Bannerghatta Road nearby places- RECEPTIONISTS, SALES OFFICERS, TELE-CALLERS. Good Salary. V&V 99000-54462

HRD & Admin

WANTED EXPERIENCED Kannada and English typing computeroperators. office in Jayanagar immediate joining Call: 9448171416

Call Centre

REQUIRED, TEAMLEADER, Telecaller, Field Executive For Bank loan collection (salary 20,000). Direct Recruitment. 9620206756, 9620200756.

DH DECCAN HERALD   ಪ್ರಜಾವಾಣಿ
Classifieds EDUCATION SPECIAL
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in
SPECIAL RATES FOR
Admission Notice,
Education Success
Congratulation Ads

REAL ESTATE SELLING

Commerical

Hosur Road

PRIME COMMERCIAL PROPERTY FOR SALE on Hosur Road, very near to Christ University. Interested parties, pls conact: Arun-7259917184

Flat

Banashankari

PRESTIGE BROOKLYN HEIGHTS, 3 BHK, semi furnished, ready to occupy apartment with all amenities for resale in Banashankari. Call: 9108050577.

CV Raman Nagar

PRESTIGE RAPPERSWIL, Super luxury 3 bedroom + maids room in CV Raman Nagar, off Indiranagar available for sale, Starting Price Rs. 2.67 Cr, for details, call: 7259665390

Frazer Town

"LUXURIOUS READY 3 Bed Large Apartment with Staff Quarter in Frazer Town. Gated complex with swimming pool and clubhouse. Price Rs. 3.8 Cr. For details contact -7625058333

Jayanagar

PRESTIGE BOTANIQUE, Premium Ready to move-in 3 bed apartments in RV Road, Price Rs. 2.46 Cr. Call: 9632815665

Kammanahalli

PRESTIGE NORTH POINT, Kammanahalli, 2, 2.5 & 3 BHK, ready to occupy apartment with all amenities for resale. Call: 6366971311.

Koramangala

PRESTIGE PINEWOOD, Koramangala, 2, 2.5 & 3 BHK, ready to occupy apartment with all amenities for resale. Call: 9900020184

Mahalakshmi Layout

READY TO Move, 3 BHK Flats, 1 KM from Iskcon Temple & Metro Station, Few Flats Left. 9845014364/ 9513999423

Mysore

APARTMENTS NEAR to Mysore ON 10 Lane Mysore Express Highwayin Best Location 2BHK 1200 Square Feet Area 45 Lakh and 3 BHK 1400 Square FeetArea 65 Lakh. 2 car parking for all apartments. Contact 7676770503 / 9741019028

Uttarahalli

PRESTIGE LAKE RIDGE, Uttarahalli, 1 BHK, ready to occupy apartment with all amenities for resale. Call: 9008999266.

Whitefield

PRESTIGE WHITE MEADOWS, Super luxury Penthouse in Whitefield with Private Gym, Spa and Indoor Swimming Pool. Price Rs. 15 Cr. Call: 9108577397

House

Uttarahalli

NEWLY CONSTRUCTED Duplex House for sale with rental income of 16k at Spoorthi Nagar, Uttrahalli. East-face (15x40) Ph: 8147992639 (1.15 Crore) Negotiable.

Sites

Devanahalli

PRESTIGE GOLFSHIRE MARINA, Plot of 13345 Sft for sale on Nandi Hills Road, For details, call: 7022549452

REAL ESTATE BUYING

Sites

Vishweshwariah Layout

WANTED SITE 20x30 30X40 40x60 50x80 Vishweshwaray Layout Kempegowda Layout RHCS Layout Nagarabhavi ITI and MPM 'D' Group Layout BSK 6th Stage Arkavathi Layout- 9901519025

ADMISSION CORNER

ಕ್ಲಾಸಿಫೈಡ್ಸ್

R.E.S. POLYTECHNIC
Recognised by Govt. of Karnataka & Approved by AICTE
ADMISSIONS FOR 10th PASS or PUC FAIL / PASS
- Electrical & Electronics
- Computer Science
- Civil Engineering
- Mechanical Engineering

PUC Pass Join 2 yrs Diploma Engineering
PUC Fail Join 3 yrs Diploma Engineering
RES-22307
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466

10+2 /ಪಿಯುಸಿ ನಂತರ, ಬೋಯಿಂಗ್ ಮತ್ತು ಏರ್‌ಬಸ್ ಏರ್‌ಕ್ರಾಫ್ಟ್‌ನಲ್ಲಿ
ವಿಶೇಷತೆ ಹೊಂದಿದ ಏರೋನಾಟಿಕಲ್/ಏರ್‌ಕ್ರಾಫ್ಟ್ ಇಂಜಿನೀಯರ್ ಆಗುವ ಸದವಕಾಶವನ್ನು ನಿಮ್ಮದಾಗಿಸಿಕೊಳ್ಳಿ.
ವಿಮಾನಯಾನ ಉದ್ಯಮದಲ್ಲಿ ಜಾಗತಿಕ ಮಟ್ಟದ ಮತ್ತು ಕೈತುಂಬ ಸಂಬಳ ಗಳಿಕೆಯ ವೃತ್ತಿಜೀವನ ನಿಮ್ಮದಾಗುವುದು.

Aircraft Maintenance Engineering (AME) + B.Sc. (Hons)

ಮುಂದಿನ 10 ವರ್ಷಗಳಲ್ಲಿ ಭಾರತಕ್ಕೆ 45000 ಕ್ಕೂ ಹೆಚ್ಚಿನ ತರಬೇತಿ ಹೊಂದಿದ ಏರ್‌ಕ್ರಾಫ್ಟ್ ಇಂಜಿನೀಯರುಗಳು ಬೇಕಾಗುತ್ತಾರೆ. ಭಾರತದಲ್ಲಿ ಮತ್ತು ಜಾಗತಿಕವಾಗಿ ವಿಮಾನ ಯಾನದ ತ್ವರಿತ ಗತಿಯ ಪ್ರಗತಿಯಿಂದಾಗಿ ಅರ್ಹತೆ ಹೊಂದಿದ ಮತ್ತು ತರಬೇತಿ ಪಡೆದ ವೃತ್ತಿಪರರಿಗೆ ಅತ್ಯಧಿಕ ಬೇಡಿಕೆ ಉಂಟಾಗುತ್ತದೆ. ಅರ್ಹತೆ ಪಡೆದಿರುವ ವೃತ್ತಿಪರರು ಅತ್ಯಧಿಕ ಸಂಬಳ ಕೇಳಬಹುದು.

ಹಿಂದೂಸ್ತಾನ್ ಏವಿಯೇಶನ್ ಅಕಾಡೆಮಿ (ಮನ್ನಣೆ ಪಡೆದ DGCA CAR 147 Basic) ಮತ್ತು ಹಿಂದೂಸ್ತಾನ್ ಬಿಸಿನೆಸ್ ಸ್ಕೂಲ್ (ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿದೆ) ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನ್ವಯ ಪ್ರವೇಶ ಮತ್ತು ನಿರ್ಗಮನ ಆಯ್ಕೆಯ ಅವಕಾಶವುಳ್ಳ 4 ವರ್ಷಗಳ ಅವಧಿಯ ಕೋರ್ಸ್ ಪ್ರಕಟಿಸಲು ಹರ್ಷಿಸುವುದು. ವಿದ್ಯಾರ್ಥಿಗಳು ಈಗ B.Sc (Hons) ಪದವಿ + DGCA CAR 147 Basic ಅನ್ವಯ ಏರ್‌ಕ್ರಾಫ್ಟ್ ಮೇಂಟೆನೆನ್ಸ್‌ನಲ್ಲಿ ಥಿಯರಿ ಮತ್ತು ಪ್ರಾಕ್ಟಿಕಲ್ ತರಬೇತಿ ಪಡೆಯಬಹುದು. ಇದರಿಂದ ಅವರು Airbus A320 ಅಥವಾ Boeing 737 ವಿಮಾನದಲ್ಲಿ B1.1/B2 ಲೈಸೆನ್ಸ್ ಪಡೆಯಲು ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ನಮ್ಮ ಅಡ್ಮಿಷನ್ ಕೌನ್ಸಲರ್‌ರನ್ನು ಸಂಪರ್ಕಿಸಿ.

ಇತರೆ ಕೋರ್ಸ್‌ಗಳು
B.Com / BBA / BCA / BBA Aviation Management
MBA Aviation Management / M.Com
Polytechnic Diploma Engg. courses - Aeronautical Engg.
Computer Science Engg. / Mechanical Engg. / Automobile Engg.

HINDUSTAN AVIATION ACADEMY
P. B. No. 3776, Ashwathanagar, Marathahalli
BANGALORE-560037
8838180353
8971404357
9740037853
admissions@hindustanacademy.edu.in
Toll free: 1800 425 8650
www.hindustanacademy.edu.in
VISIT OUR WEBSITE

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Flats

PRESTIGE MISTY WATERS, Vista Tower, Hebbal, 3 BHK ready to occupy apartment with all amenities for rent. Call: 9900085276.

PRESTIGE LAKE RIDGE, Uttarahalli, 2.5 & 3 BHK ready to occupy apartment with all amenities for rent. Call: 9008999266.

Farm House/Land/ Resorts

RESORT -LIKE STAY IN CHICKMAGALUR COFFEE ESTATE RESIDENCY HOME STAY IN CONTACT 9611099245, 9380208396, 8277199686

AUTOMOTIVE

Four Wheelers Selling

Others

VEHICLE FOR SALE (SCHOOL BUS)- SWARAJ MAZDA-2012. 32-SEATER, GOOD CONDITION. CONTACT: 080-26396720/ 9343738553

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

FINANCE AGAINST Land & Building Properties Industries Schools Hospitals Projects & NRI Funds.7358729820

General

EARN 65,000/- to 90,000/- per-month. Setup Paper-bags, Tea-cups, LED-Bulbs unit. We provide free raw material. Buyback Agreement. Contact: 9958628785.

EDUCATIONAL

Admission

DIRECT FINAL YEAR: LLB (Can Practice), B.Tech/ M.Tech/MBA/MCA/BCA/ BBA/BSc/BCom/D.Pharm (BAMS,BYNS,GNM) PU/SSLC. All Courses Recognised by UGC/NAAC Govt. Asha Academy, Bangalore. Ph: 9448460103/ 7093438248

Correspondence Courses

DIRECT FINAL PUC B.Com BA BBA BCA MBA B.Ed Diploma BE D.Pharm PhD: 9739077186/ 8618506480

OTHERS

For Sale

FOR SALE Used Hot water Boiler Good Condition BISNEER Make Contact: 9845026300, Bangalore

PERSONAL

Change of Name

JC673483H NB/SUB PAWAN SINGH 2ATC DAUGHTER Name records ARJU Instead of AARZOO Notary KV MANI Bangalore

CHANGE OF NAME
I Mr. YOGESH S. S/o Mr. L. Sampangi, aged about 44 years residing @ No: 67/1, Krishnam Srinivas Garden Sathnur Village, Bagalur Post, Bangalore-562149. I have changed my name to S. YOGESH BESTHAR affidavit dated 16.06.2022 before Notary H.Sridhar Rao, Bangalore.

I, DEEPA T D/o Hari Govindarajan and W/o Thirumalainambi Kanniah R/a Villa #18, Azven Breathe, Near Indus International School, Sarjapura Attibele Road, Billapura Bengaluru- 562125 Declare That My Name in Birth Certificate Mentioned as DEEPA (DOB 13-08-1977 at Pondicherry) and in School and College Mentioned as DEEPA H Now Changing My Name to DEEPA T vide Affidavit Dated 22-06-2022 Before Notary K.Velayudham Attibele Bangalore- 562107

I, SANDEEP NAHAR U, previously called SANDEEPKUMAR, R/at #5, 22nd Main Road,PES College Road, Opp.Vatsalya Play Home, Nagendra Block, Banashankari 1st Stage,2nd Block, Bengaluru-560050. have changed my name from SANDEEPKUMAR to SANDEEP NAHAR U vide affidavit dated:22.06.2022, before Notary H.G.VENKATA RAMU, Bangalore

I SURESH JAVUR R/a #.57/58/59, Flat No. 202, K2N Olive Hill View Apartment, 4th cross, MLA Layout, Kalena Agrahara, Gottigere post, Bannerghatta Road, Bangalore- 560076 Have Changed My Minor Son name from SUCHET SURESH JAVUR To SUCHETH SURESH JAVUR vide Affidavit Dated 20/06/2022 Before Notary Jain Swarnamala Bangalore

CHANGE OF NAME
I, MAHESH MADIWALARA residing at Flat No. 22192, Prestige Jindal City, Chikkabidarikallu, Nagasandra (Post), Bangalore - 560 073 have changed my name to MAHESH MADIWALRA vide affidavit dated: 23.06.2022 before Notary K. Venkateshan, Bangalore. Henceforth, I shall be called MAHESH MADIWALRA.

CHANGE OF NAME
I, CHAITRA S.N. residing at No. TF-306, Saswath Magnolia, 1st Cross, Siddeshwara Layout, Sidedahalli Main Road, Nagasandra Post, Bangalore - 560 073 have changed my name to CHAITRAA S. NANJAPPA vide affidavit dated: 23.06.2022 before Notary K. Venkateshan, Bangalore. Henceforth, I shall be called as CHAITRAA S. NANJAPPA only.

I, VIJAY DAYASHANKAR PAL, Residing at No.140/1, Room No.15, 2nd Floor, Mohan Kumar Building, Kodathi Village Road, Kodathi Gate, Bangalore-35 hereby declare that PAL VIJAYKUMAR DAYASHANKAR and VIJAY DAYASHANKAR PAL both belongs to me and henceforth consider my name as VIJAY DAYASHANKAR PAL vide affidavit dated 18-06-2022, before Notary Hegde Ganapati Venkataraman, Bengaluru.

I, SMT. VASANTHA W/O R. Dwarakanatha Rao, R/@ #72, Janatha Colony, Mariyappanapalya, Bangalore-56. I hereby declare that changed my Son's name from D DISHANTH KESARKAR TO RITHVIN KESARKAR. Vide affidavit dated: 22/06/2022 before Notary Ravi Bangalore.

I, TEJASHWINI D/o. Sidrai Khangaonkar Residing at H.No. 8A 1st Main, 1st Cross, Bhuvaneshwari Nagar, R.T. Nagar Post Bangalore- 560032 have changed my name to TEJASHWINI W/o. Lokesh Gundkal vide affidavit dated 16.10.2021, before notary Shri. S.N. Jalihal Belgavi, Henceforth I shall be known as TEJASHWINI LOKESH GUNDKAL.

I KADROLLI SHAMBHAVI SHRISHAIL R/a. #57/58/59, Flat No.202, K2N Olive Hill View Apartment, 4th cross, MLA Layout, Kalena Agrahara, Gottigere post, Bannerghatta Road, Bangalore- 560076 Have Changed My name To SHAMBHAVI SURESH JAVUR vide Affidavit Dated 20/06/2022 Before Notary Jain Swarnamala Bangalore

I, SUDEEPTHI JANGATI Residing at No. 162 7th Cross, 9th Main NTI Layout Vidyaranyapura Bengaluru- 560097, have changed my name to SUDEEPTHI K RAJ (Passport No. H9434592) vide affidavit dated 23.06.2022 before notary H.K. Gopalagowda Bangalore. Henceforth I shall be known as SUDEEPTHI K RAJ only.

Lost

LOST
Pillamma, W/o. Muniyappa #164, 1st Main Muneshwara Block, Cholanayaka nahalli, Bengaluru - 560 032 have lost my original deed on date 20-06-2022 time 5.00 am to 6.53 pm # Old 63, New No. 63/1, Khata No. 41, Cholanayakanahalli, Muneshwara Block, R.T. Nagar, Bengaluru - 560 032 Registed Document No. 2185/14-15 Dated: 15-07-2014 situated in Cholanayakanahalli, Hebbal, Bengaluru North.
Any who finds the above Original Site Deed Contact: Smt. Pillamma, 84311 99999 / 98456 16284.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

₹60 ಸಾವಿರ ಕೋಟಿ ದಾನ ನೀಡುವುದಾಗಿ ಹೇಳಿದ ಅದಾನಿ

ನವದೆಹಲಿ (ಪಿಟಿಐ): ಏಷ್ಯಾದ ಅತ್ಯಂತ ಶ್ರೀಮಂತ, ಉದ್ಯಮಿ ಗೌತಮ್ ಅದಾನಿ ಮತ್ತು ಅವರ ಕುಟುಂಬವು ₹ 60 ಸಾವಿರ ಕೋಟಿಯನ್ನು ದಾನವಾಗಿ ನೀಡುವುದಾಗಿ ಹೇಳಿದೆ. ಗೌತಮ್ ಅದಾನಿ ಅವರು ತಮ್ಮ 60ನೆಯ ಹುಟ್ಟುಹಬ್ಬದ ಅಂಗವಾಗಿ ಈ ದಾನಕ್ಕೆ ಮುಂದಾಗಿದ್ದಾರೆ.

ಈ ಹಣವನ್ನು ಆರೋಗ್ಯಸೇವೆ, ಶಿಕ್ಷಣ, ಕೌಶಲ ಅಭಿವೃದ್ಧಿ ವಲಯಗಳಲ್ಲಿ ಬಳಸಿಕೊಳ್ಳಲಾಗುತ್ತದೆ ಎಂದು ಅದಾನಿ ಸಮೂಹ ಪ್ರಕಟಣೆಯಲ್ಲಿ ತಿಳಿಸಿದೆ. ಅದಾನಿ ಅವರು ಶುಕ್ರವಾರ ಹುಟ್ಟುಹಬ್ಬ ಆಚರಿಸಿಕೊಳ್ಳಲಿದ್ದಾರೆ. ದಾನವಾಗಿ ನೀಡುವುದಾಗಿ ಹೇಳಿರುವ ಮೊತ್ತವು ಅದಾನಿ ಅವರ ಒಟ್ಟು ಸಂಪತ್ತಿನ ಶೇಕಡ 8ಕ್ಕಿಂತ ತುಸು ಹೆಚ್ಚು. ಇದು ದೇಶದ ಕಾರ್ಪೊರೇಟ್ ಇತಿಹಾಸದಲ್ಲಿನ ಅತಿದೊಡ್ಡ ದಾನಗಳಲ್ಲಿ ಒಂದು.

‘ಭ್ರಷ್ಟಾಚಾರ ಹಣದಿಂದ ಆಪರೇಷನ್ ಕಮಲ’

ಮೈಸೂರು: ‘ಭ್ರಷ್ಟಾಚಾರದ ಹಣ ದಿಂದಲೇ ಮಹಾರಾಷ್ಟ್ರದಲ್ಲಿ ಬಿಜೆಪಿ ಆಪರೇಷನ್ ಕಮಲಕ್ಕೆ ಮುಂದಾಗಿದೆ’ ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಹಿಂದೂ ಧರ್ಮ, ಮಹಾಭಾರತ, ರಾಮಾಯಣದ ಅಂಶಗಳಿಗೆ ಕತ್ತರಿ ಹಾಕಿದ್ದರು ● ಟಿಪ್ಪು ಒಲೈಕೆಗಾಗಿ ಮೈಸೂರು ಅರಸರಿಗೆ ಅನ್ಯಾಯ

‘ಕುವೆಂಪು, ಕೆಂಪೇಗೌಡರ ಪಾಠ ತೆಗೆಸಿದ್ದು ಸಿದ್ದರಾಮಯ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಟಿಪ್ಪುವಿನ ಓಲೈಕೆಗಾಗಿ ರಾಜ್ಯದ ಅಭ್ಯುದಯಕ್ಕೆ ಶ್ರಮಿಸಿದ ಮೈಸೂರು ಒಡೆಯರ್ ವಂಶಕ್ಕೆ ಪಠ್ಯಪುಸ್ತಕಗಳಲ್ಲಿ ಅನ್ಯಾಯ ಮಾಡಿದೆ. ಕುವೆಂಪು ಅವರ ಪಾಠಗಳನ್ನು ತೆಗೆದುಹಾಕಿದ್ದೂ ಅಲ್ಲದೇ, ನಾಡಪ್ರಭು ಕೆಂಪೇಗೌಡರ ಕುರಿತು ಇದ್ದ ಪಾಠವನ್ನೂ ಕಿತ್ತು ಹಾಕಿಸಿದೆ’ ಎಂದು ಕಂದಾಯ ಸಚಿವ ಆರ್.ಅಶೋಕ ಆರೋಪಿಸಿದರು.

ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯಪುಸ್ತಕಗಳ ಪರಿಷ್ಕರಣೆಯನ್ನು ಬಲವಾಗಿ ಸಮರ್ಥಿಸಿ ಕೊಂಡ ಕಂದಾಯ ಸಚಿವ ಆರ್.ಅಶೋಕ ಅವರು, ‘ಭಾರತೀಯ ಸಂಸ್ಕೃತಿ, ಹಿಂದೂ ಧರ್ಮ ಮತ್ತು ಪರಂಪರೆಯನ್ನು ಮೂಲೆಗುಂಪು ಮಾಡಿದೆ. ಇದಕ್ಕಾಗಿ ಬರಗೂರು ರಾಮಚಂದ್ರಪ್ಪ ಅವರನ್ನು ಬಳಸಿಕೊಂಡಿದೆ’ ಎಂದು ಅವರು ಹರಿಹಾಯ್ದರು.

ಸುದ್ದಿಗೋಷ್ಠಿಯ ಪ್ರಮುಖ ಅಂಶಗಳು:

- ಹಿಂದೆ ಬಿಜೆಪಿ ಸರ್ಕಾರ ಅವಧಿಯಲ್ಲಿ (2005–06) ಪಠ್ಯಪುಸ್ತಕಗಳಲ್ಲಿ ಕುವೆಂಪು ಅವರ 8 ಪದ್ಯ/ಗದ್ಯಗಳಿದ್ದವು. ಸಿದ್ದರಾಮಯ್ಯ ಸರ್ಕಾರ ಅದನ್ನು 7 ಕ್ಕೆ ಇಳಿಸಿತು. ಕುವೆಂಪು ಅವರ ‘ರಾಮಾಯಣ ದರ್ಶನಂ’ನ ಹಲವು ಅಂಶಗಳನ್ನು ಒಳಗೊಂಡಿದ್ದ ಗದ್ಯ ‘ಅನಲೆ’ಯನ್ನು ಕಿತ್ತು ಹಾಕಿದರು. ಉತ್ತಮ ಮಾನವೀಯ ಮೌಲ್ಯದ ರಚನೆಯನ್ನು ಸಿದ್ದರಾಮಯ್ಯ ತೆಗೆಸಿದ್ದು ಅಮಾನವೀಯವಲ್ಲವೆ? ಅದರ ಬದಲಿಗೆ ಹಂಸಲೇಖ ಬರೆದ ಪದ್ಯ ಸೇರಿಸಲಾಯಿತು. ಬೊಮ್ಮಾಯಿ ಸರ್ಕಾರ ಗದ್ಯ/ಪದ್ಯಗಳ ಸಂಖ್ಯೆ 7 ರಿಂದ 10ಕ್ಕೆ ಏರಿಸಿದೆ.
- ಕುವೆಂಪು ಅವರು ‘ಅನೇಕರ ಪ್ರೋತ್ಸಾಹದಿಂದ ಮುಂದೆ ಪ್ರಖ್ಯಾತ ಕವಿ ಎನಿಸಿಕೊಂಡರು’ ಎಂಬ ಸಾಲು ಬರೆದಿದ್ದು ಬರಗೂರು ಸಮಿತಿ. ಚಕ್ರತೀರ್ಥ ಮೇಲೆ ಆರೋಪ ಹೊರಿಸಿದರು. ಈಗ ಈ ಬಗ್ಗೆ ತಕರಾರು ಎತ್ತುವವರು, ಸಿದ್ದರಾಮಯ್ಯ ಕಾಲದಲ್ಲಿ ಬಾಯಿ ಮುಚ್ಚಿಕೊಂಡಿದ್ದು ಏಕೆ?
- ಹಿಂದೆ ಬಿಜೆಪಿ ಸರ್ಕಾರ ಇದ್ದಾಗ 6 ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ನಾಡಪ್ರಭು ಕೆಂಪೇಗೌಡರ ಪಾಠ ಇತ್ತು. ಸಿದ್ದರಾಮಯ್ಯ ಸರ್ಕಾರ ಇದನ್ನು ಕಿತ್ತು ಹಾಕಿತು. ಕೆಂಪೇಗೌಡರ ಯಾವುದೇ ಉಲ್ಲೇಖವೂ ಇಲ್ಲದಂತೆ ನೋಡಿಕೊಂಡರು. ‘ಕೆಂಪೇಗೌಡರ ಕನಸು’ ಎಂಬ ಪಾಠವನ್ನು ಪುನಃ ನಮ್ಮ ಸರ್ಕಾರ ಸೇರಿಸಿದೆ. ಡಿ.ಕೆ.ಶಿವಕುಮಾರ್ ಅವರು ಬರಗೂರು ಸಮಿತಿಯ ಪುಸ್ತಕ ಹರಿಯಬೇಕಿತ್ತು.
- ಸಿದ್ದರಾಮಯ್ಯ ಅಲ್ಪಸಂಖ್ಯಾತರ ಓಲೈಕೆಗಾಗಿ ಮೈಸೂರು ಅರಸರನ್ನು ಕಡೆಗಣಿಸಿ ಟಿಪ್ಪುವಿನ ವೈಭವೀಕರಣಕ್ಕಾಗಿ ಪಠ್ಯವನ್ನು ಬಳಸಿಕೊಂಡಿತು. ಕೆಆರ್‌ಎಸ್ ಅಣೆಕಟ್ಟೆ, ಶಿವನಸಮುದ್ರ ವಿದ್ಯುತ್ ಉತ್ಪಾದನಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಬ್ಯಾಂಕ್ ಸೇರಿದಂತೆ ಹಲವು ಮಹತ್ವ ಕೊಡುಗೆಗಳನ್ನು ನೀಡಿದ ಮೈಸೂರು ಒಡೆಯರ ಕುರಿತ ಪಾಠವನ್ನು ತೆಗೆದು ಹಾಕಿತು. 10 ನೇ ತರಗತಿಯಲ್ಲಿ ಟಿಪ್ಪುವಿನ ವೈಭವೀಕರಣಕ್ಕೆ 6 ಪುಟಗಳನ್ನು ಉಪಯೋಗಿಸಿಕೊಂಡರು
- ಬರಗೂರು ರಚಿಸಿದ 6 ನೇ ತರಗತಿ ಸಮಾಜ ವಿಜ್ಞಾನದಲ್ಲಿ ಪುಟ 21 ರಲ್ಲಿ ಪ್ರಸಿದ್ಧ ದೇವಾಲಯಗಳು ಎಂಬ ಉಪಶೀರ್ಷಿಕೆಯಡಿ ಮಸೀದಿ ಮತ್ತು ಚರ್ಚ್‌ಗಳ ಚಿತ್ರಗಳನ್ನು ಉಳಿಸಿಕೊಂಡು ಹಿಂದೂ ದೇವಾಲಯದ ಚಿತ್ರವನ್ನು ತೆಗದಿದ್ದಾರೆ. ದೇವಾಲಯದ ಬದಲಿಗೆ ಟಿಪ್ಪು ಅರಮನೆ ಚಿತ್ರವನ್ನು ಹಾಕಿದರು.
- ಬಿಜೆಪಿ ಅವಧಿಯಲ್ಲಿ 7 ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ‘ದಿಲ್ಲಿಯ ಸುಲ್ತಾನರು’ ಎಂಬ ಪಾಠವಿತ್ತು. ಅದರಲ್ಲಿ ಟರ್ಕರ ದಾಳಿ ಎಂಬ ಉಪಶೀರ್ಷಿಕೆಯಡಿ ಮಹಮದ್ ಘಜನಿ ಭಾರತದ ಮೇಲೆ ದಾಳಿ ಮಾಡಿದ ಮಾಹಿತಿ ಇತ್ತು. ಘಜನಿ ಮಥುರೆಯ ಶ್ರೀಕೃಷ್ಣ ಮಂದಿರ ಮತ್ತು ಗುಜರಾತಿನ ಸೋಮನಾಥ ದೇವಾಲಯಗಳ ಮೇಲೆ ದಾಳಿ ನೆಲಸಮ ಮಾಡಿದ್ದು, ಸ್ವಾತಂತ್ರ್ಯ ಬಳಿಕ ಸೋಮನಾಥ ಪುನರ್ ನಿರ್ಮಾಣ ಮಾಡಿದ ಅಂಶವನ್ನು ಮತ್ತು ದೇವಸ್ಥಾನದ ಚಿತ್ರವನ್ನು ಕಾಂಗ್ರೆಸ್ ಸರ್ಕಾರ ತೆಗೆದುಹಾಕಿತು.
- ಹಿಂದೂ ದೇವಾಲಯಗಳನ್ನು ಮುಸ್ಲಿಂ ಆಕ್ರಮಣಕಾರರು ನಾಶ ಮಾಡಿದರು ಎಂಬ ಅಂಶ ಮಕ್ಕಳು ತಿಳಿದುಕೊಳ್ಳಬಾರದು ಎಂಬುದು ಸಿದ್ದರಾಮಯ್ಯ ಅವರ ಆಶಯ. ಅದಕ್ಕೆ ಪೂರಕವಾಗಿ ಬರಗೂರು ರಾಮಚಂದ್ರಪ್ಪ ನೈಜ ಚರಿತ್ರೆಯನ್ನು ಮುಚ್ಚಿಡುವ ಕೆಲಸ ಮಾಡಿದರು.
- ವಲಸೆಯ ಸಂದರ್ಭದಲ್ಲಿ ಭಾರತ ಮತ್ತು ಪಾಕಿಸ್ತಾನ ಎರಡೂ ಕಡೆ ಹಿಂಸಾಚಾರ ನಡೆದಾಗ ಅದರ ಶಮನಕ್ಕಾಗಿ ಮಹಾತ್ಮಗಾಂಧಿಯವರು ಕೋಲ್ಕತ್ತದಲ್ಲಿ ಗೀತೆಯನ್ನು ಪಠಿಸುತ್ತಾ ಉಪವಾಸ ಮಾಡಿದರು ಎಂಬ ಅಂಶ 10 ನೇ ತರಗತಿ ಪಾಠದಲ್ಲಿ ಇತ್ತು. ಅದಕ್ಕೆ ಕತ್ತರಿ ಆಡಿಸಿದ ಬರಗೂರು ಸಮಿತಿ, ‘ಗೀತೆ’(ಭಗವದ್ಗೀತೆ) ಪದವನ್ನು ಉದ್ದೇಶಪೂರ್ವಕವಾಗಿ ತೆಗೆದು ಹಾಕಿದರು.
- ತಿರುಚಿದ ನಾಡಗೀತೆ ಪೋಸ್ಟ್ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ 2017 ರಲ್ಲಿ ರೋಹಿತ್ ಚಕ್ರತೀರ್ಥ ವಿರುದ್ಧ ದೂರು ದಾಖಲಾಗಿತ್ತು. ವಿಚಾರಣೆ ನಡೆಸಿ ಪೊಲೀಸರು ‘ಬಿ’ ರಿಪೋರ್ಟ್ ಸಲ್ಲಿಸಿದ್ದರು. ಕುವೆಂಪು ಬಗ್ಗೆ ಈಗ ಕಳಕಳಿ ವ್ಯಕ್ತಪಡಿಸುವ ಸಿದ್ದರಾಮಯ್ಯ ಆಗಲೇ ಏಕೆ ಕ್ರಮ ಕೈಗೊಳ್ಳಲಿಲ್ಲ.

ಸಮರ್ಥನೆಗೆ ಬಂದ ನಾಲ್ವರು ಸಚಿವರು

- ಸುದ್ದಿಗೋಷ್ಠಿಯಲ್ಲಿ ಲಿಂಗಾಯತ ಸಮುದಾಯಕ್ಕೆ ಸೇರಿದ ಸಿ.ಸಿ.ಪಾಟೀಲ, ಕುರುಬ ಸಮಾಜಕ್ಕೆ ಸೇರಿದ ಭೈರತಿ ಬಸವರಾಜ ಮತ್ತು ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಶಿವರಾಂ ಹೆಬ್ಬಾರ್ ಇದ್ದರು. ಆದರೆ ಅವರು ಯಾವುದೇ ಪ್ರಶ್ನೆಗಳಿಗೆ ಉತ್ತರಿಸುವ ಗೋಜಿಗೆ ಹೋಗಲಿಲ್ಲ.
- ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು ಸುದ್ದಿಗೋಷ್ಠಿಯ ನೇರ ಪ್ರಸಾರವನ್ನು ದೆಹಲಿಯಿಂದಲೇ ವೀಕ್ಷಿಸಿ, ಬಳಿಕ ಅಶೋಕ ಜತೆ ದೂರವಾಣಿಯಲ್ಲಿ ಮಾತನಾಡಿದರು.
- ಸೂಕ್ತ ಆದೇಶ ಇಲ್ಲದೇ ರೋಹಿತ್ ಚಕ್ರತೀರ್ಥ ಸಮಿತಿ ಪಠ್ಯ ಪುಸ್ತಕ ಪರಿಷ್ಕರಣೆ ಮಾಡಿದೆ ಎಂಬ ವಿಷಯವನ್ನು ಒಪ್ಪಿಕೊಳ್ಳದ ಅಶೋಕ, ಘಟನೋತ್ತರ ಅನುಮೋದನೆ ಪಡೆದು, ಪರಿಷ್ಕರಿಸಲಾಗಿದೆ ಎಂದು ವಾದಿಸಿದರು.

‘ಪ್ರತ್ಯೇಕ ರಾಜ್ಯದ ಪ್ರಸ್ತಾವ ಇಲ್ಲ’

ನವದೆಹಲಿ: ‘ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕೆಂಬ ಚಿಂತನೆ, ವಿಚಾರ ಹಾಗೂ ಪ್ರಸ್ತಾವವು ಸರ್ಕಾರದ ಮಟ್ಟದಲ್ಲಿ ಇಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದರು.

ಕರ್ನಾಟಕ ಭವನದಲ್ಲಿ ಸುದ್ದಿಗಾರರ ಜತೆಗೆ ಗುರುವಾರ ಮಾತನಾಡಿದ ಅವರು, ‘ಸಚಿವ ಉಮೇಶ ಕತ್ತಿ ಅವರು ಈ ರೀತಿ ಹೇಳಿಕೆ ನೀಡಿರುವುದು ಮೊದಲ ಬಾರಿಯೇನಲ್ಲ. ಹತ್ತು ಹಲವಾರು ವರ್ಷಗಳಿಂದ ಇಂತಹ ಹೇಳಿಕೆ ನೀಡುತ್ತಲ್ಲೇ ಬಂದಿದ್ದಾರೆ. ಅದಕ್ಕೆ ಅವರೇ ಉತ್ತರ ನೀಡಬೇಕು’ ಎಂದರು.

ವರಿಷ್ಠರ ಭೇಟಿ ಇಲ್ಲ: ‘ಬಿಜೆಪಿಯ ರಾಷ್ಟ್ರಪತಿ ಅಭ್ಯರ್ಥಿ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಬಿಜೆಪಿ ಅಧಿಕಾರದಲ್ಲಿರುವ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ಹಾಜರಿರಬೇಕು ಎಂದು ವರಿಷ್ಠರು ಸೂಚನೆ ನೀಡಿದ್ದಾರೆ. ಸೂಚಕರಾಗಿಯೂ ಸಹಿ ಹಾಕುವಂತೆ ನಿರ್ದೇಶನ ನೀಡಿದ್ದಾರೆ. ಅದಕ್ಕಾಗಿ ದೆಹಲಿಗೆ ಬಂದಿದ್ದೇನೆ’ ಎಂದು ಬೊಮ್ಮಾಯಿ ಹೇಳಿದರು.

‘ರಾಷ್ಟ್ರಪತಿ ಚುನಾವಣೆಯ ಕಡೆಗೆ ಪಕ್ಷದ ವರಿಷ್ಠರು ಹೆಚ್ಚಿನ ಗಮನ ಹರಿಸಿದ್ದಾರೆ. ಹೀಗಾಗಿ, ಸಂಪುಟ ವಿಸ್ತರಣೆ ಸಂಬಂಧ ಅವರನ್ನು ಭೇಟಿ ಮಾಡುತ್ತಿಲ್ಲ. ಕೇಂದ್ರ ಸಚಿವರನ್ನು ಸಹ ಭೇಟಿ ಮಾಡುತ್ತಿಲ್ಲ’ ಎಂದರು.

‘ನಾನು ಪ್ರತಿ ಬಾರಿ ದೆಹಲಿಗೆ ಭೇಟಿ ನೀಡುವ ಸಂದರ್ಭದಲ್ಲಿ ಸಂಪುಟ ವಿಸ್ತರಣೆ ಬಗ್ಗೆ ಸುದ್ದಿಯಾಗುತ್ತದೆ. ಸಚಿವ ಸಂಪುಟ ವಿಸ್ತರಣೆ ಬಗ್ಗೆ ನಾನಾಗಿ ಅಧಿಕೃತವಾಗಿ ಹೇಳುವವರೆಗೆ ಏನೂ ಇರುವುದಿಲ್ಲ’ ಎಂದರು.

ಯೋಗೇಶ್ವರ ಲಾಬಿ: ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ ಅವರು ಕಳೆದ ಮೂರು ದಿನಗಳಿಂದ ದೆಹಲಿಯಲ್ಲಿ ವಾಸ್ತವ್ಯ ಹೂಡಿ ವರಿಷ್ಠರ ಭೇಟಿಗೆ ಪ್ರಯತ್ನ ನಡೆಸಿದ್ದಾರೆ. ಕೆಲವೇ ದಿನಗಳಲ್ಲಿ ಸಚಿವ ಸಂಪುಟ ವಿಸ್ತರಣೆಗೆ ವರಿಷ್ಠರ ಹಸಿರು ನಿಶಾನೆ ದೊರಕಬಹುದು ಎಂಬ ನಿರೀಕ್ಷೆಯಲ್ಲಿರುವ ಅವರು, ಸಂಪುಟ ಸೇರ್ಪಡೆಗಾಗಿ ಪ್ರಯತ್ನ ನಡೆಸಿದ್ದಾರೆ.

ರಾಜಕೀಯ ವಿರೋಧಿಗಳಿಗೆ ಗ್ರಾ.ಪಂ ಮಾಜಿ ಸದಸ್ಯನ ಎದಿರೇಟು

ನಾಯಿಗೆ ಜನ್ಮದಿನ, ಭರ್ಜರಿ ಬಾಡೂಟ

ಪ್ರಜಾವಾಣಿ ವಾರ್ತೆ

ಮೂಡಲಗಿ (ಬೆಳಗಾವಿ ಜಿಲ್ಲೆ): ಇಲ್ಲೊಬ್ಬರು ರಾಜಕೀಯ ವಿರೋಧಿಗಳಿಗೆ ಎದಿರೇಟು ನೀಡಲು ತಮ್ಮ ನೆಚ್ಚಿನ ನಾಯಿಯ ಜನ್ಮದಿನ ಆಚರಿಸಿ, ಮೆರವಣಿಗೆ ಮಾಡಿ, ಊರಿಗೆ ಭರ್ಜರಿ ಬಾಡೂಟ ಹಾಕಿಸಿದ್ದಾರೆ!

ಮೂಡಲಗಿ ತಾಲ್ಲೂಕಿನ ತುಕ್ಕಾನಟ್ಟಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಶಿವಪ್ಪ ಮರ್ದಿ ಅವರು ಸಾಕಿದ ‘ಕ್ರಿಶ್’ ಎಂಬ ನಾಯಿಗೆ ಜೂನ್ 21ರಂದು ಜನ್ಮದಿನಾಚರಣೆ ಮಾಡಿದ್ದು, ಅದರ ವಿಡಿಯೊಗಳು ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ನಾಯಿಯನ್ನು ಅಲಂಕೃತ ಜೀಪ್‌ನಲ್ಲಿ ವಾದ್ಯಮೇಳಗಳೊಂದಿಗೆ ಮೆರವಣಿಗೆ ಮಾಡಲಾಗಿದೆ. 50 ಕೆ.ಜಿ ತೂಕದ ಕೇಕ್ ಕತ್ತರಿಸಿ ನಾಯಿಗೂ ತಿನ್ನಿಸಿ, ಜನರಿಗೂ ಹಂಚಲಾಗಿದೆ. 2 ಕ್ವಿಂಟಲ್ ಚಿಕನ್, 50 ಕೆ.ಜಿ ಕಾಜೂಕರಿ ಬಳಸಲಾಗಿತ್ತು. ವೈವಿಧ್ಯ ಅಡುಗೆ ಮಾಡಿ 5 ಸಾವಿರ ಮಂದಿಗೆ ಊಟ ಹಾಕಿಸಲಾಗಿದೆ.

‘20 ವರ್ಷಗಳಿಂದ ನಾನು ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದೆ. ಈ ಬಾರಿ ಹೊಸಬರು ಆಯ್ಕೆಯಾಗಿದ್ದಾರೆ. ಈಚೆಗೆ ಅವರು ಜನ್ಮದಿನ ಆಚರಿಸಿಕೊಂಡರು. ಆಗ ‘ಈ ಹಿಂದಿನ ಸದಸ್ಯರು ಅನುದಾನವನ್ನು ನಾಯಿಯಂತೆ ತಿಂದು ಹೋಗಿದ್ದಾರೆ’ ಎಂಬ ಆರೋಪ ಮಾಡಿದ್ದರು. ಅವರ ವ್ಯಂಗ್ಯಕ್ಕೆ ಪ್ರತ್ಯುತ್ತರ ನೀಡಲು ನನ್ನ ನಾಯಿಯ ಜನ್ಮದಿನವನ್ನು ಅದ್ದೂರಿಯಾಗಿ ಆಚರಿಸಿದ್ದೇನೆ’ ಎಂದು ಶಿವಪ್ಪ ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದರು.

ಕ್ರಿಶ್ ಜನ್ಮದಿನದ ಪೋಸ್ಟ್ ನೋಡಿ ಸಾಮಾಜಿಕ ಜಾಲತಾಣಗಳಲ್ಲಿ ತಮಾಷೆಯ ಪ್ರತಿಕ್ರಿಯೆಗಳೂ ವ್ಯಕ್ತವಾಗಿವೆ. ಒಂದೆಡೆ ‘ಚಾರ್ಲಿ’ಯ ಓಟ, ಇನ್ನೊಂದೆಡೆ ‘ಕ್ರಿಶ್’ ಬಾಡೂಟ ಎಂದೂ ಯುವಜನರು ಪ್ರತಿಕ್ರಿಯಿಸಿದ್ದಾರೆ.

ಮೂಡಲಗಿ ತಾಲ್ಲೂಕಿನ ತುಕ್ಕಾನಟ್ಟಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಶಿವಪ್ಪ ಮರ್ದಿ ಅವರು 50 ಕೆ.ಜಿ ಕೇಕ್ ಕತ್ತರಿಸಿ ತಮ್ಮ ನೆಚ್ಚಿನ ನಾಯಿ ‘ಕ್ರಿಶ್’ ಜನ್ಮದಿನ ಆಚರಿಸಿದರು

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ

ಉಸ್ತಾದ್ ಹಫೀಜ್ ಬಾಲೆಖಾನ್
ಸಿತಾರ್ ವಾದಕರು ಮತ್ತು ಗಾಯಕರು
ತಂತಿ ಮಾತಾಡುತಾವೋ
ಸೆಲೆಬ್ರಿಟಿ LIVE
ಬೆಳಿಗ್ಗೆ 11 ರಿಂದ 12

ನೇಮಕ

ವಾಷಿಂಗ್ಟನ್(ಪಿಟಿಐ): ಭಾರತೀಯ-ಅಮೆರಿಕದ ಕಾನೂನು ತಜ್ಞೆ ಅಂಜಲಿ ಚತುರ್ವೇದಿ ಅವರು ಹಿರಿಯ ನಾಗರಿಕರ ಆರೋಗ್ಯ ಸೇವೆ ಇಲಾಖೆಯ ಜನರಲ್ ಕೌನ್ಸೆಲ್ ಆಗಿ ನಾಮ ನಿರ್ದೇಶನ ಮಾಡಿದ್ದಾರೆ.

ಮೂರೇ ದಿನದಲ್ಲಿ ಕುಸಿದ ರಸ್ತೆ

ಒಂದನೇ ಪುಟದಿಂದ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕರ್ನಾಟಕ ಭವನದಲ್ಲಿರುವಾಗಲೇ ಅವರಿಗೆ ದೂರವಾಣಿ ಕರೆ ಮಾಡಿದ್ದ ಪ್ರಧಾನಿ ಸಚಿವಾಲಯದ ಅಧಿಕಾರಿಗಳು ಸಮಗ್ರ ವಿವರಣೆ ಕೇಳಿದರು. ಇದರಿಂದ ಮುಖ್ಯಮಂತ್ರಿ ಅವರು ಮುಜುಗರಕ್ಕೆ ಒಳಗಾದರು. ಕಳಪೆ ಕಾಮಗಾರಿ ನಡೆಸಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ.

‘ಈ ಪ್ರದೇಶದಲ್ಲಿ ನೀರಿನ ಪೈಪ್ ಸೋರಿಕೆಯಿಂದ ರಸ್ತೆ ಕುಸಿದಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ಮುಖ್ಯಮಂತ್ರಿ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಜಲಮಂಡಳಿಯವರು ಕೆಲವು ದಿನಗಳ ಹಿಂದೆ ಈ ರಸ್ತೆಯಲ್ಲಿ ನೀರಿನ ಪೈಪ್‌ಲೈನ್ ಹಾಕಿದ್ದರು. ಬಿಬಿಎಂಪಿ ಅಧಿಕಾರಿಗಳು ಅದರ ಮೇಲೆ ಡಾಂಬರು ಹಾಕಿದ್ದಾರೆ. ಭಾರ ತಾಳಲಾರದೆ ರಸ್ತೆ ಕುಸಿದಿದೆ. ಈಗ ಎರಡು ಇಲಾಖೆಗಳ ಅಧಿಕಾರಿಗಳು ಆರೋಪ ಪ್ರತ್ಯಾರೋಪದಲ್ಲಿ ತೊಡಗಿದ್ದಾರೆ. ವರದಿ ಬಂದ ಕೂಡಲೇ, ಕಳಪೆ ಕೆಲಸ ಮಾಡಿದ ಅಧಿಕಾರಿಯನ್ನು ಅಮಾನತು ಮಾಡಲಾಗುವುದು’ ಎಂದು ಕರ್ನಾಟಕ ಸರ್ಕಾರದ ಮೂಲಗಳು ತಿಳಿಸಿವೆ.

ಕಿತ್ತುಹೋದ ಕೊಮ್ಮಘಟ್ಟ ಮಾದರಿ: ವಿವಿಧ ಕಾಮಗಾರಿಗಳ ಉದ್ಘಾಟನೆಗಾಗಿ ಕೊಮ್ಮಘಟ್ಟದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿಯವರು ಭಾಗವಹಿಸಿದ್ದರು. ಪ್ರಧಾನಿಯವರ ‘ಸುಮಾರ್ಗ’ಕ್ಕಾಗಿ ಕೊಮ್ಮಘಟ್ಟ ಮುಖ್ಯರಸ್ತೆಯನ್ನು ಫಳಫಳ ಹೊಳೆಯುವಂತೆ ಮಾಡಲಾಗಿತ್ತು. ಮುಂದಿನ ಮೂರು ವರ್ಷ ಈ ರಸ್ತೆಗೆ ವೈಟ್ ಟಾಪಿಂಗ್ ಸೇರಿದಂತೆ ಯಾವುದೇ ವೆಚ್ಚ ಮಾಡಲಾಗುವುದಿಲ್ಲ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದ್ದರು.

‘ಕೊಮ್ಮಘಟ್ಟ ಮುಖ್ಯ ರಸ್ತೆಯ ಕೆಲವು ಭಾಗಗಳು ಒಂದೇ ದಿನದಲ್ಲಿ ಕಿತ್ತುಹೋಗಿದೆ. ಕೆಲವೆಡೆ ರಸ್ತೆಯನ್ನು ಕಿತ್ತು ಬದಿಯಲ್ಲಿ ಸುರಿಯಲಾಗಿದೆ’ ಎಂದು ಸ್ಥಳೀಯರು ದೂರಿದ್ದಾರೆ.

ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಸಿದ್ದರಬೆಟ್ಟದಲ್ಲಿ ನಡೆದ ರಂಭಾಪುರಿ ಶಾಖಾ ಮಠದ ವಾರ್ಷಿಕೋತ್ಸವದಲ್ಲಿ ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರಿಗೆ ಸಿದ್ದಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಾಸಕ ಡಾ.ಜಿ.ಪರಮೇಶ್ವರ, ಸಚಿವ ವಿ.ಸೋಮಣ್ಣ, ವೀರಸೋಮೇಶ್ವರ ದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಕೇದಾರ ಪೀಠದ ಭೀಮಾಶಂಕರಲಿಂಗ ಶಿವಾಚಾರ್ಯ ಸ್ವಾಮೀಜಿ, ಮಾಜಿ ಶಾಸಕ ಸುಧಾಕರ್ ಲಾಲ್, ಸಂಸದ ಜಿ.ಎಸ್. ಬಸವರಾಜು ಇದ್ದರು

ಬಸವೇಶ್ವರ ಮೂರ್ತಿಗೆ ಅವಮಾನ; ವ್ಯಕ್ತಿ ವಶಕ್ಕೆ

ಚಿತ್ತಾಪುರ (ಕಲಬುರಗಿ ಜಿಲ್ಲೆ): ಪಟ್ಟಣದ ಲಾಡ್ಜಿಂಗ್ ಕ್ರಾಸ್ ಸಮೀಪದಲ್ಲಿರುವ ಅಶ್ವಾರೂಢ ಬಸವೇಶ್ವರ ಮೂರ್ತಿಯ ಮುಖಕ್ಕೆ ಕಿಡಿಗೇಡಿಯೊಬ್ಬ ಟಿ-ಶರ್ಟ್ ಹಾಕಿ ಅವಮಾನಿಸಿದ್ದರಿಂದ ಗುರುವಾರ ಕೆಲ ಹೊತ್ತು ಪಟ್ಟಣದಲ್ಲಿ ಉದ್ರಿಕ್ತ ವಾತಾವರಣ ಸೃಷ್ಟಿಯಾಗಿತ್ತು.

ಲಿಂಗಾಯತ ಸಮಾಜದ ಮುಖಂಡರು ಘಟನೆಗೆ ಆಕ್ರೋಶ ವ್ಯಕ್ತಪಡಿಸಿದರು. ಸ್ಥಳದಲ್ಲಿ ಮದ್ಯದ ಅಮಲಿನಲ್ಲಿದ್ದ ಅಲಿ ಅಬ್ಬಾಸ್ ಎಂಬುವನನ್ನು ಹಿಡಿದು ಜನರು ವಿಚಾರಿಸಿದಾಗ, ಕೃತ್ಯವೆಸಗಿರುವುದು ಒಪ್ಪಿಕೊಂಡ. ನಂತರ ಆತನನ್ನು ಪೊಲೀಸರಿಗೆ ಒಪ್ಪಿಸಿದರು. ‘ಪಟ್ಟಣದ ಆಶ್ರಯ ಬಡಾವಣೆಯ ನಿವಾಸಿ ಅಲಿ ಅಬ್ಬಾಸ್‌ಗೆ ವಿಚಾರಣೆಗೆ ಒಳಪಡಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಕರಾವಳಿ ಸೇರಿ ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುರುವಾರ ಕೂಡ ಉತ್ತಮ ಮಳೆಯಾಗಿದೆ. ಮಂಗಳೂರು ತಾಲ್ಲೂಕಿನ ಮೂಲ್ಕಿ ಹೋಬಳಿಯಲ್ಲಿ 48.2 ಮಿ.ಮೀ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಗಿರಿಶ್ರೇಣಿ, ಆಲ್ದೂರು, ಕಳಸ ಭಾಗದಲ್ಲಿ ಮಳೆಯಾಗಿದೆ. ನಗರದ ಮತ್ತು ಸುತ್ತಲಿನ ಪ್ರದೇಶದಲ್ಲಿ ಬೆಳಿಗ್ಗೆಯಿಂದಲೂ ಮೋಡ ಕವಿದ ವಾತಾವರಣ ಇತ್ತು. ಮಧ್ಯಾಹ್ನ ಸುಮಾರು 20 ನಿಮಿಷ ಸಾಧಾರಣ ಮಳೆ ಸುರಿಯಿತು.

ಕರಾವಳಿ ಭಾಗದಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ 25.9 ಮಿ.ಮೀ, ಬಂಟ್ವಾಳ 16.8 ಮಿ.ಮೀ, ಮಂಗಳೂರು 28.6 ಮಿ.ಮೀ, ಪುತ್ತೂರು 22.7 ಮಿ.ಮೀ, ಸುಳ್ಯ 12.6 ಮಿ.ಮೀ, ಮೂಡುಬಿದಿರೆ 38.3 ಮಿ.ಮೀ, ಕಡಬ ತಾಲ್ಲೂಕಿನಲ್ಲಿ 14.7 ಮಿ.ಮೀ ಮಳೆ ದಾಖಲಾಗಿದೆ.

ಕಾರವಾರ ವರದಿ: ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ತಗ್ಗಿದೆ. ಕರಾವಳಿಯಲ್ಲಿ ಒಂದೆರಡು ಸಲ ಸಾಧಾರಣ ಮಳೆ ಬಂತು. ಶಿರಸಿ, ಸಿದ್ದಾಪುರ ತಾಲ್ಲೂಕುಗಳ ಕೆಲವೆಡೆ ವರ್ಷಧಾರೆಯಾಯಿತು.

ಜೂನ್ 28ರವರೆಗೆ ರಾಜ್ಯದ ಕರಾವಳಿಯಲ್ಲಿ ಆಗಾಗ ಜೋರಾಗಿ ಮಳೆಯಾಗಬಹುದು ಎಂದು ಭಾರತೀಯ ಹವಾಮಾನ ಇಲಾಖೆಯು ‘ಯೆಲ್ಲೊ ಅಲರ್ಟ್’ ಮುನ್ಸೂಚನೆ ನೀಡಿದೆ. ಕೊಪ್ಪಳ ಜಿಲ್ಲೆಯ ಕುಷ್ಟಗಿ ಮತ್ತು ತಾವರಗೇರಾದ ಸುತ್ತಮುತ್ತಲಿನ ಪ್ರದೇಶದಲ್ಲಿ ಗುರುವಾರ ತುಂತುರು ಮಳೆಯಾಯಿತು.

ಗುರುವಾರ ಮಂಗಳೂರಿನಲ್ಲಿ ಮಳೆಯಾಯಿತು — ಪ್ರಜಾವಾಣಿ ಚಿತ್ರ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

‘ಪಠ್ಯಕ್ಕೆ ಅಪಚಾರ ಅಧ್ಯಯನ: ಎಚ್‌ಡಿಕೆ’

ಬೆಂಗಳೂರು: ‘ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳ ಅವಧಿಯಲ್ಲಿ ಪಠ್ಯಕ್ಕೆ ಏನೆಲ್ಲಾ ಅಪಚಾರ ಆಗಿದೆ ಎಂಬುದನ್ನು ನಾನೂ ಅಧ್ಯಯನ ಮಾಡುತ್ತಿದ್ದೇನೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ಪಠ್ಯಪುಸ್ತಕದ ಬಗ್ಗೆ ಪರ–ವಿರೋಧ ಚರ್ಚೆಗಳು ನಡೆಯುತ್ತಿವೆ. ಕಾಂಗ್ರೆಸ್ ಒಂದು ಕಡೆ ಪಠ್ಯದ ವಿರುದ್ಧ ಮಾತನಾಡುತ್ತಿದೆ. ಸಿದ್ದರಾಮಯ್ಯ ಸರ್ಕಾರ ಪಠ್ಯ ರಚನೆ ಮಾಡಿದ ವಿರುದ್ಧ ಆಪಾದನೆ ಮಾಡುತ್ತಿರುವ ಬಿಜೆಪಿ ಸಚಿವರು ಆಗಿನ ಸರ್ಕಾರ ತಪ್ಪು ಮಾಡಿದೆ ಎಂದು ಹೇಳುತ್ತಿದ್ದಾರೆ ಎಂದರು.

ಕುವೆಂಪು ಅವರಿಗೆ ಅಪಮಾನ ಮಾಡಿದ್ದಾರೆಂದು ಕುವೆಂಪು ವೇದಿಕೆ ಅವರು ಎಚ್.ಡಿ.ದೇವೇಗೌಡರಿಗೆ ಆಹ್ವಾನ ಕೊಟ್ಟಿದ್ದರು. ಆದ್ದರಿಂದ ದೇವೇಗೌಡರು ಹೋರಾಟಕ್ಕೆ ಹೋಗಿದ್ದರು ಎಂದು ಕುಮಾರಸ್ವಾಮಿ ಹೇಳಿದರು.

ಕೋರ್ ಕಮಿಟಿ ನಿರ್ಧಾರ: ಶಾಸಕರಾದ ಗುಬ್ಬಿ ಶ್ರೀನಿವಾಸ್ ಮತ್ತು ಕೆ.ಶ್ರೀನಿವಾಸಗೌಡ ಅವರನ್ನು ಉಚ್ಚಾಟನೆ ಮಾಡಿರುವುದು ಪ್ರಮುಖ ನಾಯಕರ ನಿರ್ಧಾರ. ಪಕ್ಷದ ವಿರುದ್ಧ ಅಡ್ಡ ಮತದಾನ ಮಾಡಿದ್ದಕ್ಕೆ ಉಚ್ಚಾಟನೆ ಮಾಡಲಾಗಿದೆ ಎಂದರು.

‘ಈ ಸಂಬಂಧ ಕೋರ್ಟ್‌ಗೆ ಹೋಗುವುದು ಅಥವಾ ವಿಧಾನಸಭೆ ಸ್ಪೀಕರ್‌ಗೆ ದೂರು ನೀಡುವುದರಿಂದ ಏನೂ ಆಗದು. ಮೊದಲು ಈ ವ್ಯವಸ್ಥೆ ಬದಲಾವಣೆ ಆಗಬೇಕು. ನಮ್ಮ ಸರ್ಕಾರ ಬಂದರೆ ಈ ಕಾನೂನುಗಳಿಗೆ ಬಲ ಕೊಡುವ ಕೆಲಸ ಮಾಡಲಾಗುವುದು’ ಎಂದು ಕುಮಾರಸ್ವಾಮಿ ತಿಳಿಸಿದರು.

‘ದೇಶಕ್ಕೇ ಅನಾಚಾರ ಹರಡಿದ ಬಿಜೆಪಿ’

ಬೆಂಗಳೂರು: ಮಹಾರಾಷ್ಟ್ರದ ಬಿಜೆಪಿ ನಡವಳಿಕೆ ಸಂವಿಧಾನಕ್ಕೆ ಮಾಡುತ್ತಿರುವ ಅಪಚಾರ. ಈ ಅನಾಚಾರವನ್ನು ಬಿಜೆಪಿ ದೇಶವ್ಯಾಪಿ ವಿಸ್ತಾರ ಮಾಡುತ್ತಿದೆ. ಸಂವಿಧಾನ ರಕ್ಷಣೆ ಎನ್ನುವುದು ಇವತ್ತು ಉಳಿದಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿ, ‘ಬಿಜೆಪಿಗೆ ಅಧಿಕಾರದ ದಾಹ ಹೆಚ್ಚಾಗಿದೆ. ಬೇರೆ ಪಕ್ಷ ಅಧಿಕಾರದಲ್ಲಿ ಇರುವುದನ್ನು ಬಿಜೆಪಿ ಸಹಿಸುವುದಿಲ್ಲ’ ಎಂದು ವಾಗ್ದಾಳಿ ನಡೆಸಿದರು.

‘ಬಿಜೆಪಿಯ ಅಧಿಕಾರ ದಾಹ ಎಷ್ಟು ಕೆಟ್ಟದಾಗಿದೆ ಎಂದರೆ, ಮುಂದಿನ ದಿನಗಳಲ್ಲಿ ಸ್ಪಷ್ಟ ಬಹುಮತ ಬಂದ ಸರ್ಕಾರವೂ ಉಳಿಯುವುದೂ ಅನುಮಾನ. ಪೂರ್ಣ ಬಹುಮತ ಇರುವ ಯಾವುದೇ ಪಕ್ಷದ ಸರ್ಕಾರದ ಅವಧಿ ಮುಗಿಸುವುದಕ್ಕೂ ಬಿಜೆಪಿ ಬಿಡುವುದಿಲ್ಲ’ ಎಂದು ಕಿಡಿ ಕಾರಿದರು.

‘ಮೇಲ್ನೋಟಕ್ಕೆ ಉದ್ಧವ್ ಠಾಕ್ರೆ ಶಾಸಕರ ವಿಶ್ವಾಸ ಗಳಿಸಿಲ್ಲವೆಂದು ಹೇಳುತ್ತಿದ್ದಾರೆ. ಆದರೆ, ಅದರ ಹಿಂದೆ ಇರುವುದು ಬಿಜೆಪಿಯೇ. ಕರ್ನಾಟಕದಲ್ಲಿ ನನಗೂ ಇದರ ಅನುಭವವಾಗಿದೆ’ ಎಂದು ಹೇಳಿದರು

ಸಂಕ್ಷಿಪ್ತ ಸುದ್ದಿ

ಡಿಸೆಂಬರ್‌ಗೆ ಶಾಸಕ ಸ್ಥಾನಕ್ಕೆ ರಾಜೀನಾಮೆ: ಶ್ರೀನಿವಾಸ್

ತುಮಕೂರು: ‘ಶಾಸಕ ಸ್ಥಾನಕ್ಕೆ ಡಿಸೆಂಬರ್ ನಂತರ ರಾಜೀನಾಮೆ ಸಲ್ಲಿಸುತ್ತೇನೆ’ ಎಂದು ಜೆಡಿಎಸ್‌ನಿಂದ ಉಚ್ಚಾಟನೆಗೊಂಡಿರುವ ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್ ಗುರುವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಸದ್ಯಕ್ಕೆ ರಾಜೀನಾಮೆ ಬಗ್ಗೆ ಯೋಚಿಸಿಲ್ಲ. ‘ಪಕ್ಷದಿಂದ ಉಚ್ಚಾಟಿಸಿರುವುದರಿಂದ ಅವಮಾನ, ಮುಜುಗರ ಆಗಿಲ್ಲ. ಇದು ಮೊದಲೇ ಗೊತ್ತಿರುವ ವಿಚಾರ. ಗುಬ್ಬಿ ಕ್ಷೇತ್ರಕ್ಕೆ ಜೆಡಿಎಸ್ ಅಭ್ಯರ್ಥಿ ಘೋಷಿಸಿದ ಸಮಯದಲ್ಲೇ ಇಂತಹ ಬೆಳವಣಿಗೆಗಳು ನಡೆಯುತ್ತವೆ ಎಂಬುದು ಗೊತ್ತಿತ್ತು’ ಎಂದರು.

ಉದ್ದಿಮೆ ಸ್ಥಾಪನೆ: ಹಿಂದುಳಿದವರಿಗೆ ರಿಯಾಯಿತಿ

ತುಮಕೂರು: ‘ಆರ್ಥಿಕವಾಗಿ ಹಿಂದುಳಿದವರು ಉದ್ಯಮ ಸ್ಥಾಪಿಸಲು ಮುಂದಾದರೆ ಕೆಐಎಡಿಬಿಯಿಂದ ನೀಡುವ ನಿವೇಶನಕ್ಕೆ ಶೇ 75ರಷ್ಟು ರಿಯಾಯಿತಿ ನೀಡಲಾಗುವುದು’ ಎಂದು ಬೃಹತ್ ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ ತಿಳಿಸಿದರು.

ಕೈಗಾರಿಕಾ ಇಲಾಖೆ ಗುರುವಾರ ಇಲ್ಲಿ ಹಮ್ಮಿಕೊಂಡಿದ್ದ ‘ಉದ್ಯಮಿಯಾಗು–ಉದ್ಯೋಗ ನೀಡು’ ಹಾಗೂ ಕೈಗಾರಿಕಾ ಅದಾಲತ್ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಉದ್ದಿಮೆ ಸ್ಥಾಪಿಸುವ ಪರಿಶಿಷ್ಟರಿಗೆ ಕೆಐಎಡಿಬಿಯಿಂದ ನೀಡುವ ನಿವೇಶನಕ್ಕೆ ಈಗಾಗಲೇ ಶೇ 75ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ಇದೇ ಸೌಲಭ್ಯವನ್ನು ಆರ್ಥಿಕವಾಗಿ ಹಿಂದುಳಿದವರಿಗೂ ನೀಡಲಾಗುವುದು ಎಂದು ಹೇಳಿದರು.

ಶೈಕ್ಷಣಿಕ ಸಂಸ್ಥೆಗಳ ಮೇಲೆ ಐ.ಟಿ ದಾಳಿ

ಬೆಂಗಳೂರು: ಆದಾಯ ತೆರಿಗೆ ವಂಚಿಸಿದ ಪ್ರಕರಣದಲ್ಲಿ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಮೇಲೆ ಆದಾಯ ತೆರಿಗೆ (ಐಟಿ) ಇಲಾಖೆ ಅಧಿಕಾರಿಗಳು ಗುರುವಾರ ಬೆಳಿಗ್ಗೆ ದಾಳಿ ನಡೆಸಿ, ದಾಖಲೆಗಳನ್ನು ಪರಿಶೀಲಿಸಿದರು.

ವಿವಿಧ ಶಿಕ್ಷಣ ಸಂಸ್ಥೆಗಳ 45ಕ್ಕೂ ಹೆಚ್ಚು ಕಡೆ ಏಕಕಾಲಕ್ಕೆ ದಾಳಿ ನಡೆದಿದೆ. ಅಂದಾಜು 70 ವಾಹನಗಳಲ್ಲಿ ಬಂದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಖಲೆಗಳ ಶೋಧ ಕಾರ್ಯ ನಡೆಸಿದರು.

‘ಆದಾಯ ಇದ್ದರೂ ತೆರಿಗೆ ಪಾವತಿಸಲು ಕೆಲವು ಪ್ರಮುಖ ಶಿಕ್ಷಣ ಸಂಸ್ಥೆಗಳು ವಿಫಲವಾಗಿವೆ. ಹೀಗಾಗಿ, ದಾಳಿ ನಡೆಸಿ, ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಸದ್ಯ ಹೆಚ್ಚಿನ ಮಾಹಿತಿ ಬಹಿರಂಗಪಡಿಸಲು ಸಾಧ್ಯ ಇಲ್ಲ’ ಎಂದು ಐಟಿ ಅಧಿಕಾರಿಗಳು ತಿಳಿಸಿದ್ದಾರೆ.

ಪಿಎಸ್‌ಐ ಅಕ್ರಮ: ಎಡಿಜಿಪಿ ಪೌಲ್ ವಿಚಾರಣೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದ ಅಕ್ರಮ ಸಂಬಂಧ ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿಯಾಗಿದ್ದ ಅಮ್ರಿತ್ ಪೌಲ್ ಅವರು ಸಿಐಡಿ ತನಿಖಾಧಿಕಾರಿಗಳ ಎದುರು ಎರಡನೇ ಬಾರಿಗೆ ಗುರುವಾರ ಹಾಜರಾದರು.

ನೇಮಕಾತಿ ವಿಭಾಗದಲ್ಲಿ ಅಮ್ರಿತ್ ಪೌಲ್ ಎಡಿಜಿಪಿ ಆಗಿದ್ದಾಗ 545 ಪಿಎಸ್‌ಐ ಹುದ್ದೆಗಳಿಗೆ ಆಯ್ಕೆಗೆ ನಡೆದ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ. ಈ ಹಗರಣದಲ್ಲಿ ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತರಾಜು ಅವರನ್ನು ಸಿಐಡಿ ಬಂಧಿಸಿದೆ. ಶಾಂತಕುಮಾರ್ ಹೇಳಿಕೆಯ ಮೇಲೆ, ಪ್ರಸ್ತುತ ಆಂತರಿಕ ಭದ್ರತಾ ವಿಭಾಗದ ಎಡಿಜಿಪಿಯಾಗಿರುವ ಅಮ್ರಿತ್ ಪೌಲ್ ಈ ಹಿಂದೆ ಕೂಡ ಎರಡು ದಿನ ವಿಚಾರಣೆ ಎದುರಿಸಿದ್ದರು. ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಈಗಾಗಲೇ 40 ದಾಟಿದೆ.

ಒಎಂಆರ್ ಶೀಟ್ ತಿದ್ದಿರುವ ಆರೋಪದಲ್ಲಿ ಬಂಧಿತರಾಗಿರುವ ಆರೋಪಿಗಳು ಅಮ್ರಿತ್ ಪೌಲ್ ವಿರುದ್ಧ ಹೇಳಿಕೆ ನೀಡಿದ್ದರು. ಬಂಧಿತರ ಹೇಳಿಕೆ ಮತ್ತು ಸಾಂದರ್ಭಿಕ ಸಾಕ್ಷ್ಯಾಧಾರಗಳ ಹಿನ್ನೆಲೆಯಲ್ಲಿ ಸಿಐಡಿ ಎಡಿಜಿ ಉಮೇಶ್ ಕುಮಾರ್ ಸಮ್ಮುಖದಲ್ಲಿ ಡಿವೈಎಸ್ಪಿ ಶೇಖರ್ ಅವರು ಪೌಲ್ ಅವರನ್ನು ವಿಚಾರಣೆಗೆ ಒಳಪಡಿಸಿದರು ಎಂದು ಗೊತ್ತಾಗಿದೆ. ಈ ನಡುವೆ, ಪರೀಕ್ಷೆಯಲ್ಲಿ ನಡೆದ ಅಕ್ರಮಕ್ಕೂ ತನಗೂ ಯಾವುದೇ ಸಂಬಂಧವಿಲ್ಲ ಎಂದು ಪೌಲ್ ಸ್ಪಷ್ಟಪಡಿಸಿದ್ದಾರೆ ಎನ್ನಲಾಗಿದೆ.

ತ್ರಿವಳಿ ಕೊಲೆ ಆರೋಪಿ ಖುಲಾಸೆ

ಬೆಳಗಾವಿ: ಗೃಹಿಣಿ ಹಾಗೂ ಅವರ ಇಬ್ಬರು ಪುಟ್ಟ ಮಕ್ಕಳನ್ನು ಕೊಲೆ ಮಾಡಿದ ಆರೋಪ ಎದುರಿಸುತ್ತಿದ್ದ, ಇಲ್ಲಿನ ಪ್ರವೀಣ ಭಟ್ ಅವರನ್ನು ದೋಷಮುಕ್ತ ಎಂದು ಧಾರವಾಡದ ಹೈಕೋರ್ಟ್ ಪೀಠ ಮಹತ್ವದ ತೀರ್ಪು ನೀಡಿದೆ.

ಪ್ರವೀಣ ಭಟ್

ದೇಶದಾದ್ಯಂತ ಸದ್ದು ಮಾಡಿದ್ದ ಈ ತ್ರಿವಳಿ ಕೊಲೆ ಪ್ರಕರಣದಲ್ಲಿ ಬೆಳಗಾವಿಯ ಎರಡನೇ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯವು ಆರೋಪಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಆದರೆ, ಸೂಕ್ತ ಸಾಕ್ಷ್ಯಾಧಾರ ಇಲ್ಲದ ಕಾರಣ ನೀಡಿ ಹೈಕೋರ್ಟ್‌ನ ದ್ವಿಸದಸ್ಯ ಪೀಠ ಆರೋಪಿಯನ್ನು ಬಿಡುಗಡೆ ಮಾಡಿದೆ.

ಘಟನೆ ಹಿನ್ನೆಲೆ: 2015ರ ಆಗಸ್ಟ್ 16ರಂದು ನಸುಕಿನ ಜಾವ ಇಲ್ಲಿನ ಕುವೆಂಪು ನಗರದ ಮನೆಯಲ್ಲಿ ಗೃಹಿಣಿ ರೀನಾ ಮಾಲಗತ್ತಿ, ಅವರ ಪುತ್ರ ಆದಿತ್ಯ, ಪುತ್ರಿ ಸಾಹಿತ್ಯ ಕೊಲೆ ನಡೆದಿತ್ತು. ರೀನಾ ಜೊತೆಗೆ ಅನೈತಿಕ ಸಂಬಂಧ ಹೊಂದಿದ್ದ ಪ್ರವೀಣ ಭಟ್ ಈ ಕೊಲೆ ಮಾಡಿದ್ದಾಗಿ, ರೀನಾ ಅವರ ಸಹೋದರ ದೂರು ದಾಖಲಿಸಿದ್ದರು.

24 ಗಂಟೆಗಳಲ್ಲಿ ಆರೋಪಿಯನ್ನು ಬಂಧಿಸಿದ್ದ ಪೊಲೀಸರು 514 ಪುಟಗಳ ಆರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿ ಬೆಳಗಾವಿಯ ಎರಡನೇ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 2018ರ ಏಪ್ರಿಲ್ 16ರಂದು ಜೀವಾವಧಿ ಶಿಕ್ಷೆ ನೀಡಿತ್ತು.

ನ್ಯಾಯಮೂರ್ತಿಗಳಾದ ಕೆ.ಎಸ್. ಮುದಗಲ್ ಹಾಗೂ ಎಂ.ಜಿ.ಎಸ್. ಕಮಲ್ ಅವರಿದ್ದ ಹೈಕೋರ್ಟ್ ಪೀಠವು ಆರೋಪಿಯನ್ನು ಖುಲಾಸೆ ಮಾಡಿದೆ. ಆರೋಪಿ ಪರ ವಕೀಲ ಪ್ರವೀಣ ಕರೋಶಿ, ಸರ್ಕಾರದ ಪರಅನುರಾಧಾ ದೇಶಪಾಂಡೆ ವಾದಿಸಿದರು.

‘ಪ್ರಧಾನಿ, ರಾಷ್ಟ್ರಪತಿ ಆಗಾಗ್ಗೆ ಭೇಟಿ ನೀಡಲಿ’

ಬೆಂಗಳೂರು: ‘ಬೆಂಗಳೂರು ಮಹಾನಗರದಲ್ಲಿ ಮೂಲಸೌಕರ್ಯ ಅಭಿವೃದ್ಧಿಯಾಗಬೇಕು ಎಂದರೆ ಪ್ರಧಾನಿ ಮತ್ತು ರಾಷ್ಟ್ರಪತಿ ಆಗಾಗ್ಗೆ ಇಲ್ಲಿಗೆ ಭೇಟಿ ನೀಡುತ್ತಿರಬೇಕು’ ಎಂದು ಕುಟುಕಿರುವ ಹೈಕೋರ್ಟ್, ಈ ಸಂಬಂಧ ಪ್ರಕರಣವೊಂದರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಚಾಟಿ ಬೀಸಿದೆ.

‘ನಗರದ ವಿಶ್ವೇಶ್ವರಯ್ಯ ಬಡಾವಣೆಯಲ್ಲಿನ ಕೆಲ ನಿವೇಶನಗಳಿಗೆ ಒಳಚರಂಡಿ, ಕುಡಿಯುವ ನೀರಿನ ಸಂಪರ್ಕ ಮತ್ತು ರಸ್ತೆ ಸೌಲಭ್ಯ ಕಲ್ಪಿಸಿಲ್ಲ’ ಎಂದು ಆಕ್ಷೇಪಿಸಿ ಪಿ.ಮಂಜುಳಾ ಮತ್ತು ಶಾರದಮ್ಮ ಎಂಬುವರು ಬಿಡಿಎ ಅಧಿಕಾರಿಗಳ ವಿರುದ್ಧ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ಮೊನ್ನೆಯಷ್ಟೇ ಪ್ರಧಾನಿ ಬಂದು ಹೋಗಿದ್ದಾರೆ. ಅದಕ್ಕಾಗಿ ₹ 23 ಕೋಟಿ ಖರ್ಚು ಮಾಡಿ ನಗರದ ಗುಂಡಿಗಳನ್ನು ಮುಚ್ಚಲಾಗಿದೆ. ಇದನ್ನು ಗಮನಿಸಿದರೆ ಪ್ರಧಾನಿ ನಗರದ ಬೇರೆ ಬೇರೆ ಮಾರ್ಗಗಳಲ್ಲಿ ಆಗಾಗ್ಗೆ ಸಂಚರಿಸಬೇಕು. ಆಗ ಅವರನ್ನು ಮೆಚ್ಚಿಸುವ ಸಲುವಾಗಿಯಾದರೂ ಅಧಿಕಾರಿಗಳು ಹಾಳಾಗಿರುವ ರಸ್ತೆಗಳನ್ನು ಸರಿಪಡಿಸಬಹುದು’ ಎಂದು ನ್ಯಾಯಪೀಠ ಬಿಡಿಎ ಕಾರ್ಯವೈಖರಿಯನ್ನು ಕುಟುಕಿತು.

Public Notice

BEFORE THE HON'BLE PRINCIPAL DISTRICT AND SESSIONS KOLAR DISTRICT AT KOLAR
A.P No.65/2020

Petitioner:
National Highways Authority of India Survey No.13, Nagasandra Village, 14th Km from Bangalore – Tumkur Road, Bangalore- 560 073
NHAI, PIU Bangalore
V/S
Respondent No. 1. Sri. D. Ravi Kumar S/o. D. Venkataiah Aged major, Residing at No.50, 1st Floor, `Radha Lakshmi Nilaya' Devasandra Main Road, K. R. Puram, Bangalore - 560036

SUMMONS/ NOTICE FOR SERVICE BY ADVERTISEMENT IN A NEWSPAPER

Whereas the Petitioner above named has filed the above Petition against you under Sec.34(2) of the Arbitration & Conciliation Act, 1996 seeking setting aside of the Arbitral award dated 21st October 2019 passed in respect of Sy. No.151/2 acquired to an extent of 500 Sq. Mtrs. situated at Chakarasanahalli Village, Kolar District. You are hereby summoned to appear in this Court in person or by a pleader on the 06th day of July 2022 at 11 o' clock to answer the same, failing which the Petition will be disposed of ex parte.
Given under my hand and seal of the Court on this 13th day of June 2022.

By order of the Court,
Chief Administrative Officer,
District Court at Kolar.

Advocate for Petitioner
For Singhania & Partners

Public Notice

BEFORE THE HON'BLE PRINCIPAL DISTRICT AND SESSIONS KOLAR DISTRICT AT KOLAR
A.P No.67/2020

Petitioner:
National Highways Authority of India Survey No.13, Nagasandra Village, 14th Km from Bangalore – Tumkur Road, Bangalore- 560 073
NHAI, PIU Bangalore
V/S
Respondent No. 1. Sri. D. Ravi Kumar S/o. D. Venkataiah Aged major, Residing at No.50, 1st Floor, `Radha Lakshmi Nilaya' Devasandra Main Road, K. R. Puram, Bangalore - 560036

SUMMONS/ NOTICE FOR SERVICE BY ADVERTISEMENT IN A NEWSPAPER

Whereas the Petitioner above named has filed the above Petition against you under Sec.34(2) of the Arbitration & Conciliation Act, 1996 seeking setting aside of the Arbitral award dated 21st October 2019 passed in respect of Sy. No.150/2 acquired to an extent of 822 Sq. Mtrs. situated at Chakarasanahalli Village, Kolar District. You are hereby summoned to appear in this Court in person or by a pleader on the 06th day of July 2022 at 11 o' clock to answer the same, failing which the Petition will be disposed of ex parte.
Given under my hand and seal of the Court on this 13th day of June 2022.

By order of the Court,
Chief Administrative Officer,
District Court at Kolar.

Advocate for Petitioner
For Singhania & Partners

ವಾಯುಪಡೆ ಜತೆಗೆ ನಿಮ್ಹಾನ್ಸ್ ಒಪ್ಪಂದ

ಬೆಂಗಳೂರು: ಸಿಬ್ಬಂದಿಗೆ ಕೌನ್ಸೆಲಿಂಗ್ ಕಾರ್ಯಾಗಾರ ನಡೆಸುವ ಬಗ್ಗೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಭಾರತೀಯ ವಾಯುಪಡೆ ಜತೆಗೆ ಒಪ್ಪಂದ ಮಾಡಿಕೊಂಡಿದೆ.

ಏರ್ ಮಾರ್ಷಲ್ ಸಬು ಬಾಲಕೃಷ್ಣನ್ ಹಾಗೂ ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಅವರು ಒಪ್ಪಂದಕ್ಕೆ ಸಹಿ ಹಾಕಿದರು. ಆರು ದಿನಗಳ ಕಾರ್ಯಾಗಾರದಲ್ಲಿ ಭಾರತೀಯ ವಾಯುಪಡೆಯ ಸಿಬ್ಬಂದಿ ಜತೆಗೆ ಸಂಸ್ಥೆಯ ವೈದ್ಯರು ಸಮಾಲೋಚನೆ ನಡೆಸಿ, ಅಗತ್ಯ ಮಾರ್ಗದರ್ಶನ ನೀಡಲಿದ್ದಾರೆ.

ಒತ್ತಡ ನಿರ್ವಹಣೆ, ಮಾನಸಿಕ ಅನಾರೋಗ್ಯದಿಂದ ಹೊರಬರುವಿಕೆ ಸೇರಿದಂತೆ ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸುವ ಬಗ್ಗೆ ಈ ಕಾರ್ಯಾಗಾರದಲ್ಲಿ ವಾಯುಪಡೆಯ ಸಿಬ್ಬಂದಿಗೆ ಮಾರ್ಗದರ್ಶನ ನೀಡಲಾಗುತ್ತದೆ.

ವಿವಿಧ ಬೇಡಿಕೆಗಳ ಈಡೇರಿಕೆಗೆ ಡಯಾಲಿಸಿಸ್ ಘಟಕಗಳ ಸಿಬ್ಬಂದಿ ಒತ್ತಾಯ

ಸಿಬ್ಬಂದಿ ಮುಷ್ಕರ: ಸೇವೆ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ಪಾವತಿ ವಿಳಂಬ ಹಾಗೂ ಕಾರ್ಮಿಕರ ಆರೋಗ್ಯ ವಿಮೆ (ಇಎಸ್‌ಐ) ಮತ್ತು ಭವಿಷ್ಯ ನಿಧಿಗೆ (ಪಿಎಫ್) ಹಣ ಪಾವತಿಸದಿರುವುದನ್ನು ವಿರೋಧಿಸಿ, ಡಯಾಲಿಸಿಸ್ ಘಟಕಗಳ ಸಿಬ್ಬಂದಿ ಗುರುವಾರ ಮುಷ್ಕರ ನಡೆಸಿದರು. ಇದರಿಂದ ಡಯಾಲಿಸಿಸ್ ಸೇವೆಯಲ್ಲಿ ಕೆಲವೆಡೆ ವ್ಯತ್ಯಯವಾಯಿತು.

ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಆರೋಗ್ಯ ಇಲಾಖೆ ಲಿಖಿತ ಭರವಸೆ ನೀಡುವವರೆಗೂ ಮುಷ್ಕರ ಕೈಬಿಡದಿರಲು ಸಿಬ್ಬಂದಿ ನಿರ್ಧರಿಸಿದ್ದಾರೆ. ಇದರಿಂದಾಗಿ ಶುಕ್ರವಾರವೂ ಮುಷ್ಕರ ಮುಂದುವರೆಯಲಿದೆ. ರಾಜ್ಯದಲ್ಲಿ 162 ಡಯಾಲಿಸಿಸ್ ಘಟಕಗಳಿದ್ದು, ಸುಮಾರು 900 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಿವಿಧ ತಾಲ್ಲೂಕುಗಳ ಡಯಾಲಿಸಿಸ್ ಘಟಕಗಳ ತಾಂತ್ರಿಕ ಸಿಬ್ಬಂದಿ ಗುರುವಾರ ಬೆಳಿಗ್ಗೆ ಕಾರ್ಮಿಕ ಭವನದ ಎದುರು ಪ್ರತಿಭಟನೆಗೆ ಮುಂದಾದರು. ಆದರೆ, ಪೊಲೀಸರು ಪ್ರತಿಭಟನೆಗೆ ಅವಕಾಶ ನೀಡಲು ನಿರಾಕರಿಸಿದರು. ಇದರಿಂದಾಗಿ 150ಕ್ಕೂ ಅಧಿಕ ಸಿಬ್ಬಂದಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ಸಿಬ್ಬಂದಿಯ ನಿಯೋಗದ ಜತೆಗೆ ಇಲಾಖೆ ಆಯುಕ್ತ ಡಿ. ರಂದೀಪ್ ಮಾತುಕತೆ ನಡೆಸಿ, ಮನವೊಲಿಸಲು ಪ್ರಯತ್ನಿಸಿದರು. ಈ ವೇಳೆ ಸಿಬ್ಬಂದಿ ತಮ್ಮ ಹಾಗೂ ಘಟಕಗಳಲ್ಲಿನ ಸಮಸ್ಯೆ ತೋಡಿಕೊಂಡರು. 'ವೇತನ ಪಾವತಿ ವಿಳಂಬ, ಇಎಸ್‌ಐ ಮತ್ತು ಪಿಎಫ್ ವಿಳಂಬ ಸೇರಿದಂತೆ ವಿವಿಧ ಸಮಸ್ಯೆಗಳನ್ನು ತಮ್ಮ ವ್ಯಾಪ್ತಿಯಲ್ಲಿ ನಿವಾರಿಸಲು ಕ್ರಮಕೈಗೊಳ್ಳಲಾಗುವುದು' ಎಂದು ಡಿ. ರಂದೀಪ್ ಅವರು ಮೌಖಿಕ ಭರವಸೆ ನೀಡಿದರು. ಲಿಖಿತ ರೂಪದಲ್ಲಿ ಭರವಸೆ ನೀಡದಿದ್ದರಿಂದ ಸಿಬ್ಬಂದಿ ಮುಷ್ಕರವನ್ನು ಮುಂದುವರೆಸಿದ್ದಾರೆ.

'ನಮ್ಮ ಸಮಸ್ಯೆಗಳನ್ನು ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದರೆ, ನಮಗೆ ಲಿಖಿತ ಭರವಸೆ ಸಿಕ್ಕಿಲ್ಲ.

ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಡಯಾಲಿಸಿಸ್ ಘಟಕಗಳ ಸಿಬ್ಬಂದಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು– ಪ್ರಜಾವಾಣಿ ಚಿತ್ರ

ಇದರಿಂದಾಗಿ ಮುಷ್ಕರ ಮುಂದುವರೆಸುತ್ತಿದ್ದೇವೆ' ಎಂದು ಪ್ರತಿಭಟನಾ ಸಿಬ್ಬಂದಿ ಚೇತನ್ ತಿಳಿಸಿದರು.

'ಬಿಆರ್‌ಎಸ್ ಏಜೆನ್ಸಿ 650 ಸಿಬ್ಬಂದಿಗೆ 2021ರ ಜೂನ್ ಮತ್ತು ಜುಲೈ ತಿಂಗಳ ಪೂರ್ಣ ಸಂಬಳ ಪಾವತಿಸಿಲ್ಲ. 2019ರ ನವೆಂಬರ್‌ನಿಂದ 2021ರ ಆಗಸ್ಟ್‌ವರೆಗೆ ಇಎಸ್‌ಐ ಮತ್ತು ಪಿಎಫ್ ನೀಡಿಲ್ಲ' ಎಂದರು.

'ಸರ್ಕಾರದಿಂದ ಬರಬೇಕಾದ ವೇತನವೂ ಬಂದಿಲ್ಲ. 2021ರ ಆಗಸ್ಟ್‌ನಿಂದ 2022ರ ಜನವರಿ ತಿಂಗಳವರೆಗೆ ಸಿಬ್ಬಂದಿಗೆ ಪೂರ್ಣ ವೇತನ ಬಿಡುಗಡೆಯಾಗಿದ್ದರೂ, ವೇತನ ಕಡಿತಗೊಳಿಸಿ ₹ 14 ಸಾವಿರ ನೀಡಲಾಗಿದೆ. ಈ ಅವಧಿಯಲ್ಲಿ ಇಎಸ್‌ಐ ಮತ್ತು ಪಿಎಫ್ ಹಣ ಪಾವತಿಸಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

'ಸಾರ್ವಜನಿಕ ಹುದ್ದೆ: ಶಂಕಾಸ್ಪದ ವ್ಯಕ್ತಿಗಳ ನೇಮಕ ಸಲ್ಲ'

ಬೆಂಗಳೂರು: ಭಾರತೀಯ ರೈಲ್ವೆ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ಎಸಗಿದ ಆರೋಪದಡಿ ಅರ್ಹತಾ ಪಟ್ಟಿಯಿಂದ ತೆಗೆದು ಹಾಕಿದ್ದನ್ನು ಪ್ರಶ್ನಿಸಿದ್ದ ಇಬ್ಬರ ಅರ್ಜಿಯನ್ನು ವಜಾಗೊಳಿಸಿರುವ ಹೈಕೋರ್ಟ್, 'ಸಾರ್ವಜನಿಕ ಉದ್ಯೋಗಾಕಾಂಕ್ಷಿಗಳು ಅನುಮಾನಾಸ್ಪದ ವ್ಯಕ್ತಿತ್ವ ಹೊಂದಿರಬಾರದು' ಎಂದು ಅಭಿಪ್ರಾಯಪಟ್ಟಿದೆ.

ಈ ಸಂಬಂಧ ಹುಬ್ಬಳ್ಳಿ ನಿವಾಸಿಗಳಾದ ಜಿ.ರಾಜೇಶ್ ಮತ್ತು ವಿ.ಜಿ.ಪ್ರಕಾಶ್ ಸಲ್ಲಿಸಿದ್ದ ಅರ್ಜಿಯನ್ನು ಧಾರವಾಡ ಪೀಠದಲ್ಲಿ ಆಲಿಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಮತ್ತು ನ್ಯಾಯಮೂರ್ತಿ ಪಿ.ಕೃಷ್ಣ ಭಟ್ ಅವರನ್ನೊಳಗೊಂಡ ವಿಭಾಗೀಯ ನ್ಯಾಯಪೀಠವು, ಕೇಂದ್ರೀಯ ಆಡಳಿತ ನ್ಯಾಯಮಂಡಳಿ (ಸಿಎಟಿ) ನೀಡಿರುವ ಆದೇಶದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿದೆ.

ಆರೋಪಗಳ ಬಗೆಗಿನ ತನಿಖೆಯ ಕಾನೂನು ಬದ್ಧತೆಯನ್ನು ಪ್ರಶ್ನಿಸಿದ್ದ ಅರ್ಜಿದಾರರು, 'ನೇಮಕಾತಿ ಪ್ರಕ್ರಿಯೆ ನಿಯಮಗಳ ಪ್ರಕಾರ ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲು ಸಾಧ್ಯವಿಲ್ಲ' ಎಂದು ಪ್ರತಿಪಾದಿಸಿದ್ದರು.

ಅರ್ಜಿದಾರರ ಈ ವಾದವನ್ನು ತಳ್ಳಿಹಾಕಿರುವ ನ್ಯಾಯಪೀಠ, 'ಅಭ್ಯರ್ಥಿಗಳು ದುಷ್ಕೃತ್ಯ ಎಸಗಿದ್ದಾರೆ ಎಂಬ ಅಂಶವನ್ನು ಸಿಬಿಐನ ತನಿಖಾ ವರದಿಯ ಪರಿಣತ ಸಂಸ್ಥೆಯು ಸೂಕ್ತ ತನಿಖೆ ನಡೆಸಿ ಪತ್ತೆ ಹಚ್ಚಿದೆ. ಹಾಗಾಗಿ, ಅಂತಹವರನ್ನು ಸಾರ್ವಜನಿಕ ಸೇವೆಗೆ ಸೇರ್ಪಡೆ ಮಾಡುವುದು ಸೂಕ್ತವಲ್ಲ' ಎಂದು ಹೇಳಿದೆ. 2013ರಲ್ಲಿ ಆರಂಭವಾದ ನೇಮಕಾತಿ ಪ್ರಕ್ರಿಯೆಯಲ್ಲಿ ವ್ಯಾಪಕ ಅಕ್ರಮಗಳ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಆ ಬಗ್ಗೆ ತನಿಖೆ ನಡೆಸುವಂತೆ ರೈಲ್ವೆ ಇಲಾಖೆಯು ಸಿಬಿಐಗೆ 2015ರಲ್ಲಿ ಪತ್ರ ಬರೆದಿತ್ತು. ತನಿಖೆ ನಡೆಸಿದ್ದ ಸಿಬಿಐ, 'ಆರೋಪಿಗಳೆಲ್ಲರೂ ತಪ್ಪಿತಸ್ಥರು' ಎಂದು ಹೇಳಿತ್ತು.

'ಸಾರ್ವಜನಿಕ ಹುದ್ದೆಗಳಿಗೆ ವೈದ್ಯಕೀಯ ಪರೀಕ್ಷೆಯಲ್ಲಿ ಅರ್ಹತೆ ಹೊಂದಿ ಉತ್ತೀರ್ಣಗೊಂಡಿದ್ದರೂ ನಮ್ಮನ್ನು ಆಯ್ಕೆಗೆ ಪರಿಗಣಿಸಿಲ್ಲ. ಆದ್ದರಿಂದ ರೈಲ್ವೆ ನೇಮಕಾತಿ ಮಂಡಳಿಯ ಈ ನಿರ್ಧಾರದಲ್ಲಿ ಮಧ್ಯಪ್ರವೇಶಿಸಿ ನ್ಯಾಯ ದೊರಕಿಸಿಕೊಡಬೇಕು' ಎಂದು ಅರ್ಜಿದಾರರು ಸಿಎಟಿ ಮೊರೆ ಹೋಗಿದ್ದರು. ಈ ಅರ್ಜಿಯನ್ನು ಸಿಎಟಿ ವಜಾಗೊಳಿಸಿತ್ತು. ಆದೇಶ ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

ಜಾತಿ ನಿಂದನೆ ಪ್ರಕರಣ ರದ್ದು

ಬೆಂಗಳೂರು: 'ಸಾರ್ವಜನಿಕರು ಅಥವಾ ಸಾರ್ವಜನಿಕರ ವೀಕ್ಷಣೆಗೆ ಅವಕಾಶವಿಲ್ಲದ ಸ್ಥಳದಲ್ಲಿ ನಡೆಯಿತು ಎನ್ನಲಾಗುವ ಜಾತಿನಿಂದನೆ ಆರೋಪಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ-2015ರ ಸೆಕ್ಷನ್ 3(1)(ಆರ್)(ಎಸ್), 3(2) ಅನ್ವಯ ಆಗುವುದಿಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಸಂಬಂಧ ರಿತೇಶ್ ಪಯಾಸ್ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಕಟ್ಟಡದ ತಳಮಹಡಿಯು, ಸಾರ್ವಜನಿಕ ಅಥವಾ ಸಾರ್ವಜನಿಕ ವೀಕ್ಷಣೆಗೆ ಅವಕಾಶವಿಲ್ಲದ ಸ್ಥಳ. ಹೀಗಾಗಿ ಅಲ್ಲಿ ನಡೆದಿದೆ ಎನ್ನಲಾದ ಜಾತಿನಿಂದನೆಯ ಈ ಪ್ರಕರಣವು ಕಲಂ 3ರ ನಿಯಮಗಳಡಿ ವಿಚಾರಣೆಗೆ ಒಳಪಡುವುದು ಯುಕ್ತವಲ್ಲ' ಎಂದು ಆದೇಶಿಸಿದೆ.

ಅರ್ಜಿದಾರರ ವಿರುದ್ಧ ದಕ್ಷಿಣ ಜಿಲ್ಲೆಯ ಪುತ್ತೂರು ಟೌನ್ ಪೊಲೀಸರು ದಾಖಸಿದ್ದ ಎಫ್‌ಐಆರ್ ಮತ್ತು ಅದಕ್ಕೆ ಸಂಬಂಧಿಸಿದ ಐದನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ವಿಚಾರಣೆಯನ್ನು ನ್ಯಾಯಪೀಠ ರದ್ದುಪಡಿಸಿದೆ.

ವಿದೇಶಿ ಮಹಿಳೆಗೆ ಮರುಳಾಗಿ ₹ 35 ಲಕ್ಷ ನಷ್ಟ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೇಸ್‌ಬುಕ್ ಮೂಲಕ ಪರಿಚಯವಾದ ವಿದೇಶಿ ಮಹಿಳೆಯ ಮಾತಿನ ಮೋಡಿ ಮತ್ತು ಅಂದಕ್ಕೆ ಮರುಳಾಗಿ ಖಾಸಗಿ ಫೈನಾನ್ಸ್ ಕಂಪನಿಯ ವ್ಯವಸ್ಥಾಪಕರೊಬ್ಬರು ₹ 35 ಲಕ್ಷ ಕಳೆದುಕೊಂಡಿದ್ದಾರೆ!

ಈ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಿದ ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ, 'ಖಾಸಗಿ ಫೈನಾನ್ಸ್‌ನಲ್ಲಿ ವ್ಯವಸ್ಥಾಪಕರಾಗಿದ್ದ ನಗರದ 48 ವರ್ಷದ ವ್ಯಕ್ತಿಯೊಬ್ಬರಿಗೆ ಫೇಸ್‌ಬುಕ್ ಮೂಲಕ ವಿದೇಶಿ ಮಹಿಳೆಯೊಬ್ಬಳು ಪರಿಚಯವಾಗಿದ್ದಳು. ಆಕೆ ತನ್ನ ಹೆಸರು ನ್ಯಾನ್ಸಿ ವಿಲಿಯಂ. ತಾನು ಇಂಗ್ಲೆಂಡಿನವಳು ಎಂದು ಹೇಳಿಕೊಂಡು ಗೆಳೆತನ ಬೆಳೆಸಿದ್ದಳು' ಎಂದರು.

'ಬಳಿಕ ಪರಸ್ಪರ ಇಬ್ಬರೂ ಮೊಬೈಲ್ ನಂಬರ್ ವಿನಿಮಯ ಮಾಡಿಕೊಂಡು ವಾಟ್ಸ್‌ಆ್ಯಪ್ ಚಾಟಿಂಗ್ ಮಾಡಿದ್ದಾರೆ. ಹೀಗೆ ಬೆಳೆದ ಸ್ನೇಹ ಮತ್ತಷ್ಟು ಗಾಢವಾಗಿ, ಇಬ್ಬರೂ ಸೇರಿ ವ್ಯವಹಾರ ಆರಂಭಿಸುವ ಬಗ್ಗೆ ಚರ್ಚೆ ನಡೆಸಿದ್ದಾರೆ. ಇಂಗ್ಲೆಂಡ್‌ನಿಂದ ಭಾರತಕ್ಕೆ ಬಂದು ಜ್ಯುವೆಲ್ಲರಿ ವ್ಯವಹಾರದಲ್ಲಿ ತೊಡಗುತ್ತೇನೆ ಎಂದು ನ್ಯಾನ್ಸಿ ನಂಬಿಸಿದ್ದಾಳೆ. ಅದಕ್ಕೆ ಹಣ ಹೂಡಿಕೆ ಮಾಡುವಂತೆ ಕೇಳಿಕೊಂಡಿದ್ದಾಳೆ.'

'ಶೀಘ್ರದಲ್ಲಿಯೇ ಭಾರತಕ್ಕೆ ಬರುತ್ತೇನೆ. ಬೆಂಗಳೂರಿನಲ್ಲಿ ಜ್ಯುವೆಲ್ಲರಿ ವ್ಯವಹಾರ ಆರಂಭಿಸೋಣ ಎಂದು ನಂಬಿಕೆ ಹುಟ್ಟಿಸಿದ ನ್ಯಾನ್ಸಿ, ವ್ಯಕ್ತಿಯಿಂದ ಹಂತ ಹಂತವಾಗಿ ವಿವಿಧ ಖಾತೆಗಳಿಗೆ ₹ 35 ಲಕ್ಷ ಹಾಕಿಸಿಕೊಂಡಿದ್ದಾಳೆ. ಹಣ ಖಾತೆಗೆ ಜಮೆ ಆಗುತ್ತಿದ್ದಂತೆ ಫೇಸ್‌ಬುಕ್ ಖಾತೆ ಡಿಲೀಟ್ ಮಾಡಿ ಆಕೆ ನಾಪತ್ತೆಯಾಗಿದ್ದಾಳೆ.

ತಾನು ಮೋಸ ಹೋಗಿರುವುದು ಗೊತ್ತಾಗುತ್ತಿದ್ದಂತೆ ಆ ವ್ಯಕ್ತಿ ದೂರು ನೀಡಿದ್ದಾರೆ. ಪೂರ್ವ ವಿಭಾಗದ ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಾಗಿ ಶೋಧ ನಡೆಸುತ್ತಿದ್ದೇವೆ' ಎಂದು ಮಾಹಿತಿ ನೀಡಿದರು.

ಭದ್ರತಾ ಸಿಬ್ಬಂದಿ ಸಾವು

ಬೆಂಗಳೂರು: ಬೈಕ್ ನಿಲುಗಡೆ ವಿಚಾರದಲ್ಲಿ ಅಮೃತಹಳ್ಳಿಯಲ್ಲಿ ನಡೆದ ಜಗಳದಲ್ಲಿ ಫುಡ್ ಡೆಲಿವರಿ ಬಾಯ್‌ನಿಂದ ತೀವ್ರವಾಗಿ ಹಲ್ಲೆಗೆ ಒಳಗಾಗಿದ್ದ ಭದ್ರತಾ ಸಿಬ್ಬಂದಿ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

ಕುಮಾರ ನಾಯಕ್ (45) ಮೃತ ವ್ಯಕ್ತಿ. ಜೂನ್ 12ರಂದು ಫುಡ್ ಡೆಲಿವರಿ ಬಾಯ್ ಕಾರ್ತಿಕ್ ಎಂಬಾತ ಕೋಡಿಗೆಹಳ್ಳಿ ಗೇಟ್ ಸಮೀಪದ ಗೋದ್ರೇಜ್ ಅಪಾರ್ಟ್‌ಮೆಂಟ್ ಬಳಿ ರಸ್ತೆ ಬದಿಯಲ್ಲಿ ಬೈಕ್ ನಿಲ್ಲಿಸಿ ಡೆಲಿವರಿ ಕೊಡಲು ಹೊರಟ್ಟಿದ್ದ.

ಈ ವೇಳೆ ಅಲ್ಲಿದ್ದ ಭದ್ರತಾ ಸಿಬ್ಬಂದಿ, 'ರಸ್ತೆಯಲ್ಲಿಯೇ ಬೈಕ್ ನಿಲ್ಲಿಸಿದ್ದೀಯಾ. ಬದಿಯಲ್ಲಿ ಸರಿಯಾಗಿ ನಿಲ್ಲಿಸು' ಎಂದು ಸಲಹೆ ನೀಡಿದ್ದರು. ಆದರೆ, ಆ ಮಾತು ಕೇಳಿಸಿಕೊಳ್ಳದೆ ಕಾರ್ತಿಕ್ ಮುಂದೆ ಹೋಗಿದ್ದ.

ಈ ವೇಳೆ ಭದ್ರತಾ ಸಿಬ್ಬಂದಿಯೇ ಸರಿಯಾಗಿ ನಿಲ್ಲಿಸಲು ಮುಂದಾಗ, ಬೈಕ್ ಅಡ್ಡ ಬಿದ್ದಿದೆ. ಕೋಪಗೊಂಡ ಕಾರ್ತಿಕ್ ಭದ್ರತಾ ಸಿಬ್ಬಂದಿಯನ್ನು ನಿಂದಿಸಿದ್ದ. ಈ ವೇಳೆ ಇಬ್ಬರ ಮಧ್ಯೆ ಮಾತಿನ ಚಕಮಕಿ ನಡೆದಿದ್ದು, ಭದ್ರತಾ ಸಿಬ್ಬಂದಿ ಮೇಲೆ ಕಾರ್ತಿಕ್ ಹಲ್ಲೆ ಮಾಡಿದ್ದ. ಗಂಭೀರ ಗಾಯಗೊಂಡಿದ್ದ ಭದ್ರತಾ ಸಿಬ್ಬಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಅಮೃತಹಳ್ಳಿ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿ ಕಾರ್ತಿಕ್‌ನನ್ನು ಬಂಧಿಸಿದ್ದಾರೆ.

ಕ್ರಿಕೆಟ್ ಬೆಟ್ಟಿಂಗ್: ಬಂಧನ

ಬೆಂಗಳೂರು: ಹನುಮಂತನಗರ ಠಾಣಾ ವ್ಯಾಪ್ತಿಯ ಶ್ರೀನಗರದ ಮುಖ್ಯರಸ್ತೆಯಲ್ಲಿ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿದ್ದ ವ್ಯಕ್ತಿಯೊಬ್ಬನನ್ನು ಬಂಧಿಸಿರುವ ಪೊಲೀಸರು, ಆತನಿಂದ ₹2 ಲಕ್ಷ ನಗದು ಮತ್ತು ಮೊಬೈಲ್ ವಶಪಡಿಸಿಕೊಂಡಿದ್ದಾರೆ.

ಜೂನ್ 21ರಂದು ಆಸ್ಟ್ರೇಲಿಯಾ–ಶ್ರೀಲಂಕಾ ಮತ್ತು 22ರಂದು ಇಂಗ್ಲೆಂಡ್–ನೆದರ್‌ಲ್ಯಾಂಡ್ ನಡುವೆ ನಡೆದ ಏಕದಿನ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ಆಡುತ್ತಿದ್ದ ಆರೋಪಿಯು, ಸಾರ್ವಜನಿಕರಿಂದ ಹಣ ಸಂಗ್ರಹಿಸುತ್ತಿದ್ದ. ಈ ಖಚಿತ ಮಾಹಿತಿ ಆಧರಿಸಿ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು.

ಉಗಾಂಡ ಪ್ರಜೆ ಬಂಧನ

ಬೆಂಗಳೂರು: ಹೊರದೇಶಗಳಿಂದ ಕರೆದುಕೊಂಡು ಬಂದು ಬೆಳ್ಳಂದೂರು ಪೊಲೀಸ್ ಠಾಣಾ ವ್ಯಾಪ್ತಿಯ ದೊಡ್ಡಕನ್ನಹಳ್ಳಿಯಲ್ಲಿ ವೇಶ್ಯಾವಟಿಕೆ ದಂಧೆ ನಡೆಸುತ್ತಿದ್ದ ಉಗಾಂಡ ಪ್ರಜೆಯನ್ನು ಪೊಲೀಸರು ಬಂಧಿಸಿದ್ದಾರೆ.

ನಮುದ್ದು ಬ್ರಿಡ್‌ಗೆಡ್ (26) ಬಂಧಿತ ವ್ಯಕ್ತಿ. ಆರೋಪಿಯಿಂದ 40 ಗ್ರಾಂ ಗಾಂಜಾ ಕೂಡ ವಶಪಡಿಸಿಕೊಳ್ಳಲಾಗಿದೆ.

ವೇಶ್ಯಾವಟಿಕೆ ದಂಧೆಗಾಗಿ ಆರೋಪಿ ತನ್ನ ಬಳಿ ಇಟ್ಟುಕೊಂಡಿದ್ದ ಹೊರದೇಶದ ಮಹಿಳೆಯೊಬ್ಬರನ್ನು ಪೊಲೀಸರು ರಕ್ಷಣೆ ಮಾಡಿದ್ದಾರೆ. ಬೆಳ್ಳಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಂಜಾ ವಶ

ಬೆಂಗಳೂರು: ಪೊಟ್ಟಣಗಳಲ್ಲಿ ತುಂಬಿಸಿ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬ್ಯಾಟರಾಯನಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ವಿಜಯನಗರದ ಅತ್ತಿಗುಪ್ಪೆ ನಿವಾಸಿ ಅಭಿಷೇಕ್ ಅಲಿಯಾಸ್ ಅಂಬು (28) ಮತ್ತು ಬಾಪೂಜಿನಗರದ ಅಭಿ ಅಲಿಯಾಸ್ ಪಾರಿವಾಳ (26) ಬಂಧಿತರು. ಬಂಧಿತರಿಂದ 7.50 ಕಿಲೋ ಗಾಂಜಾ ವಶಪಡಿಸಿಕೊಳ್ಳಲಾಗಿದೆ.

ಬ್ಯಾಟರಾಯನಪುರ ಠಾಣಾ ವ್ಯಾಪ್ತಿಯಲ್ಲಿ ಪ್ರತ್ಯೇಕ ಸ್ಥಳಗಳಲ್ಲಿ ಸಾರ್ವಜನಿಕರಿಗೆ ಗಾಂಜಾ ಮಾರುತ್ತಿದ್ದ ಬಗ್ಗೆ ಮಾಹಿತಿ ಪೊಲೀಸರಿಗೆ ಬಂದಿತ್ತು. ಇನ್‌ಸ್ಪೆಕ್ಟರ್ ಶಂಕರನಾಯಕ್ ಮತ್ತು ತಂಡ ಕಾರ್ಯಾಚರಣೆ ನಡೆಸಿ, ಇಬ್ಬರನ್ನೂ ಬಂಧಿಸಿದೆ.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಹಾಗೂ ಸುಮಂಗಲಿ ಸೇವಾಶ್ರಮ ಜಂಟಿಯಾಗಿ ನಗರದಲ್ಲಿ ಗುರುವಾರ ಆಯೋಜಿಸಿದ್ದ ಡಾ.ಜಯದೇವಿತಾಯಿ ಲಿಗಾಡೆ ಅವರ 110ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತೀಹಳ್ಳಿ, ಸಾಹಿತಿ ಮಧುಮಾಲಾ ಲಿಗಾಡೆ, ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್, ಒಕ್ಕೂಟದ ಕಾರ್ಯದರ್ಶಿ ಎಸ್.ಜಿ. ಸುಶೀಲಮ್ಮ, ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ ಹಾಗೂ ಶೋಭಾ ಅವರು ಪುಷ್ಪ ನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಮೂತ್ರಪಿಂಡ ಸಮಸ್ಯೆ: ಮಹಿಳೆಗೆ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂತ್ರಪಿಂಡ ಸಮಸ್ಯೆ ಎದುರಿಸುತ್ತಿದ್ದ 38 ವರ್ಷದ ಮಹಿಳೆಗೆ ಇಲ್ಲಿನ ಎನ್‌ಯು ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ಮಾಡಿದ್ದಾರೆ.

ಕೆಲವು ತಿಂಗಳ ಹಿಂದೆ ನಡೆಸಲಾದ ಆರೋಗ್ಯ ತಪಾಸಣೆ ವೇಳೆ ಎಡ ಮೂತ್ರಪಿಂಡ ಕಳಪೆಯಾಗಿ ಕಾರ್ಯನಿರ್ವಹಿಸುತ್ತಿರುವುದು ಪತ್ತೆಯಾಗಿತ್ತು. ಎನ್‌ಯು ಆಸ್ಪತ್ರೆಯ ವೈದ್ಯ ಡಾ. ವಿನೋದ್ ಕುಮಾರ್ ನೇತೃತ್ವದ ವೈದ್ಯರ ತಂಡ ರೋಗಿಯ ಸ್ಥಿತಿಯನ್ನು ವಿಶ್ಲೇಷಣೆಗೆ ಒಳಪಡಿಸಿ, ಮೂತ್ರಪಿಂಡ ವನ್ನು ಮೂತ್ರಕೋಶಕ್ಕೆ ಸಂಪರ್ಕಿಸುವ ನಳಿಕೆ ಸಂಕುಚಿತಗೊಂಡಿರುವುದನ್ನು ಗುರುತಿಸಿತು.

ಈ ಸಮಸ್ಯೆಯಿಂದ ಎಡಭಾಗದ ಮೂತ್ರಪಿಂಡ ದುರ್ಬಲಗೊಂಡಿತ್ತು ಎಂದು ಆಸ್ಪತ್ರೆ ಹೇಳಿದೆ.

'ಈ ಸಮಸ್ಯೆಯಿಂದ ಮುಟ್ಟಿನ ಸಮಯದಲ್ಲಿ ಅತಿಯಾದ ರಕ್ತಸ್ರಾವ ಮತ್ತು ನೋವು ಕಾಣಿಸಿಕೊಳ್ಳುತ್ತಿತ್ತು. ಸ್ತ್ರೀರೋಗ ತಜ್ಞರು ಮಹಿಳೆಯ ಗರ್ಭಾಶಯ ತೆಗೆಯುವ ಸಲಹೆ ನೀಡಿದ್ದರು.

ತಪಾಸಣೆ ನಡೆಸಿದ ಬಳಿಕ ಗರ್ಭಾಶಯ ತೆಗೆದುಹಾಕುವ ಬದಲು, ಎಡ ಮೂತ್ರನಾಳವನ್ನು ಸರಿಪಡಿಸಿ, ಮೂತ್ರಪಿಂಡ ಉಳಿಸಲು ನಿರ್ಧರಿಸಲಾಯಿತು. ಮೂತ್ರರೋಗ ತಜ್ಞವೈದ್ಯರು ಮತ್ತು ಸ್ತ್ರೀರೋಗ ತಜ್ಞರನ್ನು ಒಳಗೊಂಡ ಎರಡು ತಂಡಗಳು ರೋಗಿಯ ಎಡ ಮೂತ್ರನಾಳವನ್ನು ಸರಿಪಡಿಸಿದೆವು' ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದರು.

'ಕೀ ಹೋಲ್ ಶಸ್ತ್ರಚಿಕಿತ್ಸೆ ನಡೆಸಿದ್ದರಿಂದ ಮಹಿಳೆ ಬೇಗ ಚೇತರಿಸಿಕೊಂಡರು. ಮಹಿಳೆಯ ಸಮಸ್ಯೆ ಈಗ ಬಗೆಹರಿದಿದೆ' ಎಂದು ಡಾ. ವಿನೋದ್ ಹೇಳಿದರು.

ಕೋವಿಡ್: ಪರೀಕ್ಷೆ, ಸೋಂಕು ಹೆಚ್ಚಳ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪರೀಕ್ಷೆಗಳ ಹೆಚ್ಚಳದಿಂದ ಪ್ರಕರಣಗಳ ಸಂಖ್ಯೆಯೂ ಏರಿಕೆ ಕಂಡಿದೆ. ಗುರುವಾರ 36,289 ಪರೀಕ್ಷೆಗಳನ್ನು ಮಾಡಲಾಗಿದ್ದು, 858 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

20 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ಪತ್ತೆಯಾಗಿವೆ. ಸೋಂಕು ದೃಢ ಪ್ರಮಾಣ ಶೇ 2.36 ರಷ್ಟು ವರದಿಯಾಗಿದೆ. ಬೆಂಗಳೂರಿನಲ್ಲಿ 820 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕಿತರಲ್ಲಿ ಬೆಂಗಳೂರಿನ 72 ವರ್ಷದ ವೃದ್ಧರೊಬ್ಬರು ಮೃತಪಟ್ಟಿದ್ದಾರೆ. ಇವರು ಉಸಿರಾಟದ ಸಮಸ್ಯೆ ಹೊಂದಿದ್ದರು.

ಸಕ್ರಿಯ ಪ್ರಕರಣಗಳ ಸಂಖ್ಯೆ 5,067ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿಯೇ 4,818 ಸೋಂಕಿತರು ಇದ್ದಾರೆ. ಸಕ್ರಿಯ ಪ್ರಕರಣಗಳು ಎಂಟು ಜಿಲ್ಲೆಗಳಲ್ಲಿ ಎರಡಂಕಿ ಹಾಗೂ 16 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

ರಾಜ್ಯದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 39.63 ಲಕ್ಷ ದಾಟಿದೆ. 39.18 ಲಕ್ಷಕ್ಕೂ ಹೆಚ್ಚು ಮಂದಿ ಚೇತರಿಸಿಕೊಂಡಿದ್ದಾರೆ. ಕೋವಿಡ್‌ಗೆ ಈವರೆಗೆ ಮೃತಪಟ್ಟವರ ಒಟ್ಟು ಸಂಖ್ಯೆ 40,072ಕ್ಕೆ ಏರಿಕೆಯಾಗಿದೆ.

ನಗರದಲ್ಲಿ ಇಂದು

ಕೆಂಗಲ್ ಹನುಮಂತಯ್ಯ ದತ್ತಿ ಉಪನ್ಯಾಸ: ಅತಿಥಿಗಳು: ಕೆ.ಎನ್. ಫಣೀಂದ್ರ, ಅಧ್ಯಕ್ಷತೆ: ಜಿ.ಕೆ. ನಾರಾಯಣ ರೆಡ್ಡಿ, ಎಸ್.ಟಿ. ನಾರಾಯಣ ಗೌಡ, ಎಚ್. ಜಿ. ಬಾಲಗೋಪಾಲ್, ಆಯೋಜಕರು: ವಿವೇಕಾನಂದ ಕಾಲೇಜ್ ಆಫ್ ಲಾ, ಸ್ಥಳ: ಎಸ್.ಟಿ. ನಾರಾಯಣ ಗೌಡ ಸಭಾಂಗಣ, ವಿವೇಕಾನಂದ ಕಾಲೇಜ್ ಆಫ್ ಲಾ, ಗಾಯತ್ರಿನಗರ, ಬೆಳಿಗ್ಗೆ: 9

ಬಿಬಿಎಂಪಿ ಚುನಾವಣೆಗೆ ಪ್ರಣಾಳಿಕೆ–2022: ಅಧ್ಯಕ್ಷತೆ: ಎಚ್.ಎನ್. ನಾಗಮೋಹನ ದಾಸ್, ಅತಿಥಿಗಳು: ಸಿ.ಎಂ.ಇಬ್ರಾಹಿಂ, ರಾಮಲಿಂಗಾ ರೆಡ್ಡಿ, ಸಿ.ಎನ್. ಅಶ್ವತ್ಥನಾರಾಯಣ, ಪ್ರಕಾಶ. ಕೆ, ಪೃಥ್ವಿ ರೆಡ್ಡಿ, ಶ್ರೀಕಾಂತ ನರಸಿಂಹನ್, ಸಿ.ಎನ್. ದೀಪಕ್, ಆಯೋಜಕರು: ಸಿವಿಲ್ ಸೊಸೈಟಿ ಫೋರಂ, ಸ್ಥಳ: ಗಾಂಧಿಭವನ, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ: 10

ಡಿಎಸ್‌ಸಿಇ ಮುಕ್ತ ದಿನ–2022: ಅತಿಥಿಗಳು: ಶ್ಯಾಮಕೃಷ್ಣ ಕಟ್ಟೇಪುರ, ಉಪಸ್ಥಿತಿ: ಗಾಳಿಸ್ವಾಮಿ, ತಿಂತಿಶಾ. ಎಚ್. ಸಾಗರ, ರೋಹನ್ ಪ್ರೇಮ ಸಾಗರ, ನಿಶಾನ್.ಎಚ್.ಸಾಗರ, ನತಾಶ. ಎಚ್.ಸಾಗರ, ಡಾ.ಸಿ.ಪಿ.ಎಸ್. ಪ್ರಕಾಶ, ಆಯೋಜಕರು: ದಯಾನಂದ ಸಾಗರ ಕಾಲೇಜ್ ಆಫ್ ಎಂಜಿನಿಯರಿಂಗ್, ಸ್ಥಳ: ಡಾ.ಡಿ. ಪ್ರೇಮಚಂದ್ರ ಸಾಗರ ಸಭಾಂಗಣ, ಕುಮಾರಸ್ವಾಮಿ ಬಡಾವಣೆ,

ಬದುಕು ಉಳಿಸಿ: ಅತಿಥಿಗಳು: ಅಶೋಕ ಖೇಣಿ, ಆಯೋಜಕರು: ಎಲ್ ಏಷ್ಯಾ–2022 ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ, ಬೆಳಿಗ್ಗೆ: 11

ಚೈತನ್ಯ ಸಂಜೆ–815: ಅಧ್ಯಕ್ಷತೆ: ದಿಬ್ಬೂರು.ವಿ. ಗಿರೀಶ್, ಎ.ಬಿ. ಬಸವರಾಜು, ಉಪಸ್ಥಿತಿ: ಕೆ.ವಿ. ಬಾಗರಾಜಮೂರ್ತಿ, ಸವಿತಾ ಗಣೇಶ್, ಆಯೋಜಕರು: ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್.ಎಸ್. ಕಾಲೇಜು ಸಭಾಂಗಣ, ಗೇಟ್ ನ.7, 38ನೇ ಕ್ರಾಸ್, 1ನೇ ಮುಖ್ಯ ರಸ್ತೆ 8ನೇ ವಿಭಾಗ, ಜಯನಗರ, ಸಂಜೆ: 5.30

ಹರಿನಾಮ ಸಂಕೀರ್ತನೆ: ಪ್ರಸ್ತುತಿ: ಅನ್ವಿತಾ ಸಾವಿತ್ರಿ, ಭೂಮಿಕಾ.ಎಸ್, ತಬಲಾ: ಶ್ರೀನಿವಾಸ ಕಾಖಂಡಕಿ, ಕೀ-ಬೋರ್ಡ್: ಅಮಿತ್ ಶರ್ಮಾ, ಆಯೋಜಕರು: ತಿರುಮಲ ತಿರುಪತಿ ದೇವಸ್ಥಾನಗಳ ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ : ಶ್ರೀ ರಾಘವೇಂದ್ರ ಸೇವಾ ಸಮಿತಿ, 13ನೇ ಮುಖ್ಯರಸ್ತೆ, ಜಯನಗರ 4ನೇ ಟಿ ಬ್ಲಾಕ್, ಸಂಜೆ 6-30ಕ್ಕೆ



ಅನ್ವಿತಾ ಸಾವಿತ್ರಿ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಸಂಚಾರ ವಾಣಿಜ್ಯ ಶಾಖೆ, ಕೇಂದ್ರ ಕಛೇರಿ, 2ನೇ ಮಹಡಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-27.

ಸಂಖ್ಯೆ: ಬೆಂಮಸಾಸಂ/ಕೇಕ/ಸಂ/ವಾ/1062/2022-23 ದಿನಾಂಕ : 22.06.2022

ಟೆಂಡರ್ ಪ್ರಕಟಣೆ ಸಂಖ್ಯೆ 07/2022-23 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ವಿವಿಧ ಬಸ್ ನಿಲ್ದಾಣಗಳಲ್ಲಿನ ಸಾಮಾನ್ಯ ಮಳಿಗೆಗಳು, ಶಾಂತಿನಗರ ಟಿ.ಟಿ.ಎಮ್.ಸಿ. 'ಬಿ' ಬ್ಲಾಕ್‌ನಲ್ಲಿನ ವಾಣಿಜ್ಯ/ಕಛೇರಿ ಕ್ಷೇತ್ರ ಹಾಗೂ ವಿಜಯನಗರ ಟಿ.ಟಿ.ಎಮ್.ಸಿ. ಬಸ್ ನಿಲ್ದಾಣದಲ್ಲಿರುವ ಪಾರ್ಕಿಂಗ್ ಕ್ಷೇತ್ರಗಳ ನಿರ್ವಹಣೆಗೆ ಆಸಕ್ತ ಪರವಾನಗಿದಾರರ ಆಯ್ಕೆಗಾಗಿ ಮತ್ತು ಕೋರಮಂಗಲ(ತಾವರೆಕೆರೆ ರೋಡ್)ದಲ್ಲಿನ ಎಜೋನಿ ಪ್ರೆಸ್ಟೀಜ್ ಸೆಂಟ್ ಜಾನ್ ವುಡ್ ಅಪಾರ್ಟ್‌ಮೆಂಟ್‌ನಲ್ಲಿರುವ 02 ಬಿ.ಹೆಚ್.ಕೆ ಫ್ಲಾಟ್ಸ್‌ಗಳನ್ನು ವಾಸಕ್ಕಾಗಿ ಪರವಾನಗಿ ನೀಡಲು ಇ-ಸಂಗ್ರಹಣಾ ವೇದಿಕೆ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಿದೆ. ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **13.07.2022ರಂದು 12:00** ಗಂಟೆಯವರೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **15.07.2022ರಂದು 12:30** ಗಂಟೆಗೆ. ಮಾಸಿಕ ಪರವಾನಗಿ ಶುಲ್ಕ, ಇಎಂಡಿ ಮೊತ್ತ ಹಾಗೂ ವಿಸ್ತೀರ್ಣಗಳ ಮಾಹಿತಿಗಾಗಿ **www.eproc.karnataka.gov.in**ಗೆ ಲಾಗಾನ್ ಆಗಿ ಅಥವಾ ಇ-ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 080-23010900; 23010901; 22371090; 22340060; 22340948 ಅಥವಾ 7760991026 & 7760991222. ಇ-ಮೇಲ್: **ctmc@mybmtc.com** ಗೆ ಸಂಪರ್ಕಿಸಬಹುದು.

ಸಹಿ/-ಮುಖ್ಯ ಸಂಚಾರ ವ್ಯವಸ್ಥಾಪಕರು(ವಾಣಿಜ್ಯ)(ಟೆಂಡರ್ ಕರೆಯುವ ಪ್ರಾಧಿಕಾರಿ)

ಕರ್ನಾಟಕ ಸರ್ಕಾರ

ವೈದ್ಯಕೀಯ ಅಧೀಕ್ಷಕರ ಕಛೇರಿ, ಕೆ. ಸಿ. ಜನರಲ್ ಆಸ್ಪತ್ರೆ, ಮಲ್ಲೇಶ್ವರಂ, ಬೆಂಗಳೂರು-560003.

ದೂರವಾಣಿ ಸಂಖ್ಯೆ: 080-2334 1771, ಫ್ಯಾಕ್ಸ್ ಸಂಖ್ಯೆ: 080-2356 7154

ಸಂಖ್ಯೆ: ಕೆಸಿಜಿಆ/ಟೆಂಡರ್/01/02/2022-23 ದಿನಾಂಕ: 20/06/2022

ಟೆಂಡರ್ ಅಧಿಸೂಚನೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿ)

ಕೆ. ಸಿ. ಸಾರ್ವಜನಿಕ ಆಸ್ಪತ್ರೆ, ಬೆಂಗಳೂರು ಇಲ್ಲಿ 2022-23ನೇ ಸಾಲಿಗೆ ಸಂಬಂಧಿಸಿದಂತೆ ಭದ್ರತಾ ಸಿಬ್ಬಂದಿ ಮತ್ತು ನಾನ್-ಕ್ಲಿನಿಕಲ್ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಈ ಕಾರ್ಯಗಳ ನಿರ್ವಹಣೆಯಲ್ಲಿ ನೈಪುಣ್ಯತೆ ಹೊಂದಿರುವ ನೊಂದಾಯಿತ ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಸೇವೆಯನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಸಂಬಂಧಿಸಿದ ಮಾಹಿತಿಯನ್ನು ಹಾಗೂ ಬಿಡ್ ದಾಖಲೆಯನ್ನು **https://eproc.karnataka.gov.in** ಇಲ್ಲಿಂದ ಪಡೆಯಬಹುದಾಗಿದೆ.

ಸಹಿ/- ವೈದ್ಯಕೀಯ ಅಧೀಕ್ಷಕರು
ಕೆ. ಸಿ. ಜನರಲ್ ಆಸ್ಪತ್ರೆ, ಬೆಂಗಳೂರು.

DIPR/CP/RO.1016/AAPL/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.

ಸಂ: ಬೆಂಅಪ್ರಾ/ಉಕಾ-1/ಕೋರಮಂಗಲ/645/1/13/22-23 ದಿ: 18.06.2022

ಸಾರ್ವಜನಿಕ ಪ್ರಕಟಣೆ

ಬನಶಂಕರಿ 2ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ: 1796ರ ಕ್ರಯದಾರರಾದ ಶ್ರೀ ಗೌತಮ್ ಚಂದ್ ಜೈನ್ ರವರ ಹೆಸರಿಗೆ ಕೋರಮಂಗಲ 1ನೇ ಬ್ಲಾಕ್ ಬಡಾವಣೆಯ 19.45+19.50/2*12.10+12.00 ಮೀ. ಒಟ್ಟು ಅಳತೆ 234.67 ಚ.ಮೀ ಅಳತೆಯ ನಿವೇಶನ ಸಂಖ್ಯೆ: 13ನ್ನು ಬದಲಿ ನಿವೇಶನವನ್ನಾಗಿ ಹಂಚಿಕೆ ಮಾಡಲು ಪ್ರಾಧಿಕಾರದ ಮಾನ್ಯ ಆಯುಕ್ತರವರ ಅನುಮೋದನೆಯಾಗಿರುತ್ತದೆ. ಮುಂದುವರೆದು ಸದರಿ ಕೋರಮಂಗಲ 1ನೇ ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ: 13ರ ಹಂಚಿಕೆ ವಹಿಯು ಶಿಥಿಲವಾಗಿರುವುದರಿಂದ, ಬದಲಿ ನಿವೇಶನದ ಹಂಚಿಕೆ ವಿವರಗಳನ್ನು ಹೊಸದಾಗಿ ಹಂಚಿಕೆ ವಹಿಯಲ್ಲಿ ನಮೂದಿಸಿಕೊಂಡು ನಂತರ ನಿಯಮಾನುಸಾರ ಕ್ರಮವಹಿಸಬೇಕಾಗಿರುತ್ತದೆ.

ಆದುದರಿಂದ ಕೋರಮಂಗಲ 1ನೇ ಬ್ಲಾಕ್ ಬಡಾವಣೆಯ 19.45+19.50/2*12.10+12.00 ಮೀ. ಒಟ್ಟು ಅಳತೆ 234.67 ಚ.ಮೀ ಅಳತೆಯ ನಿವೇಶನ ಸಂಖ್ಯೆ: 13ನ್ನು ಕ್ರಯದಾರರಾದ ಶ್ರೀ ಗೌತಮ್ ಚಂದ್ ಜೈನ್ ರವರ ಹೆಸರಿಗೆ ಬದಲಿ ನಿವೇಶನವನ್ನಾಗಿ ಹಂಚಿಕೆ ಮಾಡುವ ಬಗ್ಗೆ ಈ ನಿವೇಶನದ ಮೇಲೆ ತಮ್ಮ ಹಕ್ಕನ್ನು ಚಲಾಯಿಸುವ ಯಾವುದೇ ವ್ಯಕ್ತಿಯಾಗಲೀ, ಬೇರೆ ಯಾರಿಂದಲಾದರೂ ಯಾವುದೇ ರೀತಿಯ ತಕರಾರು/ಆಕ್ಷೇಪಣೆಗಳು ಇದ್ದಲ್ಲಿ ಪುಷ್ಟೀಕರಿಸುವ, ಸ್ವತ್ತಿನ ಮೇಲೆ ತಮ್ಮ ಹಕ್ಕನ್ನು ಸಾಬೀತುಪಡಿಸುವ ಮತ್ತು ತಮ್ಮ ಬಳಿಯಿರುವ ಸಂಬಂಧಪಟ್ಟ ಮೂಲ ದಾಖಲೆಗಳೊಂದಿಗೆ ಈ ಪ್ರಕಟಣೆಯ ದಿನಾಂಕದಿಂದ 07 ದಿನಗಳೊಳಗಾಗಿ ಉಪಕಾರ್ಯದರ್ಶಿ-1 ರವರ ಮುಂದೆ ಹಾಜರಾಗಿ ದಾಖಲೆಗಳನ್ನು ಹಾಜರುಪಡಿಸಿ ತಮ್ಮ ಹಕ್ಕನ್ನು ಸಾಬೀತುಪಡಿಸುವಂತೆ ತಿಳಿಸಲಾಗಿದೆ. ಈ ಅವಧಿಯಲ್ಲಿ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡದಿದ್ದಲ್ಲಿ ಸದರಿ ಸ್ವತ್ತಿಗೆ ಯಾರಿಂದಲೂ ಅಭ್ಯಂತರವಿಲ್ಲವೆಂದು ಭಾವಿಸಿ ಸದರಿ ನಿವೇಶನವನ್ನು ಕ್ರಯದಾರರಾದ ಶ್ರೀ ಗೌತಮ್ ಚಂದ್ ಜೈನ್ ರವರ ಹೆಸರಿಗೆ ಬದಲಿ ನಿವೇಶನವನ್ನಾಗಿ ಹಂಚಿಕೆ ಮಾಡಲು ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಲಾಗಿದೆ.

ಸಹಿ/- ಆಯುಕ್ತರು, ಬೆಂ.ಅ.ಪ್ರಾ, ಬೆಂಗಳೂರು

ಪ್ರಕಟಣೆ

ಟಿಮ್‌ಕೆನ್ ಇಂಡಿಯಾ ನಿಯಮಿತ

CIN - L29130KA1996PLC048230

ನೋಂದಣಿ ಕಛೇರಿ: ಸಂಖ್ಯೆ. 39-42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು-560 100 ದೂರವಾಣಿ : 080-41362000 ಫ್ಯಾಕ್ಸ್: 080-41362010
ವೆಬ್‌ಸೈಟ್ : www.timken.com/en-in ಇ-ಮೇಲ್: tilinvestor@timken.com

ಈ ಪ್ರಕಾರವಾದ 26 ಷೇರು ಸರ್ಟಿಫಿಕೇಟುಗಳು ಪ್ರತಿ ಷೇರಿಗೆ ರೂ.10/- ರಂತೆ ಕಂಪನಿಯ ಒಟ್ಟಾರೆ 1270 ಈಕ್ವಿಟಿ ಷೇರುಗಳನ್ನು ಹೊಂದಿರುವ ಸಂಖ್ಯೆಗಳು. 101463, 101464, 35123, 117281, 179113, 179114, 175347, 175348, 42816, 107564, 107565, 83303, 154561, 154562, 32684, 23814, 88985, 61358, 221041, 221042, 221043, 221044, 221045, 221046, 74463 ಹಾಗೂ 36882 ಮತ್ತು ಭಾವೇಶ್ ಧೀರಜ್‌ಲಾಲ್ ತನ್ನಾ, ರಮೇಶ್ ಭಾಯ್ ಪಟೇಲ್ ಜೊತೆಯಲ್ಲಿ ಭಾರತಿಬೆನ್ ಪಟೇಲ್, ಬಿಮಾಲ ಜಟಾಕಿಯ, ಬಿಮಾಲ್ ಪ್ರದೀಪ್ ಜಟಾಕಿಯ ಜೊತೆಯಲ್ಲಿ ಸ್ಮಿತಾ ಬಿಮಾಲ್ ಜಟಾಕಿಯ, ಅಶ್ವಿನ್ ಶಾಂತಿಲಾಲ್ ಕೊಟೇಚಾ ಜೊತೆಯಲ್ಲಿ ಬಿಮಾಲ್ ಪ್ರದೀಪ್ ಜಾಟಕಿಯ, ಹರೀಶ್ ಭಾಯ್ ಸೋಯನ್ಕಿ, ವಿಟ್ಟಣ್ಣ ಜೆ ಅಂಚನ್ ಜೊತೆಯಲ್ಲಿ ವಸಂತಿ ಕೆ ಸಾಲಿಯಾನ್, ಲೀಲಾಬೆನ್ ರಮಣ್‌ಭಾಯ್ ಪಟೇಲ್, ಗಗನ್ ಗುಪ್ತ, ಮನೀಶಾ ಪ್ರಕಾಶ್ ಲೋಧ ಜೊತೆಯಲ್ಲಿ ಪ್ರಕಾಶ್ ಹಂಸರಾಜ್ ಲೋಧ, ವಿಪುಲ್ ಶಾಂತಿಲಾಲ್ ಲಪಾಸಿಯ, ಮನೀಶ್ ಎಂ ಕೊಠಾರಿ ಮತ್ತು ಪುಷ್ಪ ದಾಶರಥ್ ಪಟೇಲ್ ಇವರ ಹೆಸರುಗಳಲ್ಲಿ ನೋಂದಾಯಿತವಾದ ಟಿಮ್‌ಕೆನ್ ಇಂಡಿಯಾ ನಿಯಮಿತದ ಡಿಸ್ಟಿಂಕ್ಟಿವ್ ಸಂಖ್ಯೆಗಳು. 42975987-6036, 42976037-040, 37511101-200, 43429753-756, 62276804-813, 62276814-818, 62148743-792, 62148793-796, 38280401-500, 43150811-860, 43150861-864, 42329101-200, 44493729-778, 44493779-782, 37267201-300, 36380201-300, 42615807-856, 40134601-700, 63710555-654, 63710655-704, 63710705-714, 63710715-724, 63710725-734, 63710735-739, 41445101-200 ಮತ್ತು 37687001-100 ಸಂಖ್ಯೆಗಳನ್ನು ಒಳಗೊಂಡ ಎಲ್ಲಾ ಷೇರು ಸರ್ಟಿಫಿಕೇಟುಗಳು ಕಾಣೆಯಾಗಿದ್ದು, ಮೇಲೆ ತಿಳಿಸಿರುವ ಎಲ್ಲಾ ಷೇರುದಾರರಿಂದ ಇದರ ಬದಲಾಗಿ ಷೇರು ಸರ್ಟಿಫಿಕೇಟುಗಳ ಪ್ರತಿಗಳನ್ನು ನೀಡಲು ಕಂಪನಿಯು ಅರ್ಜಿಗಳನ್ನು ಸ್ವೀಕರಿಸಿದೆ ಎಂದು ಈ ಮೂಲಕ ಪ್ರಕಟಿಸಲಾಗಿದೆ. ಸದರಿ ಪ್ರಕಟಣೆಯಲ್ಲಿ ತಿಳಿಸಿರುವಂತೆ ಮೂಲ ಷೇರು ಸರ್ಟಿಫಿಕೇಟುಗಳ ಕಣ್ಮರೆ ಬದಲಾಗಿ ಸರ್ಟಿಫಿಕೇಟುಗಳ ಪ್ರತಿಯನ್ನು ನೀಡಲು ಯಾವುದೇ ವ್ಯಕ್ತಿಗೆ (ಗಳಿಗೆ) ಆಕ್ಷೇಪಣೆಗಳು ಇದ್ದಲ್ಲಿ, ಈ ಪ್ರಕಟಣೆಯು ಪ್ರಕಟಗೊಂಡ 7 ದಿನದೊಳಗೆ ಮೇಲೆ ತಿಳಿಸಿರುವ ವಿಳಾಸಕ್ಕೆ ತನ್ನ/ತಮ್ಮ/ಅವರ ಆಕ್ಷೇಪಣೆಗಳನ್ನು ಕಂಪನಿಗೆ ಸಲ್ಲಿಸಬೇಕು ಎಂಬುದಾಗಿ ಇದರಲ್ಲಿ ಸೂಚಿಸಿರುವಂತೆ ನಿಮ್ಮನ್ನು/ತಮ್ಮನ್ನು ವಿನಂತಿಸಲಾಗಿದೆ. ತದನಂತರ ಕಂಪನಿಯು ಕಳೆದು ಹೋಗಿರುವ ಮೂಲ ಷೇರು ಸರ್ಟಿಫಿಕೇಟುಗಳಿಗೆ ಬದಲಾಗಿ ಸರ್ಟಿಫಿಕೇಟುಗಳ ಪ್ರತಿಯನ್ನು ನೀಡಲು ತೀರ್ಮಾನಿಸುತ್ತದೆ. ಸಾರ್ವಜನಿಕರು ಕಳೆದು ಹೋಗಿರುವ ಮೇಲಿನ ಷೇರು ಸರ್ಟಿಫಿಕೇಟುಗಳೊಂದಿಗೆ ಯಾವುದೇ ರೀತಿಯಲ್ಲೂ ಸಹ ವ್ಯವಹರಿಸಬಾರದೆಂದು ಎಚ್ಚರಿಕೆ ನೀಡಲಾಗುತ್ತಿದೆ.

ಟಿಮ್‌ಕೆನ್ ಇಂಡಿಯಾ ನಿಯಮಿತ ಪರವಾಗಿ
ಸಹಿ/- ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ-ಕಾಂಪ್ಲಯನ್ಸ್

ಸ್ಥಳ: ಬೆಂಗಳೂರು
ದಿನಾಂಕ: 23.06.2022

ಸ್ಥಾಪನೆ : 1907

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18
ಕಛೇರಿ : 26678572 : 26600512 : 26609066.

ಈ-ಹರಾಜು ಮುಖಾಂತರ ಸ್ಥಿರಾಸ್ತಿ ಸ್ವತ್ತುಗಳ ಮಾರಾಟದ ಸೂಚನೆ

ಸೆಕ್ಯೂರಿಟೈಜೇಷನ್ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ನಿಬಂಧನೆಗಳನ್ನು ಓದಿಕೊಂಡು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ಮಾರಾಟ ಸೂಚನೆ (ಈ-ಹರಾಜು).
ಸಾರ್ವಜನಿಕರಿಗೆ ಸಾರ್ವಜನಿಕವಾಗಿ ಸೂಚನೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ಮತ್ತು ಜಾಮೀನುದಾರ(ರು)ರಿಗೆ ಈ ಮೂಲಕ ತಿಳಿಸುದೇನೆಂದರೆ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು ಭದ್ರತಾ ಸಾಲಗಾರರಿಗೆ ಅಡಮಾನ / ಚಾರ್ಜ್ ಮಾಡಲಾಗಿದೆ. ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ, ಅಧಿಕೃತ ಅಧಿಕಾರಿಯವರಿಂದ ಸಾಂಕೇತಿಕವಾಗಿ/ರಚನಾತ್ಮಕ/ಭೌತಿಕ ಸ್ವಾಧೀನತೆಯನ್ನು ತೆಗೆದುಕೊಳ್ಳಲಾಗಿದೆ. (ವಿವರಗಳನ್ನು ಈ ಕೆಳಗೆ ನೀಡಿರುವ ಕೋಷ್ಟಕದಲ್ಲಿ ತಿಳಿಸಲಾಗಿದೆ.) ಈ ಕೆಳಕಂಡ ಸಾಲಗಳ ವಸೂಲಾತಿಗಾಗಿ ಹಾಗೂ ಮುಂದಿನ ಬಡ್ಡಿ ಮತ್ತು ವೆಚ್ಚಗಳಿಗಾಗಿ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು **"ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಏನಿದೆಯೋ ಹಾಗೆ", ಮತ್ತು "ಅಲ್ಲಿ ಏನೇ ಇರಲಿ ಹಾಗೆ"** ಆಧಾರದ ಮೇಲೆ ದಿನಾಂಕ : **27.07.2022** ರಂದು ಈ ಕೆಳಗೆ ನೀಡಿರುವ ಸಮಯದಲ್ಲಿ ಮಾರಾಟ ಮಾಡಲಾಗುವುದು.
ಮೀಸಲು ಬೆಲೆ ಮತ್ತು ಇಎಂಡಿ ಠೇವಣಿಗಳ ವಿವರಗಳು ಈ ಕೆಳಗಿನಂತಿವೆ : ಇಎಂಡಿ ಡೆಪಾಸಿಟ್ (ಆಯಾ ಸ್ವತ್ತುಗಳಿಗೆ ಅನ್ವಯಿಸುವಂತೆ) ದಿನಾಂಕ: **26.07.2022** ರಂದು ಸಂಜೆ **5:00** ಗಂಟೆಯ ಒಳಗೆ ಆನ್‌ಲೈನ್ ಮೂಲಕ (RTGS/NEFT) ಈ ಕೆಳಗೆ ನಮೂದಿಸಿರುವ ಖಾತೆಯ ಸಂಖ್ಯೆಗೆ ಪಾವತಿಸುವುದು ಅಥವಾ ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಪರವಾಗಿ DD ಮೂಲಕ ಸಂದಾಯ ಮಾಡಬಹುದಾಗಿದೆ.

ಕ್ರ. ಸಂ.	ಸಾಲಗಾರರ ಹೆಸರು, ವಿಳಾಸ ಮತ್ತು ಶಾಖೆ	ಸ್ಥಿರಾಸ್ತಿಯ ವಿವರಗಳು ಎಲ್ಲಿ ಮತ್ತು ವಿಸ್ತೀರ್ಣ	ಕಾಯ್ದಿಟ್ಟ ಬೆಲೆ	ಇಡಗಂಟು ಠೇವಣಿ ಹಣ (ಇಎಂಡಿ)	ಬ್ಯಾಂಕಿಗೆ ಬರಬೇಕಾದ ಬಾಕಿ ಮೊಬಲಗು	ಹರಾಜು ಸಮಯ ಮತ್ತು ದಿನಾಂಕ
1.	ಶ್ರೀ. ವಿಜಯ್ ಕುಮಾರ್ .ಎಂ ನಂ.1229, 17ನೇ ಮುಖ್ಯ ರಸ್ತೆ, 1ನೇ ಹಂತ, 1ನೇ ಘಟ್ಟ, ಬಿ.ಟಿ.ಎಂ. ಲೇಔಟ್, ಬೆಂಗಳೂರು. ಶಾಖೆ : ಕೋರಮಂಗಲ	ನಂ.1229, ಬಿ.ಟಿ.ಎಂ. 1ನೇ ಹಂತ, 1ನೇ ಘಟ್ಟ, ಬಿ.ಬಿ.ಎಂ.ಪಿ. ವಾರ್ಡ್ ನಂ. 65 ಬಿ.ಟಿ.ಎಂ. ಲೇಔಟ್, ಪಿ.ಐ.ಡಿ. ನಂ. 65-45-1229, ಬೆಂಗಳೂರು. ಪೂರ್ವ-ಪಶ್ಚಿಮ : (55+48)/2 ಅಡಿಗಳು & ಉತ್ತರ -ದಕ್ಷಿಣ : (46+58)/2 ಅಡಿಗಳು ಪೂರ್ವಕ್ಕೆ : ಸೈಟ್ ನಂ. 1228, ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಸೈಟ್ ನಂ. 1230	ರೂ. 2,67,87,000/- (ಎರಡು ಕೋಟಿ ಅರವತ್ತೇಳು ಲಕ್ಷ ಎಂಭತ್ತೇಳು ಸಾವಿರ ಮಾತ್ರ)	ರೂ. 26,78,700/- (ಇಪ್ಪತ್ತಾರು ಲಕ್ಷ ಎಪ್ಪತ್ತೆಂಟು ಸಾವಿರದ ಏಳು ನೂರು ಮಾತ್ರ)	20.06.2022 ಕ್ಕೆ ರೂ. 4,45,87,363/- ನೋಟಿಸ್ ದಿನಾಂಕ 20.06.2022	27.07.2022 ಬೆಳಿಗ್ಗೆ : 10 : 00 ರಿಂದ 11 : 00 ರವರೆಗೆ

ಇಎಂಡಿ ಠೇವಣಿ ಪಾವತಿಯ ಕೊನೆಯ ದಿನಾಂಕ : 26.07.2022 ಸಂಜೆ : 5: 00 ರ ವರೆಗೆ	ಬ್ಯಾಂಕಿನ ಹೆಸರು ಮತ್ತು ಖಾತೆಯ ವಿವರಗಳು (ಇಎಂಡಿ ಪಾವತಿಗಾಗಿ) IFSC ಕೋಡ್: ಬ್ಯಾಂಕಿನ ಹೆಸರು: ಇಂಡಸ್‌ಇಂಡ್ ಬ್ಯಾಂಕ್.
ತಪಾಸಣೆಯ ದಿನಾಂಕ ಮತ್ತು ಸಮಯ: 22.07.2022, ಬೆಳಿಗ್ಗೆ : 10.00 ರಿಂದ ಸಂಜೆ 5 : 00 ರ ವರೆಗೆ	ಶಾಖೆ ಹೆಸರು : ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಪ್ರಧಾನ ಕಛೇರಿ ಶಾಖೆ : ಖಾತೆ ಸಂಖ್ಯೆ : 000220105013061.
ಬಿಡ್ ಗುಣಾಂಕ: ರೂ. 50,000/-	IFSC ಕೋಡ್ : INDB0BCCB02

ಸಾಲಗಾರರು/ ಅಡಮಾನದಾರರ ಗಮನಕ್ಕೆ ನಿಬಂಧನೆಗಳ ಉಪ-ವಿಭಾಗ (8) ರ ಸೆಕ್ಷನ್ 13ರ ಕಾಯಿದೆಯಲ್ಲಿ ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಲು ತಿಳಿಸಲಾಗಿದೆ. (ಈ ಪ್ರಕಟಣೆಯನ್ನು ನಿಯಮ (8) ಉಪನಿಯಮ (6) ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ನಿಯಮ 2002ರಡಿಯಲ್ಲಿ ಸಾಲಗಾರರಿಗೆ ನೀಡುವ ಪ್ರಕಟಣೆ ಎಂದು ಪರಿಗಣಿಸತಕ್ಕದ್ದು)
ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ, ದಯವಿಟ್ಟು ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ವೆಬ್‌ಸೈಟ್ ನಲ್ಲಿನ ಲಿಂಕನ್ನು ನೋಡಿ ಅಂದರೆ, " ಅಡಮಾನ ಸ್ವತ್ತುಗಳ ಮಾರಾಟ " ಶೀರ್ಷಿಕೆಯ ಅಡಿಯಲ್ಲಿ **www.bccbl.co.in**, ಅನ್ನು ನೋಡಿ. ಈ- ಹರಾಜನ್ನು 05 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ ದಿನಾಂಕ: 27.07.2022 ರಂದು ಬೆಳಿಗ್ಗೆ : 10.00 ರಿಂದ 11.00 ರವರೆಗೆ **https://bankauctions.in** ಪೋರ್ಟಲ್ ಮೂಲಕ ನಡೆಸಲಾಗುವುದು. ಉದ್ದೇಶಿತ ಬಿಡ್‌ದಾರರು ತಮ್ಮ ಹೆಸರನ್ನು **https://bankauctions.in** ನಲ್ಲಿ ನೊಂದಾಯಿಸಿಕೊಂಡು ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ನ್ನು ಉಚಿತವಾಗಿ ಪಡೆಯಬಹುದು ಮತ್ತು *E-auction (tentatively on 26.07.2022)* from M/s 4 Closure, Mr. Prakash Reddy /Bhaskar (Asst. Manager), No.22, 5th Cross, Gurumahal Extension, Opp. Indian Hotel, K.G. Halli, Jalahalli (West), Bengaluru-560015, Mobile No: 9515160061/9515160062, E-mail: prakash@bankauctions.in & bhaskar@bankauctions.in. ಹೆಚ್ಚಿನ ಮಾಹಿತಿಗಾಗಿ : bccbrec2021@gmail.com Mobile Number : 080-26600512, 26609066 & 9342781425.

ದಿನಾಂಕ : 23.06.2022
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ವಂಚನೆ ಆರೋಪ: ಇಂಡಿಯನ್ ಬ್ಯಾಂಕ್ ವ್ಯವಸ್ಥಾಪಕ ಬಂಧನ

ಬೆಂಗಳೂರು: ಇಂಡಿಯನ್ ಬ್ಯಾಂಕ್ ಹನುಮಂತನಗರದ ಶಾಖೆಯ ವ್ಯವಸ್ಥಾಪಕ ಹರಿಶಂಕರ್ ಅವರನ್ನು ವಂಚನೆ ಆರೋಪದಲ್ಲಿ ಹನುಮಂತ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮೇ 13 -19 ರ ವರೆಗೆ ಠೇವಣಿದಾರರಾದ ಅನಿತಾ ಅವರ ನಿಶ್ಚಿತ ಠೇವಣಿ (ಎಫ್ ಡಿ) ಮೇಲೆ ಹರಿಶಂಕರ್ ಸುಮಾರು ₹ 5.70 ಕೋಟಿಯಷ್ಟು ಸಾಲ ತೆಗೆದ ಆರೋಪವಿದೆ. ಸಹಾಯಕ ವ್ಯವಸ್ಥಾಪಕರಾದ ಕೌಸಲ್ಯ, ಕ್ಲರ್ಕ್ ಮುನಿರಾಜು ಅವರ ಮೂಲಕ ಹರಿಕರನ್ ಸಾಲ ಮಾಡಿಸಿಕೊಂಡಿದ್ದರು ಎಂದು ಗೊತ್ತಾಗಿದೆ.

ಪಶ್ಚಿಮ ಬಂಗಾಳದ 28 ಬ್ಯಾಂಕ್ ಖಾತೆ, ಕರ್ನಾಟಕದ 2 ಬ್ಯಾಂಕ್ ಖಾತೆಗಳಿಗೆ ಆರೋಪಿ ಹಣ ಜಮೆ ಮಾಡಿದ್ದರು. ಬ್ಯಾಂಕಿನ ಆಂತರಿಕ ಪರಿಶೀಲನೆ ವೇಳೆ ವಂಚನೆ ಬಯಲಾಗಿತ್ತು. ಈ ಬಗ್ಗೆ ಹನುಮಂತ ನಗರ ಠಾಣೆಗೆ ಇಂಡಿಯನ್ ಬ್ಯಾಂಕ್ ವಲಯ ಪ್ರಬಂಧಕ ಡಿ.ಎಸ್. ಮೂರ್ತಿ ದೂರು ನೀಡಿದ್ದರು. ತನಿಖೆ ವೇಳೆ ಡೇಟಿಂಗ್ ಆ್ಯಪ್ ನಲ್ಲಿ ಪರಿಚಯವಾದ ಯುವತಿಗೆ ಹಣ ಪಾವತಿಸಿರುವುದಾಗಿ ಹರಿಶಂಕರ್ ಹೇಳಿದ್ದರು. ಡೇಟಿಂಗ್ ಆ್ಯಪ್ ನಲ್ಲಿ ಯುವತಿ ಸಂಪರ್ಕ ಬೆಳೆದಿದ್ದು, ಅಷ್ಟೂ ಹಣ ಅದೇ ಯುವತಿಗೆ ನೀಡಿರುವುದಾಗಿ ಹೇಳಿಕೆ ನೀಡಿದ್ದಾರೆ. ಆರೋಪಿಯ ಅಸ್ಪಷ್ಟ ಹೇಳಿಕೆಯಿಂದ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

12 ಶಾಸಕರ ಅನರ್ಹತೆಗೆ ಯತ್ನ?

ಒಂದನೇ ಪುಟದಿಂದ

ಇನ್ನು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು, 'ಎಂವಿಎ ಸರ್ಕಾರದ ಭವಿಷ್ಯವನ್ನು ವಿಧಾನಸಭೆಯ ಮಹಡಿಯಲ್ಲಿ ನಿರ್ಧರಿಸಲಾಗುತ್ತದೆಯೇ ಹೊರತು ಗುವಾಹಟಿಯಲ್ಲಿ ಅಲ್ಲ' ಎಂದು ಹೇಳಿದ್ದಾರೆ. ಅಲ್ಲದೆ ಶಿವಸೇನಾದ ಬಂಡಾಯ ಶಾಸಕರ ಹಿಂದೆ ಬಿಜೆಪಿ ಕೈವಾಡವಿದೆ ಎಂದು ಅವರು ದೂರಿದ್ದಾರೆ.

'ನಮ್ಮ ಬಂಡಾಯವನ್ನು ರಾಷ್ಟ್ರೀಯ ಪಕ್ಷವೊಂದು ಬೆಂಲಿಸಿದ್ದು, ಅಗತ್ಯ ನೆರವು ನೀಡುವ ಭರವಸೆ ನೀಡಿದೆ' ಎಂದು ಶಿಂಧೆ ಅವರು ಗುವಾಹಟಿಯಲ್ಲಿ ಬಂಡಾಯ ಶಾಸಕರನ್ನು ಉದ್ದೇಶಿಸಿ ಮಾತನಾಡಿದ ವಿಡಿಯೊ ಬಹಿರಂಗವಾದ ಬೆನ್ನಲ್ಲೇ ಶರದ್ ಪವಾರ್ ಅವರು ಬಿಜೆಪಿ ವಿರುದ್ಧ ಹರಿಹಾಯ್ದಿದ್ದಾರೆ.

'ಗುವಾಹಟಿಯಲ್ಲಿರುವ ಶಾಸಕರ ಪೈಕಿ 18ರಿಂದ 20 ಮಂದಿ ನಮ್ಮ ಸಂಪರ್ಕದಲ್ಲಿದ್ದಾರೆ' ಎಂದು ಶಿವಸೇನಾದ ವಕ್ತಾರ ಸಂಜಯ್ ರಾವುತ್ ಹೇಳಿದ್ದಾರೆ.

ಏಳು ಕ್ಷೇತ್ರಗಳಲ್ಲಿ ವಾರ್ಡ್‌ಗಳ ಸಂಖ್ಯೆ ಬದಲಿಲ್ಲ ● ಕೆ.ಆರ್.ಪುರ, ದಾಸರಹಳ್ಳಿ ಕ್ಷೇತ್ರಗಳಿಗೆ ತಲಾ ನಾಲ್ಕು ವಾರ್ಡ್ ಸೇರ್ಪಡೆ

ಬೊಮ್ಮನಹಳ್ಳಿ, ಆರ್.ಆರ್.ನಗರಕ್ಕೆ 14 ವಾರ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 198ರಿಂದ 243ಕ್ಕೆ ಏರಿಕೆಯಾದ ವಾರ್ಡ್‌ಗಳಲ್ಲಿ ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ ವಿಧಾನ ಸಭಾ ಕ್ಷೇತ್ರಗಳಿಗೇ ಅತೀ ಹೆಚ್ಚು 14 ವಾರ್ಡ್‌ಗಳನ್ನು ವಿಂಗಡಿಸಲಾಗಿದೆ.

ಮಲ್ಲೇಶ್ವರ, ಶಾಂತಿನಗರ, ಗಾಂಧಿನಗರ, ರಾಜಾಜಿನಗರ, ಚಿಕ್ಕಪೇಟೆ, ಹೆಬ್ಬಾಳ ಮತ್ತು ಪುಲಕೇಶಿ ನಗರ ಕ್ಷೇತ್ರಗಳಲ್ಲಿ ವಾರ್ಡ್‌ಗಳು ಬದಲಾಗಿಲ್ಲ. ಆದರೆ, ಅವುಗಳ ಗಡಿಗಳು ಬದಲಾಗಿರುವ ಸಾಧ್ಯತೆ ಇದೆ.

ಬ್ಯಾಟರಾಯನಪುರ ಮತ್ತು ಯಲಹಂಕ ಹೊರತುಪಡಿಸಿ ನಗರದ ಹೊರವಲಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ವಾರ್ಡ್‌ಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಬ್ಯಾಟರಾಯನಪುರದಲ್ಲಿ ಮೂರು ವಾರ್ಡ್‌ಗಳು ಹೆಚ್ಚಾಗಿದ್ದರೆ, ಯಲಹಂಕದಲ್ಲಿ ಒಂದು ವಾರ್ಡ್ ಮಾತ್ರ ಅಧಿಕವಾಗಿದೆ. ಮಹದೇವಪುರ, ಬೆಂಗಳೂರು ದಕ್ಷಿಣ ಮತ್ತು ರಾಜರಾಜೇಶ್ವರಿ ನಗರ ಕ್ಷೇತ್ರಗಳಲ್ಲಿ ತಲಾ ಐದು ವಾರ್ಡ್‌ಗಳು, ಕೆ.ಆರ್.ಪುರ ಮತ್ತು ದಾಸರಹಳ್ಳಿ ಕ್ಷೇತ್ರಗಳಲ್ಲಿ ತಲಾ ನಾಲ್ಕು ವಾರ್ಡುಗಳು ಹೊಸದಾಗಿ ಸೇರ್ಪಡೆಯಾಗಿವೆ.

'ಬಿಜೆಪಿ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಲ್ಲಿ ವಾರ್ಡ್‌ಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಕಾಂಗ್ರೆಸ್ ಶಾಸಕರ ಕ್ಷೇತ್ರಗಳಲ್ಲಿ ಮೂರು ಕಡೆ ಕಡಿತ ಮಾಡಿದ್ದರೆ, ವಾರ್ಡ್‌ಗಳ ಸಂಖ್ಯೆಯನ್ನು ಹಾಗೇ ಉಳಿಸಲಾಗಿದೆ' ಎಂಬ ಆರೋಪಗಳು ಕಾಂಗ್ರೆಸ್ ಶಾಸಕರಿಂದ ವ್ಯಕ್ತವಾಗಿವೆ.

'ವಾರ್ಡ್‌ಗಳ ಗಡಿಗಳನ್ನು ಗುರುತಿಸಲು ಕರಡಿನಲ್ಲಿ ನಾಲ್ಕು ದಿಕ್ಕಿನ ಕೆಲವು ಸ್ಥಳಗಳನ್ನು ತಿಳಿಸಲಾಗಿದೆ. ಆದರೆ, ಪ್ರತಿವಾರ್ಡ್‌ಗೆ ಸಂಬಂಧಿಸಿದ ನಕ್ಷೆ ನೀಡಿಲ್ಲ. ಇದು ಗೊಂದಲಗಳನ್ನು ಹುಟ್ಟು ಹಾಕಿದೆ ಎಂಬ ಟೀಕೆಗಳು ವ್ಯಕ್ತವಾಗುತ್ತಿವೆ. ಈ ಎಲ್ಲಾ ದೋಷಗಳ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಲಾಗುವುದು' ಎಂದರು.

'ಒಟ್ಟಾರೆ ಜನಸಂಖ್ಯೆಯನ್ನು 243 ಕ್ಷೇತ್ರಗಳಿಗೆ ವಿಭಾಗಿಸಿ ಸರಾಸರಿ 34 ಸಾವಿರ ಜನಸಂಖ್ಯೆ ಇರುವಂತೆ ವಾರ್ಡ್‌ಗಳನ್ನು ವಿಂಗಡಿಸಲಾಗಿದೆ. ಕೆಲವು ವಾರ್ಡ್‌ಗಳಲ್ಲಿ ಈ ಸಂಖ್ಯೆ ಶೇ 10ರಷ್ಟು ಕಡಿಮೆ ಇರಬಹುದು, ಕೆಲವು ವಾರ್ಡ್‌ಗಳಲ್ಲಿ ಶೇ 10ರಷ್ಟು ಹೆಚ್ಚಿರಬಹುದು. ಜನಸಂಖ್ಯೆಯೇ ವಾರ್ಡ್ ವಿಂಗಡಣೆಯ ಮಾನದಂಡ' ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.

ಜಯನಗರ ಬದಲು ಅಶೋಕ ಸ್ತಂಭ

2019ರಲ್ಲಿ ವಾರ್ಡ್ ಮರು ವಿಂಗಡಣೆ ಮಾಡಿದ್ದಾಗ ಕೈಬಿಟ್ಟಿದ್ದ ಜಯನಗರ ಮತ್ತು ಪ್ರಕಾಶ್‌ನಗರ ವಾರ್ಡ್‌ಗಳನ್ನು ಈಗ ಮರು ಸೇರ್ಪಡೆ ಮಾಡಲಾಗಿದೆ.

'ಜಯನಗರ ಎಂದಿದ್ದ ವಾರ್ಡ್ ಈಗ ಅಶೋಕ ಸ್ತಂಭ ಎಂದು ಹೆಸರು ಬದಲಾಗಿದೆ. ಬಿಜೆಪಿಯವರಿಗೆ ಅನುಕೂಲ ಆಗುವ ರೀತಿಯಲ್ಲಿ ಅಕ್ಕಪಕ್ಕದ ಪ್ರದೇಶಗಳನ್ನು ಸೇರ್ಪಡೆ ಮಾಡಲಾಗಿದೆ. ಆದರೆ, ಈ ವಾರ್ಡ್ ಹಿಂದಿನಂತೆ ಚಿಕ್ಕಪೇಟೆ ಕ್ಷೇತ್ರದಲ್ಲೇ ಉಳಿದುಕೊಂಡಿದೆ' ಎಂದು ಕಳೆದ ಅವಧಿಯಲ್ಲಿ ಮೇಯರ್ ಆಗಿದ್ದ ಗಂಗಾಂಬಿಕೆ ಹೇಳಿದರು.



ಆರ್‌ಎಸ್‌ಎಸ್ ಕಚೇರಿಯಲ್ಲಿ ಸಿದ್ಧವಾದ ಕರಡು

ರಾಮಲಿಂಗಾ ರೆಡ್ಡಿ

'ವಾರ್ಡ್‌ಗಳ ಮರು ವಿಂಗಡಣೆಗೆ ಪಾಲಿಕೆ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು. ಈ ಸಮಿತಿ ವಾರ್ಡ್‌ಗಳಲ್ಲಿ ಸಭೆ ನಡೆಸಿ, ಕಂದಾಯ ಅಧಿಕಾರಿಗಳ ಮೂಲಕ ಗಡಿ ಗುರುತಿಸಬೇಕಿತ್ತು. ಆದರೆ, ಒಂದೇ ಒಂದು ಸಭೆಯನ್ನೂ ನಡೆಸಿಲ್ಲ' ಎಂದು ಶಾಸಕ ರಾಮಲಿಂಗಾರೆಡ್ಡಿ ಆರೋಪಿಸಿದರು.

'ಬಿಜೆಪಿ ಶಾಸಕರು, ಸಂಸದರು ತಮ್ಮ ಕಾರ್ಯಕರ್ತರನ್ನು ಕೂರಿಸಿಕೊಂಡು ಆರ್‌ಎಸ್‌ಎಸ್ ಕಚೇರಿಯಲ್ಲಿ(ಕೇಶವಕೃಪಾ) ಈ ವರದಿ ಸಿದ್ಧಪಡಿಸಿದ್ದಾರೆ. ಅವರು ಕೊಟ್ಟಿದ್ದನ್ನು ಅಧಿಕಾರಿಗಳು ಕಣ್ಮುಚ್ಚಿಕೊಂಡು ಸರ್ಕಾರಕ್ಕೆ ಸಲ್ಲಿಸಿದ್ದಾರೆ' ಎಂದು ದೂರಿದರು.

ಹೊಸ ವಾರ್ಡ್‌ಗಳಿಗೆ ಹೆಸರು

ಹೊಸದಾಗಿ ರಚನೆಯಾದ ವಾರ್ಡ್‌ಗಳಿಗೆ ಹೆಸರುಗಳನ್ನು ನೀಡಲಾಗಿದೆ.

ವೀರ ಮದಕರಿ, ಚಾಣಕ್ಯ, ರಣಧೀರ ಕಂಠೀರವ, ವೀರ ಸಿಂಧೂರ ಲಕ್ಷ್ಮಣ, ವಿಜಯನಗರ ಕೃಷ್ಣದೇವರಾಯ, ಸರ್ ಎಂ.ವಿಶ್ವೇಶ್ವರಯ್ಯ, ನಾಲ್ವಡಿ ಕೃಷ್ಣರಾಜ ಒಡೆಯರ್, ವೃಷಭಾವತಿನಗರ, ಅಶೋಕ ಸ್ತಂಭ, ದೀನ್ ದಯಾಳ್ ಅವರ ಹೆಸರುಗಳನ್ನು ವಾರ್ಡ್‌ಗಳಿಗೆ ನೀಡಲಾಗಿದೆ.

'ಗಡಿ ಗುರುತಿಸುವಿಕೆ ಸಮರ್ಪಕವಾಗಿಲ್ಲ'

ಸುಪ್ರೀಂ ಕೋರ್ಟ್‌ಗೆ ಹೆದರಿ ತರಾತುರಿಯಲ್ಲಿ ಕರಡು ಪ್ರಕಟಿಸಲಾಗಿದೆ. ಗಡಿ ಗುರುತಿಸುವ ಕಾರ್ಯ ಸಮರ್ಪಕವಾಗಿ ನಡೆದಿಲ್ಲ ಎಂದು ಹಿಂದಿನ ಅವಧಿಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಅಬ್ದುಲ್ ವಾಜೀದ್ ದೂರಿದರು.

2011ರ ಜನಸಂಖ್ಯೆ ಆಧರಿಸಿ ಮರು ವಿಂಗಡಣೆ ಮಾಡಲಾಗಿದೆ. ಆಗ ಬೆಂಗಳೂರಿನ ಜನಸಂಖ್ಯೆ 84 ಲಕ್ಷ ಇತ್ತು. 11 ವರ್ಷದಲ್ಲಿ ಜನಸಂಖ್ಯೆ 1.30 ಕೋಟಿಗೆ ಏರಿಕೆಯಾಗಿದೆ. ಮತದಾರರ ಸಂಖ್ಯೆಯೂ ಜಾಸ್ತಿಯಾಗಿರುತ್ತದೆ. ಯಾವುದೇ ಮಾನದಂಡವಿಲ್ಲದ ವಾರ್ಡ್‌ಗಳ ಮರುವಿಂಗಡಣೆ ಇದಾಗಿದೆ ಎಂದರು.

ತಂತ್ರಜ್ಞಾನ ಸಾಕಷ್ಟು ಬೆಳೆದಿದ್ದರೂ ಗಡಿ ಗುರುತಿಸಲು ಹಳೇ ಪದ್ಧತಿಗಳನ್ನೇ ಅನುಸರಿಸಲಾಗಿದೆ. ಗಡಿ ಎಂದು ಹೆಸರಿಸಿರುವ ಜಾಗ ಹುಡುಕಾಡಿದರೂ ಸಿಗುವ ಸಾಧ್ಯತೆ ಕಡಿಮೆ. ಒಟ್ಟಾರೆ ಕರಡು ಗೊಂದಲದ ಗೂಡಾಗಿದೆ ಎಂದು ಹೇಳಿದರು.

ಕೂಡಲೇ ಎಲ್ಲವನ್ನೂ ಸರಿಪಡಿಸಿ ವಾರ್ಡ್‌ಗಳ ಮರುವಿಂಗಡಣೆ ಅಂತಿಮಗೊಳಿಸಬೇಕು. ಸುಪ್ರೀಂ ಕೋರ್ಟ್ ನೀಡಿರುವ ಸಮಯದೊಳಗೆ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸಿದರು.

ಯಾವ ಕ್ಷೇತ್ರಕ್ಕೆ ಎಷ್ಟು ವಾರ್ಡ್

ವಿಧಾನಸಭಾ ಕ್ಷೇತ್ರಗಳು	ಹಾಲಿ ಇದ್ದ ವಾರ್ಡ್‌ಗಳ ಸಂಖ್ಯೆ	ವಿಂಗಡಣೆಯಾದ ವಾರ್ಡ್‌ಗಳ ಸಂಖ್ಯೆ
ಯಲಹಂಕ	4	5
ಕೆ.ಆರ್.ಪುರ	9	13
ಬ್ಯಾಟರಾಯನಪುರ	7	10
ಯಶವಂತಪುರ	5	8
ರಾಜರಾಜೇಶ್ವರಿ ನಗರ	9	14
ದಾಸರಹಳ್ಳಿ	8	12
ಮಹಾಲಕ್ಷ್ಮಿ ಲೇಔಟ್	7	9
ಮಲ್ಲೇಶ್ವರ	7	7
ಹೆಬ್ಬಾಳ	8	8
ಪುಲಕೇಶಿ ನಗರ	7	7
ಸರ್ವಜ್ಞನಗರ	8	8
ಸಿ.ವಿ. ರಾಮನ್ ನಗರ	7	9
ಶಿವಾಜಿ ನಗರ	7	6
ಶಾಂತಿನಗರ	7	7

ವಿಧಾನಸಭಾ ಕ್ಷೇತ್ರಗಳು	ಹಾಲಿ ಇದ್ದ ವಾರ್ಡ್‌ಗಳ ಸಂಖ್ಯೆ	ವಿಂಗಡಣೆಯಾದ ವಾರ್ಡ್‌ಗಳ ಸಂಖ್ಯೆ
ಗಾಂಧಿನಗರ	7	7
ರಾಜಾಜಿನಗರ	7	7
ಗೋವಿಂದರಾಜನಗರ	9	10
ವಿಜಯನಗರ	8	9
ಚಾಮರಾಜಪೇಟೆ	7	6
ಚಿಕ್ಕಪೇಟೆ	7	7
ಬಸವನಗುಡಿ	6	7
ಪದ್ಮನಾಭನಗರ	8	10
ಬಿಟಿಎಂ ಲೇಔಟ್	8	9
ಜಯನಗರ	7	6
ಮಹದೇವಪುರ	8	13
ಬೊಮ್ಮನಹಳ್ಳಿ	8	14
ಬೆಂಗಳೂರು ದಕ್ಷಿಣ	7	12
ಆನೇಕಲ್	1	1
ಒಟ್ಟು	198	243

ಸಚಿವ ವಿ.ಸೋಮಣ್ಣ ಅವರು ಬಿಬಿಎಂಪಿ ಅಧಿಕಾರಿಗಳ ಜತೆ ಗುರುವಾರ ಮೇಲ್ಸೇತುವೆ ಕಾಮಗಾರಿ ಪರಿಶೀಲಿಸಿದರು

ಟೆಂಡರ್ ಮೊತ್ತ ಹೆಚ್ಚಾಗಿಲ್ಲ: ಸೋಮಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಶ್ಚಿಮ ಕಾರ್ಡ್ ರಸ್ತೆಯ ಬಸವೇಶ್ವರನಗರ ಜಂಕ್ಷನ್‌ನಲ್ಲಿ ಹೆಚ್ಚುವರಿ ಮೇಲ್ಸೇತುವೆ ನಿರ್ಮಾಣಕ್ಕೆ ಹೆಚ್ಚಿಸಿರುವ ಟೆಂಡರ್ ಮೊತ್ತವನ್ನು ಹೊಸ ಎಸ್‌ಆರ್ ದರಕ್ಕೆ ಹೋಲಿಸಿದರೆ ಶೇ 2ರಷ್ಟು ಕಡಿಮೆ ಇದೆ' ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದ ಅವರು, ಸುದ್ದಿಗಾರರ ಜತೆ ಮಾತನಾಡಿದರು. 2018ರ ಎಸ್‌ಆರ್ ದರದಲ್ಲಿ ಅಂದಾಜು ಮಾಡಿದಾಗ ₹17.21 ಕೋಟಿ ಇತ್ತು. ಈಗ ₹20.92 ಕೋಟಿಗೆ ಏರಿಸಲಾಗಿದೆ. ಹಾಗಾಗಿ ಶೇ 21ರಷ್ಟು ಹೆಚ್ಚಾಗಿದೆ ಎಂದು ಹೇಳಲು ಆಗುವುದಿಲ್ಲ. ಈಗ ಕಬ್ಬಿಣ, ಸಿಮೆಂಟ್ ಎಲ್ಲಾ ದರವೂ ಹೆಚ್ಚಾಗಿದೆ. ಈಗಿನ ಎಸ್‌ಆರ್ ದರಕ್ಕೆ ಹೋಲಿಸಿದರೆ ಇನ್ನೂ ಕಡಿಮೆಯೇ ಇದೆ' ಎಂದು ಹೇಳಿದರು.

'ಟೆಂಡರ್ ಯಾವ ಕಂಪನಿಗೇ ಸಿಗಲಿ, ಕಾಮಗಾರಿಯನ್ನು ಬೇರೆ ಕಂಪನಿಯೇ ನಿರ್ವಹಿಸಲಿ, ಅದು ಮುಖ್ಯ ಅಲ್ಲ. ಕಾಮಗಾರಿ ಗುಣಮಟ್ಟದಿಂದ ಕೂಡಿದೆಯೇ ಎಂಬುದಷ್ಟೇ ಮುಖ್ಯ. ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಬೇಕಿದೆ. ಎರಡು ತಿಂಗಳಲ್ಲಿ ಸೇತುವೆ ನಿರ್ಮಾಣ ಆಗಲಿದೆ' ಎಂದು ಸ್ಪಷ್ಟಪಡಿಸಿದರು.

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದ ಕೆಎಸ್‌ಆರ್‌ಟಿಸಿ ಚಾಲಕ ಮಾಣಿಕ್ ರಾವ್ ಅವರ ಮಗ ಅನುರಾಗ ಧರು ಅವರನ್ನು ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಂ.ಚಂದ್ರಪ್ಪ ಮತ್ತು ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಸನ್ಮಾನಿಸಿದರು. ಅನುರಾಗ ಧರು ಅವರ ತಂದೆ ಚಾಲಕ ಮಾಣಿಕ್ ರಾವ್, ತಾಯಿ ಕಾಶಿಬಾಯಿ, ನಿಗಮದ ನಿರ್ದೇಶಕ(ಸಿಬ್ಬಂದಿ ಮತ್ತು ಭದ್ರತೆ) ವೈ. ನವೀನ್‌ಭಟ್ ಇದ್ದರು

ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ

REDDY JANA SANGHA KARNATAKA STATE
विद्या सर्वस्य भूषणं
KNOWLEDGE IS POWER

ಶ್ರೀ ಶ್ರೀ ಶ್ರೀ ಮಹಾಯೋಗಿ ವೇಮನ

ಕರ್ನಾಟಕ ರೆಡ್ಡಿಜನ ಸಂಘದ
"ಸಂಸ್ಥಾಪಕರ ಸ್ಮರಣ ಸಮಾರಂಭ"

ದಿನಾಂಕ 25-06-2022ರ ಶನಿವಾರ, ಸಮಯ : ಬೆಳಗ್ಗೆ 10.30 ಗಂಟೆಗೆ
ಸ್ಥಳ : ವೇಮನ ತಾಂತ್ರಿಕ ಮಹಾವಿದ್ಯಾಲಯದ ಆವರಣ, ಕೋರಮಂಗಲ.

ದಿವ್ಯ ಸಾನಿಧ್ಯ
ಶ್ರೀ ಶ್ರೀ ಶ್ರೀ ವೇಮನಾನಂದ ಸ್ವಾಮೀಜಿಗಳು
ರೆಡ್ಡಿ ಗುರುಪೀಠ, ಎರೆಹೊಸಳ್ಳಿ, ಹರಿಹರ ತಾಲ್ಲೂಕು, ದಾವಣಗೆರೆ.

ಉದ್ಘಾಟನೆ
ಶ್ರೀಯುತ ರಾಘವ ರೆಡ್ಡಿ
ದಿವಂಗತ ಜಂಗಮ ಸುಬ್ಬಾ ರೆಡ್ಡಿಯವರ ಮೊಮ್ಮಗ

ಅಧ್ಯಕ್ಷತೆ
ಶ್ರೀ ಎಸ್. ಜಯರಾಮ ರೆಡ್ಡಿ
ಅಧ್ಯಕ್ಷರು, ಕರ್ನಾಟಕ ರೆಡ್ಡಿಜನ ಸಂಘ.

ಸಂಸ್ಥಾಪಕರ ಪರವಾಗಿ ಅವರ ಕುಟುಂಬಸ್ಥರಿಗೆ ಗೌರವ ಸಮರ್ಪಣೆ

ದಿವಂಗತ ಜಂಗಮ ಸುಬ್ಬಾ ರೆಡ್ಡಿ / ಶ್ರೀ ರಾಘವ ರೆಡ್ಡಿ / ಜಂಗಮ ಸುಬ್ಬಾ ರೆಡ್ಡಿಯವರ ಮೊಮ್ಮಗ
ದಿವಂಗತ / ಎಲ್.ರಾಮಸ್ವಾಮಿ ರೆಡ್ಡಿ
ದಿವಂಗತ ಬಿ.ವಿ. ನಾರಾಯಣ ರೆಡ್ಡಿ / ಶ್ರೀಮತಿ. ಗೀತಾ ರೆಡ್ಡಿ / ಬಿ.ವಿ. ನಾರಾಯಣ ರೆಡ್ಡಿಯವರ ಮಗಳಾದ ಸುಧಾ ವಿ. ರೆಡ್ಡಿಯವರ ಮಗಳು.
ದಿವಂಗತ ಎಸ್. ಲಕ್ಷ್ಮಯ್ಯ ರೆಡ್ಡಿ / ಶ್ರೀ ವೆಂಕಟೇಶ ರೆಡ್ಡಿ / ದಿವಂಗತ ಎಸ್. ಲಕ್ಷ್ಮಯ್ಯ ರೆಡ್ಡಿಯವರ ಮೊಮ್ಮಗ
ದಿವಂಗತ ಎಸ್. ರಾಮಯ್ಯ ರೆಡ್ಡಿ / ಶ್ರೀ ಎಸ್. ಆರ್. ವಾಸುದೇವ ರೆಡ್ಡಿ / ಸಕಲವಾರ / ಎಸ್. ರಾಮಯ್ಯ ರೆಡ್ಡಿಯವರ ಮಗ
ದಿವಂಗತ ಅಣ್ಣಯ್ಯ ರೆಡ್ಡಿ / ಶ್ರೀ ರಾಜಶೇಖರ ರೆಡ್ಡಿ / ದಿವಂಗತ ಅಣ್ಣಯ್ಯ ರೆಡ್ಡಿರವರ ಮಗ
ದಿವಂಗತ / ಡಿ.ಎಂ. ಹನುಮಪ್ಪ ರೆಡ್ಡಿ
ದಿವಂಗತ / ಮಂಡಿ ರೆಡ್ಡಿ ಕೊಂಡಪ್ಪ

ವಿಶೇಷ ಆಹ್ವಾನಿತರು

ಸನ್ಮಾನ್ಯ ಶ್ರೀ ರಾಮಲಿಂಗಾ ರೆಡ್ಡಿಯವರು, ಮಾಜಿ ಗೃಹ ಸಚಿವರು, ಗೌರವಾನ್ವಿತ ಶಾಸಕರು, ಬಿ.ಟಿ.ಎಂ. ವಿಧಾನ ಸಭಾ ಕ್ಷೇತ್ರ.
ಶ್ರೀ ಹಾಲಪ್ಪ ಆಚಾರ್, ಸನ್ಮಾನ್ಯ ಸಚಿವರು, ಗಣಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಕರ್ನಾಟಕ ಸರ್ಕಾರ
ಶ್ರೀ ಕೆ.ಸಿ. ರಾಮಮೂರ್ತಿ, ಮಾನ್ಯ ರಾಜ್ಯ ಸಭಾ ಸದಸ್ಯರು
ಶ್ರೀ ಕುಪೇಂದ್ರ ರೆಡ್ಡಿ ಡಿ., ಮಾನ್ಯ ಮಾಜಿ ರಾಜ್ಯ ಸಭಾ ಸದಸ್ಯರು
ಶ್ರೀ ಎಚ್. ಕೆ. ಪಾಟೀಲ್, ಮಾಜಿ ಸಚಿವರು, ಮಾನ್ಯ ಮಾಜಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಸಚಿವರು, ಶಾಸಕರು, ಗದಗ ವಿಧಾನ ಸಭಾ ಕ್ಷೇತ್ರ
ಶ್ರೀ ಎಸ್.ಆರ್. ವಿಶ್ವನಾಥ್, ಮಾನ್ಯ ಶಾಸಕರು, ಯಲಹಂಕ ವಿಧಾನ ಸಭಾ ಕ್ಷೇತ್ರ ಹಾಗೂ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಶ್ರೀ ಎಂ. ಸತೀಶ ರೆಡ್ಡಿ, ಮಾನ್ಯ ಶಾಸಕರು, ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರ, ಹಾಗೂ ಮುಖ್ಯ ಸಚೇತಕರು
ಶ್ರೀ ಎನ್. ಎಚ್. ಶಿವಶಂಕರ ರೆಡ್ಡಿ, ಮಾನ್ಯ ಮಾಜಿ ಕೃಷಿ ಸಚಿವರು ಮತ್ತು ಶಾಸಕರು, ಗೌರಿಬಿದನೂರು ವಿಧಾನ ಸಭಾ ಕ್ಷೇತ್ರ.
ಶ್ರೀ ಎಂ. ಕೃಷ್ಣಾ ರೆಡ್ಡಿ, ಮಾನ್ಯ ಮಾಜಿ ಉಪಸಭಾಧ್ಯಕ್ಷರು, ಹಾಗೂ ಮಾನ್ಯ ಶಾಸಕರು, ಚಿಂತಾಮಣಿ ವಿಧಾನ ಸಭಾ ಕ್ಷೇತ್ರ.
ಶ್ರೀ ಎಸ್. ಎನ್. ಸುಬ್ಬಾ ರೆಡ್ಡಿ, ಮಾನ್ಯ ಶಾಸಕರು, ಬಾಗೇಪಲ್ಲಿ ವಿಧಾನ ಸಭಾಕ್ಷೇತ್ರ
ಶ್ರೀಮತಿ. ಸೌಮ್ಯ ರೆಡ್ಡಿ, ಮಾನ್ಯ ಶಾಸಕರು, ಜಯನಗರ ವಿಧಾನ ಸಭಾ ಕ್ಷೇತ್ರ
ಶ್ರೀ ಜಿ. ಕರುಣಾಕರ ರೆಡ್ಡಿ, ಸನ್ಮಾನ್ಯ ಶಾಸಕರು, ಹರಪನಹಳ್ಳಿ ವಿಧಾನ ಸಭಾ ಕ್ಷೇತ್ರ ಹಾಗೂ ಮಾಜಿ ಕಂದಾಯ ಸಚಿವರು
ಶ್ರೀ ಜಿ. ಸೋಮಶೇಖರ ರೆಡ್ಡಿ, ಸನ್ಮಾನ್ಯ ಶಾಸಕರು, ಬಳ್ಳಾರಿ ವಿಧಾನ ಸಭಾ ಕ್ಷೇತ್ರ
ಶ್ರೀ ಸೋಮನಗೌಡ ಪಾಟೀಲ್, ಸನ್ಮಾನ್ಯ ಶಾಸಕರು, ದೇವರಹಿಪ್ಪರಗಿ ವಿಧಾನ ಸಭಾ ಕ್ಷೇತ್ರ
ಶ್ರೀ ಎ.ಎಸ್. ನಡಹಳ್ಳಿ, ಸನ್ಮಾನ್ಯ ಶಾಸಕರು, ಮುದ್ದೇಬಿಹಾಳ ವಿಧಾನ ಸಭಾಕ್ಷೇತ್ರ
ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ, ಸನ್ಮಾನ್ಯ ಶಾಸಕರು, ಕುಷ್ಟಗಿ ವಿಧಾನ ಸಭಾಕ್ಷೇತ್ರ
ಶ್ರೀ ವೆಂಕಟರೆಡ್ಡಿ ಮುದ್ನಾಳ್, ಸನ್ಮಾನ್ಯ ಶಾಸಕರು, ಯಾದಗಿರಿ ವಿಧಾನ ಸಭಾ ಕ್ಷೇತ್ರ
ಶ್ರೀ ದೊಡ್ಡನಗೌಡ ಪಾಟೀಲ್, ಸನ್ಮಾನ್ಯ ಶಾಸಕರು, ಹುನಗುಂದ ವಿಧಾನ ಸಭಾ ಕ್ಷೇತ್ರ
ಶ್ರೀ ಶರಣ ಬಸಪ್ಪ ದರ್ಶನಾಪುರ, ಸನ್ಮಾನ್ಯ ಶಾಸಕರು, ಶಹಾಪುರ ವಿಧಾನ ಸಭಾಕ್ಷೇತ್ರ
ಶ್ರೀ ನಾಗನಗೌಡ ಕಂದಕೂರು, ಸನ್ಮಾನ್ಯ ಶಾಸಕರು, ಗುರುಮಿಟಕಲ್ ವಿಧಾನ ಸಭಾ ಕ್ಷೇತ್ರ
ಶ್ರೀ ಪಿ.ಎಚ್. ಪೂಜಾರ್, ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು, ಬಾಗಲಕೋಟೆ
ಶ್ರೀ ಎಚ್.ಎಸ್. ಗೋಪಿನಾಥ್, ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು, ಬೆಂಗಳೂರು
ಶ್ರೀ ಶರಣಗೌಡ ಪಾಟೀಲ್ ಬಯ್ಯಾಪುರ, ಮಾನ್ಯ ವಿಧಾನ ಪರಿಷತ್ ಸದಸ್ಯರು, ರಾಯಚೂರು.
ಶ್ರೀ ಎನ್. ಎಸ್. ನಂದೀಶ್ ರೆಡ್ಡಿ, ಬಿ.ಎಂ.ಟಿ.ಸಿ. ಅಧ್ಯಕ್ಷರು, ಹಾಗೂ ಮಾಜಿ ಶಾಸಕರು
ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ, ಮಾಜಿ ಶಾಸಕರು, ಮಾಜಿ ಅಧ್ಯಕ್ಷರು ಕೆ.ಆರ್.ಜೆ.ಎಸ್.
ಶ್ರೀ ಕೆ.ಬಿ. ಮುನಿವೆಂಕಟ ರೆಡ್ಡಿ, ಮಾಜಿ ವಿಧಾನ ಪರಿಷತ್ ಸದಸ್ಯರು, ಮಾಜಿ ಅಧ್ಯಕ್ಷರು, ಕೆ.ಆರ್.ಜೆ.ಎಸ್.
ಶ್ರೀ ಎಚ್.ಬಿ. ಸೋಮಶೇಖರ ರೆಡ್ಡಿ, ಮಾಜಿ ಅಧ್ಯಕ್ಷರು, ಕೆ.ಆರ್.ಜೆ.ಎಸ್.
ಶ್ರೀ ಎಚ್.ಎನ್. ವಿಜಯರಾಘವ ರೆಡ್ಡಿ, ಮಾಜಿ ಅಧ್ಯಕ್ಷರು, ಕೆ.ಆರ್.ಜೆ.ಎಸ್.

ಸಮುದಾಯದ ಸಮಸ್ತ ಕುಲಬಾಂಧವರು ದಾನಿಗಳು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಈ ಸಮಾರಂಭದಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಕೋರಲಾಗಿದೆ.
ಸರ್ವರಿಗೂ ಆದರದ ಸುಸ್ವಾಗತ
ತಮ್ಮ ಆಗಮನಾಕಾಂಕ್ಷಿಗಳು : ಕರ್ನಾಟಕ ರೆಡ್ಡಿಜನ ಸಂಘದ ಪದಾಧಿಕಾರಿಗಳು ಮತ್ತು ಆಡಳಿತ ಮಂಡಳಿಯ ಸದಸ್ಯರುಗಳು, ಕರ್ನಾಟಕ ರೆಡ್ಡಿಜನ ಸಂಘ.

ಪಕ್ಷ ಉಳಿಸಲು ಹರಸಾಹಸ

ಒಂದನೇ ಪುಟದಿಂದ

ಶಿವಸೇನಾದ ಶಾಸಕರಾದ ದೀಪಕ್ ಕೇಸರ್ಕರ್, ಮಂಗೇಶ್ ಕುಡಾಲ್ಕರ್ ಮತ್ತು ಸದಾ ಸರವಣ್ಕರ್ ತಲುಪಿದ್ದಾರೆ ಎಂದು ಶಿಂದೆ ಅವರ ಆಪ್ತರೊಬ್ಬರು ತಿಳಿಸಿದ್ದಾರೆ. ಸಚಿವ ಗುಲಾಬ್‌ರಾವ್ ಪಾಟೀಲ್ ಸೇರಿ ನಾಲ್ವರು ಶಾಸಕರು ಬುಧವಾರ ಸಂಜೆ ಗುವಾಹಟಿ ತಲುಪಿದ್ದರು. ಇವರು ತಲುಪಿದ ಬಳಿಕ, ತಮಗೆ ಪಕ್ಷೇತರರು ಸೇರಿ 46 ಶಾಸಕರ ಬೆಂಬಲ ಇದೆ ಎಂದು ಶಿಂದೆ ಹೇಳಿಕೊಂಡಿದ್ದಾರೆ.

ಸೇನಾದ 37 ಬಂಡಾಯ ಶಾಸಕರು ಉಪ ಸ್ಪೀಕರ್‌ಗೆ ಪತ್ರ ಬರೆದು ವಿಧಾನ ಸಭೆಯಲ್ಲಿ ಏಕನಾಥ ಶಿಂದೆ ಅವರನ್ನು ಶಿವಸೇನಾ ನಾಯಕರನ್ನಾಗಿ ಪರಿಗಣಿಸುವಂತೆ ಮನವಿ ಮಾಡಿದ್ದಾರೆ. ಅಲ್ಲದೆ ಪಕ್ಷದ ಮುಖ್ಯ ಸಚೇತಕರನ್ನಾಗಿ ಸುನಿಲ್ ಪ್ರಭು ಅವರ ಸ್ಥಾನದಲ್ಲಿ ಭರತ್ ಗೋಗಾವಲೆ ಅವರನ್ನು ನೇಮಿಸುವಂತೆ ಕೋರಿದ್ದಾರೆ. ಸದನದಲ್ಲಿ ಸೇನಾ ನಾಯಕರಾಗಿ ಶಿಂದೆ ಬದಲು ಅಜಯ್ ಚೌಧರಿ ಅವರನ್ನು ನೇಮಿಸಿದ್ದಕ್ಕೆ ಉಪ ಸ್ಪೀಕರ್ ನರಹರಿ ಝಿರ್‌ವಾಲ್ ಮಾನ್ಯತೆ ನೀಡಿದ್ದಾರೆ ಎಂದು ಉದ್ಧವ್ ನೇತೃತ್ವದ ಶಿವಸೇನಾ ಈ ಮುಂಚೆ ಹೇಳಿತ್ತು.

ಪ್ರಮುಖ ವಿದ್ಯಮಾನ

- ಶಿವಸೇನಾ ಕೇಂದ್ರ ಕಚೇರಿ ಶಿವಸೇನಾ ಭವನ, ಮುಖ್ಯಮಂತ್ರಿ ಉದ್ಧವ್ ಅವರ ನಿವಾಸ 'ಮಾತೋಶ್ರೀ'ಗೆ ಭದ್ರತೆ ಹೆಚ್ಚಳ
- ಮುಂಬೈ ನಗರ ಪೊಲೀಸ್ ಆಯುಕ್ತ ಸಂಜಯ್ ಪಾಂಡೆ ಅವರು ಮುಖ್ಯಮಂತ್ರಿಯನ್ನು ಭೇಟಿಯಾಗಿ ಚರ್ಚಿಸಿದ್ದಾರೆ
- ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ ಅವರು ಸೇನಾ ಶಾಸಕರು ತಂಗಿರುವ ರ್ಯಾಡಿಸನ್ ಬ್ಲೂ ಹೋಟೆಲ್‌ಗೆ ಭೇಟಿ ಕೊಟ್ಟಿದ್ದಾರೆ. ಕಾನ್ರಾಡ್ ಅವರ ನ್ಯಾಷನಲ್ ಪೀಪಲ್ಸ್ ಪಾರ್ಟಿಯು ಎನ್‌ಡಿಎ ಭಾಗ. ಕಾನ್ರಾಡ್ ತಂದೆ ಪಿ.ಎ.ಸಂಗ್ಮಾ ಅವರು ಶರದ್ ಪವಾರ್ ಆಪ್ತರಾಗಿದ್ದರು
- ಎಂವಿಎಯನ್ನು ಉಳಿಸಿಕೊಳ್ಳುವ ಎಲ್ಲ ಯತ್ನ ಮಾಡಲಾಗುವುದು ಎಂದು ಎನ್‌ಸಿಪಿ ಹೇಳಿದೆ
- ಶಾಸಕರ ಜತೆಗೆ ಕೆಲವು ಸಂಸದರು ಕೂಡ ಶಿಂಧೆ ಅವರಿಗೆ ಬೆಂಬಲ ಸೂಚಿಸಿದ್ದಾರೆ ಎಂಬ ವರದಿಗಳಿವೆ

ಉದ್ಧವ್‌ಗೆ ಬರೆದ ಪತ್ರದಲ್ಲಿ ಶಿವಸೇನಾ ಶಾಸಕ ಸಂಜಯ್ ಶಿರಸಾಟ್ ವಿವರಣೆ

'ಅವಮಾನವೇ ಬಂಡಾಯಕ್ಕೆ ಕಾರಣ'

ಮುಂಬೈ/ನವದೆಹಲಿ (ಪಿಟಿಐ): 'ಕಳೆದ ಎರಡೂವರೆ ವರ್ಷಗಳಿಂದ ಶಾಸಕರು ಎದುರಿಸಿದ ಅವಮಾನವೇ, ಪಕ್ಷದ ನಾಯಕತ್ವದ ವಿರುದ್ಧ ಸಚಿವ ಏಕನಾಥ ಶಿಂದೆ ನೇತೃತ್ವದಲ್ಲಿ ಬಂಡಾಯವೇಳಲು ಕಾರಣ' ಎಂದು ಶಿವಸೇನಾದ ಬಂಡಾಯ ಶಾಸಕ ಸಂಜಯ್ ಶಿರಸಾಟ್ ಹೇಳಿದ್ದಾರೆ.

ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ಪತ್ರವೊಂದನ್ನು ಬರೆದಿರುವ ಅವರು, ತಮ್ಮ ಬಂಡಾಯಕ್ಕೆ ಕಾರಣಗಳೇನು ಎಂಬುದನ್ನು ವಿವರಿಸಿದ್ದಾರೆ. ಜೂನ್ 22ರಂದು ಬರೆದಿರುವ ಈ ಪತ್ರವನ್ನು ಅವರು ತಮ್ಮ ಟ್ವಿಟರ್ ಖಾತೆಯಲ್ಲೂ ಹಂಚಿಕೊಂಡಿದ್ದಾರೆ.

'ಎಲ್ಲ ಶಾಸಕರ ಹಕ್ಕುಗಳ ರಕ್ಷಣೆಗಾಗಿ ಬಂಡಾಯದ ಬಾವುಟ ಹಾರಿಸಬೇಕು ಎಂಬುದಾಗಿ ನಾವೇ ಶಿಂಧೆ ಅವರ ಮನವೊಲಿಸಿದೆವು' ಎಂದೂ ವಿವರಿಸಿದ್ದಾರೆ.

'ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಶಿವಸೇನಾ ಶಾಸಕರಿಗೆ ಅವಕಾಶವೇ ಸಿಗುತ್ತಿರಲಿಲ್ಲ. ಶಿವಸೇನಾದ ನಿಜವಾದ ವಿರೋಧಿಗಳಾಗಿರುವ ಕಾಂಗ್ರೆಸ್ ಮತ್ತು ಎನ್‌ಸಿಪಿ ಶಾಸಕರು ಮುಖ್ಯಮಂತ್ರಿಯನ್ನು ಸುಲಭವಾಗಿ ಭೇಟಿ ಮಾಡಬಹುದಿತ್ತು' ಎಂದು ಔರಂಗಾಬಾದ್ ಕ್ಷೇತ್ರವನ್ನು ಪ್ರತಿನಿಧಿಸುವ ಶಿರಸಾಟ್ ಅವರು ಹೇಳಿದ್ದಾರೆ.

'ನಮ್ಮದೇ ಪಕ್ಷದವರು ಮುಖ್ಯಮಂತ್ರಿಯಾಗಿದ್ದರೂ ನಮಗೆ ಸಿ.ಎಂ ಗೃಹ ಕಚೇರಿ 'ವರ್ಷಾ'ಕ್ಕೆ ಪ್ರವೇಶ ಸಿಗುತ್ತಿರಲಿಲ್ಲ. ಸಚಿವಾಲಯಕ್ಕೆ ಹೋಗುವ ಪ್ರಶ್ನೆಯೇ ಇರಲಿಲ್ಲ. ಯಾಕೆಂದರೆ, ಸಚಿವಾಲಯಕ್ಕೆ ಮುಖ್ಯಮಂತ್ರಿ ಬರುತ್ತಲೇ ಇರಲಿಲ್ಲ' ಎಂದು ವಿವರಿಸಿದ್ದಾರೆ.

'ಪಕ್ಷದ ಶಾಸಕರ ದೂರು-ದುಮ್ಮಾನಗಳನ್ನು ಹೇಳಿಕೊಳ್ಳಲು ಏಕನಾಥ ಶಿಂಧೆ ಅವಕಾಶ ಒದಗಿಸಿದರು. ನಮ್ಮ ಕ್ಷೇತ್ರಗಳಲ್ಲಿ ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಗಳು, ಅನುದಾನ ಬಿಡುಗಡೆಯಲ್ಲಿನ ಅಡ್ಡಿಗಳನ್ನು ನಿವಾರಿಸಿದರು ಹಾಗೂ ಮೈತ್ರಿಕೂಟದ ಅಂಗಪಕ್ಷಗಳಾದ ಕಾಂಗ್ರೆಸ್ ಮತ್ತು ಎನ್‌ಸಿಪಿಯಿಂದಾಗಿ ಎದುರಾದ ಸಮಸ್ಯೆಗಳನ್ನು ಶಿಂಧೆ ಆಲಿಸಿದರು' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಉದ್ಧವ್ ಠಾಕ್ರೆಯಲ್ಲಿ ವಿಶ್ವಾಸ ಇದೆ- ಕಾಂಗ್ರೆಸ್: ಮಹಾರಾಷ್ಟ್ರದಲ್ಲಿ ಆಡಳಿತಾರೂಢ ಮಹಾವಿಕಾಸ್ ಆಘಾಡಿಯಲ್ಲಿ (ಎಂವಿಎ) ಬಿಕ್ಕಟ್ಟು ಕಂಡುಬಂದಿರುವ ಬೆನ್ನಲ್ಲೇ, ಮೈತ್ರಿಕೂಟದ ಅಂಗಪಕ್ಷವಾದ ಕಾಂಗ್ರೆಸ್ ಎಚ್ಚರಿಕೆಯ ಹೆಜ್ಜೆಯಿಟ್ಟಿದೆ.

'ಶಿವಸೇನಾದ ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಆದರೆ, ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಲ್ಲಿ ಪಕ್ಷ ವಿಶ್ವಾಸ ಹೊಂದಿದೆ' ಎಂದು ಗುರುವಾರ ಹೇಳಿದೆ.

'ಎಂವಿಎ ನೇತೃತ್ವದ ಸರ್ಕಾರವನ್ನು ಉರುಳಿಸಬೇಕು ಎಂಬ ಬಿಜೆಪಿ ಯತ್ನ ಕೈಗೂಡುವುದಿಲ್ಲ. ನಮ್ಮ ನಿಲುವುಗಳನ್ನು ಶಿವಸೇನೆ ಮೇಲೆ ಹೇರಲ್ಲ' ಎಂದೂ ಕಾಂಗ್ರೆಸ್ ಮುಖಂಡರು ಹೇಳಿದ್ದಾರೆ.

ಕಿರುಕುಳ: ಕಾಂಗ್ರೆಸ್–ಎನ್‌ಸಿಪಿ ಮಧ್ಯೆ ಆರೋಪ ಪ್ರತ್ಯಾರೋಪ

ಮುಂಬೈ: ಆಡಳಿತಾರೂಢ ಮಹಾವಿಕಾಸ ಆಘಾಡಿ (ಎಂವಿಎ) ಆಂತರಿಕ ಬಿಕ್ಕಟ್ಟಿನಿಂದ ನಲುಗುತ್ತಿರುವ ನಡುವೆಯೇ, ಮೈತ್ರಿಕೂಟದ ಅಂಗಪಕ್ಷಗಳಾದ ಕಾಂಗ್ರೆಸ್ ಹಾಗೂ ಎನ್‌ಸಿಪಿ ಮುಖಂಡರ ನಡುವೆ ಆರೋಪ–ಪ್ರತ್ಯಾರೋಪಗಳು ಆರಂಭವಾಗಿವೆ.

ಕಾಂಗ್ರೆಸ್‌ನ ಮಹಾರಾಷ್ಟ್ರ ಘಟಕದ ಅಧ್ಯಕ್ಷ ನಾನಾ ಪಟೋಲೆ ಅವರು ಎನ್‌ಸಿಪಿಯ ಹಿರಿಯ ನಾಯಕ ಹಾಗೂ ಉಪಮುಖ್ಯಮಂತ್ರಿ ಅಜಿತ್ ಪವಾರ್ ಕಾರ್ಯವೈಖರಿಯನ್ನು ಗುರುವಾರ ಟೀಕಿಸಿದ್ದಾರೆ.

ಎನ್‌ಸಿಪಿ ವರಿಷ್ಠ ಶರದ್ ಪವಾರ್ ಅವರ ಸೋದರಳಿಯ ಅಜಿತ್ ಪವಾರ್, ಎಂವಿಎ ನೇತೃತ್ವದ ಸರ್ಕಾರದಲ್ಲಿ ಹಣಕಾಸು ಹಾಗೂ ಯೋಜನಾ ಖಾತೆ ಸಚಿವರಾಗಿದ್ದಾರೆ. 'ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ಅನುದಾನವನ್ನು ತಡೆಹಿಡಿಯುವ ಮೂಲಕ ಕಾಂಗ್ರೆಸ್ ಶಾಸಕರು ಹಾಗೂ ಸಚಿವರಿಗೆ ಅಜಿತ್ ಪವಾರ್ ಕಿರುಕುಳ ನೀಡುತ್ತಿದ್ದಾರೆ' ಎಂದು ಪಟೋಲೆ ಟೀಕಿಸಿದ್ದಾರೆ.

'ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಎನ್‌ಸಿಪಿ ಅನುದಾನ ನೀಡುತ್ತಿಲ್ಲ' ಎಂದು ಶಿವಸೇನಾದ ಬಂಡಾಯ ಶಾಸಕರು ಹೇಳಿಕೊಳ್ಳುತ್ತಿರುವುದನ್ನು ಪ್ರಸ್ತಾಪಿಸುವ ಮೂಲಕ ಪಟೋಲೆ ಈ ಟೀಕಾಪ್ರಹಾರ ನಡೆಸಿದ್ದಾರೆ.

ಈ ಟೀಕೆಗಳಿಗೆ ಪ್ರತಿಕ್ರಿಯಿಸಿರುವ ಅಜಿತ್ ಪವಾರ್, 'ನನ್ನ ಸ್ನೇಹಿತನ ಹೇಳಿಕೆ ಸತ್ಯಕ್ಕೆ ದೂರವಾದುದು. ಅವರು ಈ ರೀತಿ ಯಾಕೆ ಹೇಳಿದ್ದಾರೆ ಎಂದು ನನಗೆ ಗೊತ್ತಿಲ್ಲ' ಎಂದು ಹೇಳಿದ್ದಾರೆ.

'ಸರ್ಕಾರ ಅಸ್ತಿತ್ವಕ್ಕೆ ಬಂದ ಎರಡೂವರೆ ವರ್ಷಗಳ ಅವಧಿಯಲ್ಲಿ ನಿಯಮಿತವಾಗಿ 36 ಉಸ್ತುವಾರಿ ಸಚಿವರೊಂದಿಗೆ ಸಭೆ ನಡೆಸಿದ್ದೇನೆ. ಎಂದಿಗೂ ಪಕ್ಷಪಾತ ಮಾಡಿಲ್ಲ. ನನ್ನ ಕಾರ್ಯವೈಖರಿಯೂ ನಿಮಗೆ ಗೊತ್ತು. ಅಲ್ಲದೇ, ಕಾನೂನು ಪ್ರಕಾರ ಯಾವುದೇ ಅನುದಾನವನ್ನು ತಡೆಹಿಡಿಯಲು ಸಾಧ್ಯವಿಲ್ಲ' ಎಂದೂ ಪ್ರತಿಕ್ರಿಯಿಸಿದ್ದಾರೆ.

ಮುಖ್ಯಾಂಶಗಳು

- ಬಂಡಾಯ ಶಾಸಕರ ವಾಸ್ತವ್ಯದ ಹೋಟೆಲ್ ಬಳಿ ಟಿಎಂಸಿ ಪ್ರತಿಭಟನೆ
- ವಿಧಾನಸಭೆಯಲ್ಲಿ ಅಜಯ್ ಚೌಧರಿ ಶಿವಸೇನಾ ಗುಂಪಿನ ನಾಯಕ
- ಮೈತ್ರಿಕೂಟದಿಂದ ಬಹುಮತ ಸಾಬೀತು: ಪವಾರ್ ವಿಶ್ವಾಸ



ವಿದ್ಯಾರ್ಥಿಗಳ ವಾಪಸಾತಿಗೆ ಮಾತುಕತೆ

ಬೀಜಿಂಗ್ (ಪಿಟಿಐ): ಕೋವಿಡ್‌ನಿಂದಾಗಿ ಎರಡು ವರ್ಷಗಳಿಂದ ಮನೆಯಲ್ಲಿಯೇ ಇರುವ ಸಾವಿರಾರು ಭಾರತೀಯ ವಿದ್ಯಾರ್ಥಿಗಳು ಚೀನಾಗೆ ಮರಳುವ ಮತ್ತು ರದ್ದುಪಡಿಸಲಾಗಿದ್ದ ನೇರ ವಿಮಾನಗಳ ಪುನರಾರಂಭದ ಕುರಿತು ಭಾರತ ಮತ್ತು ಚೀನಾ ಚರ್ಚಿಸಿವೆ ಎಂದು ಬೀಜಿಂಗ್‌ನ ಭಾರತೀಯ ರಾಯಭಾರ ಕಚೇರಿ ಗುರುವಾರ ತಿಳಿಸಿದೆ.

ಚೀನಾದ ಭಾರತೀಯ ರಾಯಭಾರಿ ಪ್ರದೀಪ್ ಕುಮಾರ್ ರಾವತ್ ಮತ್ತು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ನಡುವೆ ನಡೆದ ಸಭೆಯಲ್ಲಿ ವಿದ್ಯಾರ್ಥಿಗಳ ವಾಪಸಾತಿ ವಿಷಯ ಪ್ರಸ್ತಾಪವಾಗಿದೆ.

'ರಾಯಭಾರಿ ರಾವತ್ ಅವರು ವಿದ್ಯಾರ್ಥಿಗಳ ಮರಳುವಿಕೆ ಕುರಿತು ಶೀಘ್ರದಲ್ಲೇ ಪ್ರಗತಿಯನ್ನು ನೋಡಬಹುದು' ಎಂದು ಹೇಳಿದರು.

ಸುದ್ದಿ 2 ನಿಮಿಷ

ಜಿಸ್ಯಾಟ್–24 ಉಪಗ್ರಹ ಉಡಾವಣೆ ಯಶಸ್ವಿ

ಬೆಂಗಳೂರು: 'ಅತ್ಯಾಧುನಿಕ ಜಿಸ್ಯಾಟ್–24 ಉಪಗ್ರಹವನ್ನು ದಕ್ಷಿಣ ಅಮೆರಿಕದ ಫ್ರೆಂಚ್ ಗಯಾನಾದಿಂದ ಗುರುವಾರ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು' ಎಂದು ಇಸ್ರೊ ತಿಳಿಸಿದೆ.

ಇಸ್ರೊ ನಿರ್ಮಿತ ಈ ಉಪಗ್ರಹವನ್ನು ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ (ಎನ್‌ಎಸ್‌ಐಎಲ್) ಉಡಾವಣೆ ಮಾಡಿದೆ. ಕೇಂದ್ರ ಸರ್ಕಾರ ಬಾಹ್ಯಾಕಾಶ ಕ್ಷೇತ್ರದಲ್ಲಿ ತಂದಿರುವ ಸುಧಾರಣೆಗಳ ನಂತರ ಉಡಾವಣೆ ಮಾಡಲಾದ ಮೊದಲ ಸಂವಹನ ಉಪಗ್ರಹ ಇದು.

'ಈ ಉಪಗ್ರಹವನ್ನು ಡಿಟಿಎಚ್ ಸೇವೆ ನೀಡುವ ಟಾಟಾ ಪ್ಲೇ ಕಂಪನಿಗೆ ಲೀಸ್ ನೀಡಲಾಗಿದೆ. 24-ಕೆಯು ಬ್ಯಾಂಡ್ ಸಂವಹನ ಉಪಗ್ರಹವಾಗಿರುವ ಜಿಸ್ಯಾಟ್–24ನ ಒಟ್ಟು ತೂಕ 4,180 ಕೆ.ಜಿ' ಎಂದು ಇಸ್ರೊ ತಿಳಿಸಿದೆ.

'ಇಸ್ರೊದ ಅಂಗಸಂಸ್ಥೆಯಾದ ಎನ್‌ಎಸ್‌ಐಎಲ್‌ಗೆ ಇಂದು ಮಹತ್ವದ ದಿನ. ಡಿಟಿಎಚ್ ಸೇವೆ ನೀಡುವಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ' ಎಂದು ಇಸ್ರೊ ಮುಖ್ಯಸ್ಥ ಡಾ.ಎಸ್. ಸೋಮನಾಥ್ ಹೇಳಿದ್ದಾರೆ.

2019ರಲ್ಲಿ ಎನ್‌ಎಸ್‌ಐಎಲ್ ಸ್ಥಾಪಿಸಲಾಗಿದೆ. ಸಂಸ್ಥೆಯು ಉಪಗ್ರಹಗಳ ನಿರ್ಮಾಣ, ಉಡಾವಣೆ ಹಾಗೂ ಅವುಗಳ ನಿರ್ವಹಣೆ ಮಾಡುತ್ತದೆ.

'ನೀಟ್' ದಿನಾಂಕ ಮುಂದೂಡಲು ವಿದ್ಯಾರ್ಥಿಗಳ ಆಗ್ರಹ

ನವದೆಹಲಿ (ಪಿಟಿಐ): ವೈದ್ಯಕೀಯ ಶಿಕ್ಷಣ ಪ್ರವೇಶಕ್ಕೆ ಜುಲೈ 17ರಂದು ನಿಗದಿಯಾಗಿರುವ 'ನೀಟ್' ಪರೀಕ್ಷೆಯನ್ನು ಮುಂದೂಡುವಂತೆ ಸಾವಿರಾರು ಆಕಾಂಕ್ಷಿ ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ವಿಶ್ವವಿದ್ಯಾಲಯಗಳ ಪ್ರವೇಶಕ್ಕೆ ನಡೆಯುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಯುಸಿಇಟಿ–ಯುಜಿ) ಜುಲೈ 15ರಿಂದ ಆಗಸ್ಟ್ 20ರವರೆಗೆ ನಡೆಯಲಿದೆ. 'ನೀಟ್' ಪರೀಕ್ಷಾ ದಿನದ ಸಮೀಪವೇ ಜೆಇಇ ಪರೀಕ್ಷೆ ಕೂಡ ನಿಗದಿಯಾಗಿದೆ. ಹೀಗಾಗಿ ಪರೀಕ್ಷಾ ತಯಾರಿಗೆ ಸಮಯಾವಕಾಶವೇ ದೊರೆಯುವುದಿಲ್ಲ. ಆದ್ದರಿಂದ ನೀಟ್ ಪರೀಕ್ಷೆಯನ್ನು ಮುಂದೂಡಿ ಎಂದು ವಿದ್ಯಾರ್ಥಿಗಳು ಆನ್‌ಲೈನ್ ಅಭಿಯಾನ ಹಮ್ಮಿಕೊಂಡಿದ್ದಾರೆ.

ಪರೀಕ್ಷೆ ಮುಂದೂಡುವಂತೆ ಆಗ್ರಹಿಸಿ 24 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಹಿ ಮಾಡಿರುವ ಅರ್ಜಿಗೆ ಟ್ವಿಟರ್‌ನಲ್ಲಿ ವ್ಯಾಪಕ ಪ್ರತಿಕ್ರಿಯೆ ವ್ಯಕ್ತವಾಗಿದೆ.

ವಿಶ್ವಬ್ಯಾಂಕ್‌ನಿಂದ ₹ 1,917 ಕೋಟಿ ಸಾಲ

ನವದೆಹಲಿ: ಭಾರತೀಯ ರೈಲ್ವೆಯ ಸರಕು ಸಾಗಣೆ ಮತ್ತು ಲಾಜಿಸ್ಟಿಕ್ಸ್ ಮೌಲಸೌಕರ್ಯ ಆಧುನೀಕರಿಸಲು ವಿಶ್ವಬ್ಯಾಂಕ್ ₹ 1,917 ಕೋಟಿ (245 ಮಿಲಿಯನ್ ಡಾಲರ್) ಸಾಲವನ್ನು ಅನುಮೋದಿಸಿದೆ.

ರೈಲ್ವೆ ಲಾಜಿಸ್ಟಿಕ್ಸ್ ಯೋಜನೆಯು ಭಾರತದಲ್ಲಿ ರಸ್ತೆಯ ಮೇಲಿನ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶ ಹೊಂದಿದೆ. ಸರಕು ಸಾಗಣೆ ಮತ್ತು ಪ್ರಯಾಣಿಕರಿಗೆ ಹೆಚ್ಚು ಪರಿಣಾಮಕಾರಿ ಸೇವೆ ಒದಗಿಸುವ ಮೂಲಕ ಪ್ರತಿ ವರ್ಷ ಲಕ್ಷಾಂತರ ಟನ್ ಹಸಿರು ಮನೆ ಅನಿಲ ಹೊರಸೂಸುವಿಕೆಯನ್ನು (ಜಿಎಚ್‌ಜಿ) ಕಡಿಮೆ ಮಾಡುತ್ತದೆ. ಈ ಯೋಜನೆಯು ರೈಲ್ವೆ ವಲಯದಲ್ಲಿ ಹೆಚ್ಚಿನ ಖಾಸಗಿ ವಲಯದ ಹೂಡಿಕೆಯನ್ನೂ ಉತ್ತೇಜಿಸುತ್ತದೆ ಎಂದು ವಿಶ್ವಬ್ಯಾಂಕ್ ಪ್ರಕಟಣೆ ತಿಳಿಸಿದೆ.

ಅಂತರರಾಷ್ಟ್ರೀಯ ಪುನರ್ ನಿರ್ಮಾಣ ಮತ್ತು ಅಭಿವೃದ್ಧಿ ಬ್ಯಾಂಕ್‌ನಿಂದ ದೊರೆಯುವ ₹ 1,917 ಕೋಟಿ ಸಾಲದ ಮರುಪಾವತಿ ಅವಧಿ 22 ವರ್ಷಗಳಾಗಿವೆ.

ಕರ್ನಾಟಕ ಸರ್ಕಾರ
ತಾಲ್ಲೂಕು ಪಂಚಾಯತ್ ಕುಷ್ಟಗಿ (ತಾ)
ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಕುಷ್ಟಗಿ
No:ICDS Kushtagi/Food/Tran/Tend/2022-23 Date: 17.06.2022
ಮರು ಟೆಂಡರ್ ಪ್ರಕಟಣೆ

ವಿಷಯ: ಶಿಶು ಅಭಿವೃದ್ಧಿ ಯೋಜನೆಯ ಕುಷ್ಟಗಿ ಇಲ್ಲಿನ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿಯಲ್ಲಿ 2022–23ನೇ ಸಾಲಿಗೆ ಕುಷ್ಟಗಿ ತಾಲ್ಲೂಕಿನ 392 ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಗಣಿಕೆ ಮಾಡಲು ಮತ್ತು ಎಫ್.ಸಿ.ಐ, ಕೊಪ್ಪಳ ಇವರಿಂದ ಪಡಿತರ ಅಕ್ಕಿ/ಗೋಧಿ ಎತ್ತುವಳಿ ಮಾಡಲು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಆಹಾರ ಸಾಗಾಣಿಕೆ ಗುತ್ತಿಗೆದಾರರನ್ನು ನೇಮಕ ಮಾಡುವ ಬಗ್ಗೆ.
ಉಲ್ಲೇಖ:–1) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಕುಷ್ಟಗಿ ಇವರ ಅನುಮೋದನೆ ದಿನಾಂಕ: 17.05.2022
ಮೇಲ್ಕಂಡ ಉಲ್ಲೇಖ (1) ರನ್ವಯ 2022–23ನೇ ಸಾಲಿನಲ್ಲಿ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಶಿಶು ಅಭಿವೃದ್ಧಿ ಯೋಜನೆ ಕುಷ್ಟಗಿ ಇಲ್ಲಿನ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿ ಎಂ.ಎಸ್.ಪಿ.ಸಿ ಘಟಕದ ಉಗ್ರಾಣದಿಂದ ಕುಷ್ಟಗಿ ತಾಲ್ಲೂಕಿನ 392 ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ಸಾಗಾಣಿಕೆ ಮಾಡಲು ಮತ್ತು ಭಾರತೀಯ ಆಹಾರ ನಿಗಮ ಕೊಪ್ಪಳ ಗೋದಾಮಿನಿಂದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಕುಷ್ಟಗಿ ಗೋದಾಮಿಗೆ ಪಡಿತರ ಆಹಾರ ಸಾಮಾಗ್ರಿಗಳ ಸಾಗಾಣಿಕೆ ಮಾಡಲು ಸಾಗಾಣಿಕೆ ಗುತ್ತಿಗೆದಾರರನ್ನು ನೇಮಕ ಮಾಡುವ ಸಲುವಾಗಿ ಕುಷ್ಟಗಿ ತಾಲ್ಲೂಕಿನ ವ್ಯಾಪ್ತಿಗೊಳಪಟ್ಟ ನೊಂದಾಯಿಸಿದ ಮಹಿಳಾ ಮಂಡಳಿ ಮತ್ತು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು, ಗ್ರಾಮ ಸಮುದಾಯಗಳಿಂದ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆಯಲ್ಲಿ ಟೆಂಡರ್ ಕರೆಯಲಾಗಿದೆ.
ಸಾಗಾಣಿಕೆ ವಿವರ (ಪ್ರತ್ಯೇಕವಾಗಿ ಧರಗಳನ್ನು ನಮೂದಿಸುವುದು)
01. *ಕುಷ್ಟಗಿ:* ಇಂದ: ಎಂ.ಎಸ್.ಪಿ.ಸಿ/ಕಛೇರಿ ಉಗ್ರಾಣ ಕುಷ್ಟಗಿ. ಇವರಿಗೆ: *ಕುಷ್ಟಗಿ ತಾಲ್ಲೂಕಿನಲ್ಲಿರುವ ಗ್ರಾಮಗಳಲ್ಲಿನ 392 ಅಂಗನವಾಡಿ ಕೇಂದ್ರಗಳಿಗೆ.* 02 *ಕುಷ್ಟಗಿ:* ಇಂದ: ಭಾರತೀಯ ಆಹಾರ ನಿಗಮ, ಕೊಪ್ಪಳ ಗೋದಾಮಿನಿಂದ ಪಡಿತರ ಧಾನ್ಯ ಸಾಗಾಣಿಕೆ. ಇವರಿಗೆ: *ಪಡಿತರ ಸಾಮಾಗ್ರಿಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ/ ಎಂ.ಎಸ್.ಪಿ.ಸಿ ಉಗ್ರಾಣ.* 03 *ಕುಷ್ಟಗಿ:* ಇಂದ: ಸಿ.ಡಿ.ಪಿ.ಓ ಗೋದಾಮಿನಿಂದ. ಇವರಿಗೆ: *ಎಂ.ಎಸ್.ಪಿ.ಟಿ.ಸಿ ಘಟಕದ ಗೋದಾಮಿಗೆ ಸಾಗಾಣಿಕೆ*
2. ಸಲ್ಲಿಸುವ ವಿಧಾನ ಟೆಂಡರ್ ಸಲ್ಲಿಸಲು ಇಚ್ಛೆಯುಳ್ಳವರು ಅರ್ಜಿ ಫಾರಂಗಳನ್ನು ದಿನಾಂಕ:**20.06.2022** ರಿಂದ *ದಿನಾಂಕ: 29.06.2022* ರವರೆಗೆ e–ಪ್ರಕ್ಯೂರ್ ಮೆಂಟ್ ಪೋರ್ಟಲ್ www.eproc. Karnataka. gov.in ಮುಖಾಂತರ CDPO/RT/AWC/FS/KST/2022–23 ಟೆಂಡರ್ ಸಂಖ್ಯೆಯ ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಳ್ಳತಕ್ಕದ್ದು.
ಭರ್ತಿ ಮಾಡಿದ ಅರ್ಜಿ ಫಾರಂಗಳನ್ನು e–ಪ್ರಕ್ಯೂರ್‌ಮೆಂಟ್ ಮೂಲಕವೇ *ದಿನಾಂಕ:29.06.2022* ಮಧ್ಯಾಹ್ನ 05.00 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.
ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಕುಷ್ಟಗಿ, ಜಿಲ್ಲಾ ಕೊಪ್ಪಳ
ಡಿಐಪಿಆರ್/ಕೊಪ್ಪಳ/168/ಎಂಸಿಎ/2022–23

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸ.ನೀ. ಮತ್ತು ಅಂ.ಅ ವಿಭಾಗ, ಮಂಡ್ಯ
ಸಂಖ್ಯೆ:ಕಾಸವಿ/ಮಂ/ತಾಂತ್ರಿಕ/ಶಾಖೆ/ಪ್ರಕಟಣೆ/22–23/503 ದಿ:17.06.2022
ಟೆಂಡರ್ ಅಧಿಸೂಚನೆ ಸಂಖ್ಯೆ : 03/ 2022–23 ದಿನಾಂಕ :17.06.2022.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ–571401 ಇವರು ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು–5 ರ ಪ್ರಕಾರ "ಇ" – ಪ್ರಕ್ಯೂರ್‌ಮೆಂಟ್‌ನಲ್ಲಿ ಐಟಂವಾರು ಟೆಂಡರ್ ಅನ್ನು ಅಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ 4702– ಏತ ನೀರಾವರಿ ಯೋಜನೆಯಡಿಯಲ್ಲಿ ಟರ್ನ್ ಕೀ ಆಧಾರದ ಮೇಲೆ ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕು ಐಚನಹಳ್ಳಿ ಹಾಗೂ **ಇತರೆ 50 ಕೆರೆಗಳಿಗೆ** ಏತ ನೀರಾವರಿ ಯೋಜನೆ ಮೂಲಕ ನೀರು ತುಂಬಿಸುವ ಉಳಿಕೆ ಕಾಮಗಾರಿಯ ಟೆಂಡರಿಗಿಟ್ಟ ಮೊತ್ತ **ರೂ. 10424.79 ಲಕ್ಷಗಳಾಗಿರುತ್ತದೆ**. ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಈ ಕಛೇರಿ ವೇಳೆಯಲ್ಲಿ ದಿನಾಂಕ : 14.07.2022 ರವರಗೆ ಪಡೆಯಬಹುದಾಗಿದೆ. **ದಿನಾಂಕ: 18.07.2022ರ 17.00** ಗಂಟೆವರೆಗೆ ಟೆಂಡರ್‌ನ ನಿಗದಿತ ನಮೂನೆಗಳನ್ನು **"www.eproc.karnataka.gov.in"** ನಲ್ಲಿ ಅವಶ್ಯ ಮಾಹಿತಿಗಳೊಂದಿಗೆ ಕೆಳಕಂಡ ಕಾಲಂಗಳನ್ವಯ ಬಿಡ್ಡ್‌ನ್ನು ಅಪ್ ಲೋಡ್ ಮಾಡಬಹುದಾಗಿದೆ. ಈ ಟೆಂಡರ್‌ನ ತಾಂತ್ರಿಕ ಬಿಡ್ಡ್‌ನ್ನು **ದಿನಾಂಕ : 20.07.2022 ರಂದು ಬೆಳಿಗ್ಗೆ : 11–00 ಗಂಟೆಗೆ** ತೆರೆಯಲಾಗುವುದು. ಈ ಟೆಂಡರ್‌ನ ಆರ್ಥಿಕ ಬಿಡ್ಡ್‌ನ್ನು **ದಿನಾಂಕ : 22.07.2022 ರಂದು ಬೆಳಿಗ್ಗೆ : 11–00 ಗಂಟೆಗೆ** ತೆರೆಯಲಾಗುವುದು. ಟೆಂಡರ್ ದಾಖಲಾತಿಗಳನ್ನು ವೆಬ್ ಸೈಟ್ **"www.eproc.karnataka.gov.in"**ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು. **ವಿ.ಸೂ :** ಸದರಿ ಟೆಂಡರ್‌ನ ಕಾಮಗಾರಿಯನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ ಇವರಿಗೆ ಕಾಯ್ದಿರಿಸಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು "ಇ" – ಪ್ರಕಟಣೆಯಲ್ಲಿಯೇ ಪ್ರಕಟಿಸಲಾಗುವುದು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/–ಕಾರ್ಯಪಾಲಕ ಇಂಜಿನಿಯರ್,
ಸ.ನೀ.ಮತ್ತು ಅಂ.ಅ.ವಿಭಾಗ, ಮಂಡ್ಯ
ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/ 127/20222–23

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, (ಜಿಲ್ಲಾ ನಗರಾಭಿವೃದ್ಧಿ ಕೋಶ), ಕೊಠಡಿ ಸಂ : 123, ಜಿಲ್ಲಾಡಳಿತ ಭವನ, ಗದಗ–582101 Ph & Fax : 08372-231877, Email : dudc_gdg@yahoo.co.in
ಸಂಖ್ಯೆ : ಜಿನಕೋ/ಅಭಿವೃದ್ಧಿ/ಅಮೃತ್ ನಗರೋತ್ಥಾನ ಹಂತ–4/ವಹಿ–25/2021–22 ದಿನಾಂಕ : 21–06–2022
ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು ಜಿಲ್ಲಾನಗರಾಭಿವೃದ್ಧಿ ಕೋಶ ಜಿಲ್ಲಾಧಿಕಾರಿಗಳ ಕಾರ್ಯಾಲಯ ಗದಗ ಜಿಲ್ಲೆ ಗದಗ ಇವರು ಎರಡು ಲಕೋಟೆ ಪದ್ಧತಿಯಲ್ಲಿ ಕೆ.ಡಬ್ಲ್ಯು–4 ಟೆಂಡರ್ ದಸ್ತಾವೇಜಿನಲ್ಲಿ ಗದಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅಮೃತ ನಗರೋತ್ಥಾನ ಮುನ್ಸಿಪಾಲಿಟಿ ಹಂತ–4ರ ಯೋಜನೆಯಡಿ ರಸ್ತೆ & ಚರಂಡಿ ಕಾಮಗಾರಿಗಳ ಪ್ಯಾಕೇಜ್‌ವಾರು ಅರ್ಹ ದರ್ಜೆಯ ಗುತ್ತಿಗೆದಾರಿಂದ ಕೆಟಿಪಿಪಿ ಅಧಿನಿಯಮ 1999 ನಿಯಮ 2000ರನ್ವಯ ಟೆಂಡರ್ ಆಹ್ವಾನಿಸಿದ್ದು ಸದರ ವಿವರ ಈ ಕೆಳಗಿನಂತೆ ಇರುತ್ತದೆ.

Sl. No.	Description of work	Amount Put to Tender	EMD
1	Road and Drain Improvement Works in Town Municipal Council **NARAGUND** Limits of GADAG DISTRICT under Amuruth Mukhya Mantri Nagarothana Municipality Phase-4 Project.E-Proc Indent No. **DMA/2022-23/OW/WORK_INDENT 132607**	**382.98**	**5.74**
2	Road and Drain Improvement Works in Town Panchayat Council **NAREGAL** Limits of GADAG DISTRICT under Amuruth Mukhya Mantri Nagarothana Municipality Phase-4 Project. e-Proc Indent No **DMA/2022-23/OW/WORK_INDENT132546**	**282.07**	**4.23**
3	Road and Drain Improvement Works in Town Panchayat Council **SHIRAHATTI** Limits of GADAG DISTRICT under Amuruth Mukhya Mantri Nagarothana Municipality Phase-4 Project. e-Proc Indent No. **DMA/2022-23/RD/WORK_INDENT132464**	**170.71**	**2.56**
4	Development of Road and Drains in **MULGUND** Town Limits of GADAG DISTRICT under Amuruth Mukhya Mantri Nagarothana Municipality Phase-4 Project. e-Proc Indent No. **DMA/2022-23/OW/WORK_INDENT132487**	**256.80**	**3.85**

ಬಿಡ್ಡದಾರರು/ತಯಾರಕರು ಟೆಂಡರ್ ವಿವರಗಳನ್ನು e-Procurement portal ರಲ್ಲಿ ಪಡೆದು, ಸಂಬಂದಿಸಿದ ಇಎಂಡಿ ಟೆಂಡರ್ ಫೀ ಗಳನ್ನು electronic ಪದ್ಧತಿಯಲ್ಲಿ ತುಂಬಿ ಈ ಕೆಳಗೆ ನಿಗಧಿ ಪಡಿಸಿದ ದಿನಾಂಕಗಳನ್ನು ಟೆಂಡರ್ **www.eproc.karnataka.gov.in**. ಸಲ್ಲಿಸಬಹುದಾಗಿದೆ.
(1) ಟೆಂಡರ್ ಸಲ್ಲಿಸಲು ಕೊನೆ ದಿನಾಂಕ : **22.07.2022** upto 17.00 hrs.
(2) ಟೆಂಡರ್ ತೆರೆಯುವ ದಿನಾಂಕ : (Technical Bids) **25.07.2022** at 11.00 hrs.
ಸದರಿ ಟೆಂಡರ್‌ಗೆ ಸಂಬಂದಿಸಿದಂತೆ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ e-Procurement portal ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/– ಕಾರ್ಯಪಾಲಕ ಅಭಿಯಂತರರು
ಜಿಲ್ಲಾನಗರಾಭಿವೃದ್ಧಿ ಕೋಶ ಗದಗ
ವಾಸಾಸಂಇ/ಗದಗ/ಎಂ.ಸಿ.ಎ/127/2022–23

ರಾಷ್ಟ್ರಪತಿ ಚುನಾವಣೆ: ಎನ್‌ಡಿಎ ಅಭ್ಯರ್ಥಿ ಇಂದು ನಾಮಪತ್ರ ಸಲ್ಲಿಕೆ ಸಾಧ್ಯತೆ

ಮೋದಿ, ಶಾ ಭೇಟಿಯಾದ ದ್ರೌಪದಿ ಮುರ್ಮು

ನವದೆಹಲಿ (ಪಿಟಿಐ): ರಾಷ್ಟ್ರಪತಿ ಸ್ಥಾನದ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರು ಗುರುವಾರ ಒಡಿಶಾದ ಭುವನೇಶ್ವರದಿಂದ ರಾಜಧಾನಿಗೆ ಆಗಮಿಸಿದ್ದು, ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಚರ್ಚಿಸಿದರು.

'ಮುರ್ಮು ಅವರ ಆಯ್ಕೆಗೆ ಸಮಾಜದ ಎಲ್ಲ ಸ್ತರಗಳಿಂದ, ದೇಶದಾದ್ಯಂತ ಶ್ಲಾಘನೆ ವ್ಯಕ್ತವಾಗಿದೆ. ಕೆಳಹಂತದ ಸಮಸ್ಯೆಗಳ ಬಗ್ಗೆ ಅವರಿಗೆ ಇರುವ ಅರಿವು, ದೇಶದ ಪ್ರಗತಿ ಕುರಿತು ಅವರ ದೂರದೃಷ್ಟಿ ಶ್ಲಾಘನಾರ್ಹ' ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

ಪ್ರಮುಖ ಮುಖಂಡರ ಉಪಸ್ಥಿತಿಯಲ್ಲಿ ಅವರು ಶುಕ್ರವಾರ ನಾಮಪತ್ರ ಸಲ್ಲಿಸುವ ಸಂಭವವಿದೆ. ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರ ನಿವಾಸದಲ್ಲಿ ನಾಮಪತ್ರವನ್ನು ಸಿದ್ಧಪಡಿಸಲಾಗುತ್ತಿದೆ. ಪ್ರಧಾನಿ ಮೋದಿ, ಹಿರಿಯ ಸಚಿವರಾದ ರಾಜನಾಥ ಸಿಂಗ್, ಅಮಿತ್ ಶಾ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಸೇರಿದಂತೆ ಪ್ರಮುಖರು ಮುರ್ಮು ಅವರ ಹೆಸರು ಸೂಚಿಸಲಿದ್ದಾರೆ.

ಉಳಿದಂತೆ ಮುರ್ಮು ಹೆಸರು ಅನುಮೋದಿಸಲಿರುವ ಕೇಂದ್ರದ ಸಚಿವರುಗಳು, ಹಿರಿಯ ಬಿಜೆಪಿ ನಾಯಕರು ಹಾಗೂ ಇವರಿಗೆ ಬೆಂಬಲ ಘೋಷಿಸಿರುವ ಬಿಜೆಡಿಯ ಸಸ್ಮಿತ್ ಪಾತ್ರಾ ಸೇರಿದಂತೆ ಹಲವು ಮುಖಂಡರು ಜೋಶಿ ಅವರ ನಿವಾಸದಲ್ಲಿ ಸೇರಿದ್ದರು.

ದೆಹಲಿಗೆ ತೆರಳುವ ಮುನ್ನ ನೀಡಿದ ಹೇಳಿಕೆಯಲ್ಲಿ ಮುರ್ಮು ಅವರು, 'ಎಲ್ಲರಿಗೂ ಕೃತಜ್ಞತೆಗಳು. ರಾಷ್ಟ್ರಪತಿ ಚುನಾವಣೆಯಲ್ಲಿ ಎಲ್ಲರಿಂದಲೂ ಸಹಕಾರ ಕೋರುತ್ತೇನೆ. ಚುನಾವಣೆಗೆ ಮುನ್ನ ಮತದಾರರನ್ನು ಭೇಟಿಯಾಗಿ ಬೆಂಬಲ ಕೋರುತ್ತೇನೆ' ಎಂದಿದ್ದಾರೆ.

ವೈಎಸ್‌ಆರ್ ಬೆಂಬಲ (ಅಮರಾವತಿ ವರದಿ): ರಾಷ್ಟ್ರಪತಿ ಸ್ಥಾನದ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರನ್ನು ಬೆಂಬಲಿಸುವುದಾಗಿ ವೈಎಸ್‌ಆರ್ ಕಾಂಗ್ರೆಸ್ ಗುರುವಾರ ಘೋಷಿಸಿದೆ.

ವೈಎಸ್‌ಆರ್‌ಸಿ ಲೋಕಸಭೆಯಲ್ಲಿ 22, ರಾಜ್ಯಸಭೆಯಲ್ಲಿ 9 ಹಾಗೂ ಆಂಧ್ರದ ವಿಧಾನಸಭೆಯಲ್ಲಿ 151 ಸದಸ್ಯರನ್ನು ಹೊಂದಿದೆ.

ರಾಷ್ಟ್ರಪತಿ ಸ್ಥಾನದ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರು ಗುರುವಾರ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾದರು –ಪಿಟಿಐ ಚಿತ್ರ

'ದ್ರೌಪದಿ ಮುರ್ಮು ಅವಿರೋಧ ಆಯ್ಕೆಯಾಗಲಿ'

ನವದೆಹಲಿ(ಪಿಟಿಐ): ರಾಷ್ಟ್ರಪತಿ ಚುನಾವಣೆ ಹಿನ್ನೆಲೆಯಲ್ಲಿ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಅಭ್ಯರ್ಥಿಯನ್ನಾಗಿ ಮಾಡಿದ ಬಿಜೆಪಿ ನೇತೃತ್ವದ ಎನ್‌ಡಿಎ ನಿರ್ಧಾರವನ್ನು ಆರ್‌ಎಸ್‌ಎಸ್ ಅಂಗಸಂಸ್ಥೆ ಅಖಿಲ ಭಾರತೀಯ ವನವಾಸಿ ಕಲ್ಯಾಣ ಆಶ್ರಮವು ಸ್ವಾಗತಿಸಿದೆ. ಅಲ್ಲದೆ, ಮುರ್ಮು ಅವರನ್ನು ಒಮ್ಮತದಿಂದ ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆ ಮಾಡುವ ಮೂಲಕ ಬುಡಕಟ್ಟು ಸಮುದಾಯದ ಸರ್ವಾಂಗೀಣ ಅಭಿವೃದ್ಧಿ ಪರ ಬದ್ಧತೆಯನ್ನು ಪ್ರದರ್ಶಿಸಬೇಕು ಎಂದು ಎಲ್ಲಾ ರಾಜಕೀಯ ಪಕ್ಷಗಳಿಗೆ ಅಖಿಲ ಭಾರತೀಯ ವನವಾಸಿ ಕಲ್ಯಾಣ ಆಶ್ರಮ ಮನವಿ ಮಾಡಿದೆ.

ಈ ಸಂಬಂಧ ಗುರುವಾರ ಹಿಂದಿಯಲ್ಲಿ ಹೇಳಿಕೆ ಬಿಡುಗಡೆ ಮಾಡಿದ ಆರ್‌ಎಸ್‌ಎಸ್ ಅಂಗಸಂಸ್ಥೆಯು, ಭಾರತದ ಸಾಂಪ್ರದಾಯಿಕ ಮತ್ತು ಸಂಸ್ಕೃತಿಯ ಭಾಗವಾಗಿರುವ ಹೊರತಾಗಿಯೂ, ಬುಡಕಟ್ಟು ಸಮಾಜವು ಹಲವು ವರ್ಷಗಳ ಕಾಲ ನಿರ್ಲಕ್ಷ್ಯಕ್ಕೆ ಒಳಗಾಗಬೇಕಾಗಿತ್ತು. ಇದೀಗ ಮುರ್ಮು ಅವರನ್ನು ಎನ್‌ಡಿಎನ ರಾಷ್ಟ್ರಪತಿ ಅಭ್ಯರ್ಥಿಯಾಗಿಸಿರುವುದು ಸಾಮಾಜಿಕ ಬದಲಾವಣೆ ತರುವ ಕ್ರಮವಾಗಿದೆ ಎಂದು ಹೇಳಿದೆ. ಭಾರತದಲ್ಲಿ 12 ಕೋಟಿ ಬುಡಕಟ್ಟು ಜನರಿದ್ದಾರೆ.

ಬುಡಕಟ್ಟು ಜನರಿಗೆ ದ್ರೌಪದಿ ಕೊಡುಗೆ ಏನು: ಸಿನ್ಹಾ ಪ್ರಶ್ನೆ

ನವದೆಹಲಿ (ಪಿಟಿಐ): 'ವಾಜಪೇಯಿ ಅವರ ಬಿಜೆಪಿಯ ಆಡಳಿತದಲ್ಲಿ ಬುಡಕಟ್ಟು ಜನಾಂಗದವರಿಗಾಗಿ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರಿಗಿಂತಲೂ ನಾನು ಹೆಚ್ಚಿನ ಕೆಲಸ ಮಾಡಿದ್ದೇನೆ. ಈ ದಾಖಲೆಯ ಬಗ್ಗೆ ನನಗೆ ಹೆಮ್ಮೆ ಇದೆ' ಎಂದು ರಾಷ್ಟ್ರಪತಿ ಚುನಾವಣೆಯ ಪ್ರತಿಪಕ್ಷಗಳ ಅಭ್ಯರ್ಥಿ ಯಶವಂತ್ ಸಿನ್ಹಾ ಗುರುವಾರ ಹೇಳಿದ್ದಾರೆ.

ಜಾರ್ಖಂಡ್ ರಾಜ್ಯಪಾಲೆ ಸೇರಿ ವಿವಿಧ ಹುದ್ದೆಗಳನ್ನು ನಿಭಾಯಿಸಿರುವ ದ್ರೌಪದಿ ಮುರ್ಮು ಅವರು ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ಸಮುದಾಯಗಳ ಕಲ್ಯಾಣಕ್ಕಾಗಿ ನೀಡಿರುವ ಕೊಡುಗೆಗಳು ಏನು ಎಂದು ಅವರು ಪ್ರಶ್ನಿಸಿದರು. 'ನಾನು ಬುಡಕಟ್ಟು ಸಮುದಾಯದಲ್ಲಿ ಹುಟ್ಟಿಲ್ಲ. ಆದರೆ, ವಾಜಪೇಯಿ ಸರ್ಕಾರದಲ್ಲಿ ಹಣಕಾಸು ಸಚಿವನಾಗಿದ್ದಾಗ ನಾನು ಹಿಂದುಳಿದ ಸಮುದಾಯಗಳು ಮತ್ತು ಬುಡಕಟ್ಟು ಜನಾಂಗದವರಿಗೆ ದ್ರೌಪದಿ ಅವರಿಗಿಂತಲೂ ಹೆಚ್ಚಿನ ಕೆಲಸ ಮಾಡಿರುವೆ' ಎಂದರು.

'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಅಪಾಯವಿದೆ. ಈ ಬಾರಿಯ ಅಧ್ಯಕ್ಷೀಯ ಚುನಾವಣೆಯು ಅಸ್ತಿತ್ವದ ಹೋರಾಟವಲ್ಲ, ಆದರೆ, ಸಿದ್ಧಾಂತದ ಹೋರಾಟವಾಗಿದೆ' ಎಂದು ಸಿನ್ಹಾ ಹೇಳಿದ್ದಾರೆ. 'ಜೂನ್ 27ರಂದು ನಾಪಪತ್ರ ಸಲ್ಲಿಸಿದ ನಂತರ ಎಲ್ಲ ಪಕ್ಷಗಳ ನಾಯಕರನ್ನು ಮತ್ತು ಸಂಸದರನ್ನು ಭೇಟಿಯಾಗಿ, ಬೆಂಬಲ ಕೋರುವೆ' ಎಂದು ತಿಳಿಸಿದ್ದಾರೆ.

ಸಿಡಬ್ಲ್ಯುಸಿ ಸದಸ್ಯರಾಗಿ ಸೆಲ್ಜಾ, ಸಿಂಘ್ವಿ ನೇಮಕ

ಅಭಿಷೇಕ್ ಮನು ಸಿಂಘ್ವಿ



ಸುಬ್ಬರಾಮಿ ರೆಡ್ಡಿ

ಕುಮಾರಿ ಸೆಲ್ಜಾ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹರಿಯಾಣ ಘಟಕದ ಮಾಜಿ ಅಧ್ಯಕ್ಷೆ ಕುಮಾರಿ ಸೆಲ್ಜಾ ಮತ್ತು ರಾಜ್ಯಸಭೆ ಸದಸ್ಯಅಭಿಷೇಕ್ ಮನು ಸಿಂಘ್ವಿ ಅವರನ್ನು ಪಕ್ಷದ ಅಧ್ಯಕ್ಷೆ ಸೋನಿಯಾಗಾಂಧಿ ನೇಮಕ ಮಾಡಿದ್ದಾರೆ.

ರಾಜ್ಯಸಭೆ ಮಾಜಿ ಸದಸ್ಯ ಟಿ. ಸುಬ್ಬರಾಮಿರೆಡ್ಡಿ ಅವರನ್ನು ಕಾಯಂ ಆಹ್ವಾನಿತ ಸದಸ್ಯರಾಗಿ, ಯುಪಿಸಿಸಿ ಅಧ್ಯಕ್ಷ ಅಜಯ್ ಕುಮಾರ್ ಲಲ್ಲು ಅವರನ್ನು ಸಿಡಬ್ಲ್ಯೂಸಿ ವಿಶೇಷ ಆಹ್ವಾನಿತರಾಗಿ ನೇಮಿಸಲಾಗಿದೆ. ಸಿಡಬ್ಲ್ಯೂಸಿ ಕಾಂಗ್ರೆಸ್ ಪಕ್ಷದ ಉನ್ನತಾಧಿಕಾರ ಸಮಿತಿಯಾಗಿದೆ.

ಇತ್ತೀಚೆಗೆ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ಹಿನ್ನಡೆಯಾದ ಹಿಂದೆಯೇ ವಿಶೇಷ ಆಹ್ವಾನಿತ ಸ್ಥಾನದಿಂದ ಹರಿಯಾಣದ ಕಾಂಗ್ರೆಸ್ ಮುಖಂಡ ಕುಲದೀಪ್ ಬಿಷ್ಣೋಯ್ ಅವರನ್ನು ಕೈಬಿಡಲಾಗಿತ್ತು. ಬಿಷ್ಣೋಯ್ ಅವರು ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ್ದರು.

ಅಸ್ಸಾಂ ಪ್ರವಾಹ: ಮತ್ತೆ 12 ಸಾವು

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಪ್ರವಾಹದ ಪರಿಸ್ಥಿತಿ ಭೀಕರವಾಗಿದ್ದು, ಗುರುವಾರ ಮತ್ತೆ 12 ಮಂದಿ ಮೃತಪಟ್ಟಿದ್ದಾರೆ. 54.4 ಲಕ್ಷ ಮಂದಿ ಸಂತ್ರಸ್ತರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬ್ಯಾರಕ್ ಕಣಿವೆಯ ಹೆಬ್ಬಾಗಿಲು ಆಗಿರುವ ಸಿಲ್ಚಾರ್ ಪಟ್ಟಣವು ಸೋಮವಾರದಿಂದ ಭಾರಿ ಪ್ರವಾಹಕ್ಕೆ ಸಿಲುಕಿದೆ. ಇದರಿಂದಾಗಿ ಈ ವ್ಯಾಪ್ತಿಯಲ್ಲಿರುವ ಜನರು ಆಹಾರ, ನೀರು ಸೇರಿದಂತೆ ಹಲವು ಕೊರತೆಗಳನ್ನು ಎದುರಿಸುತ್ತಿದ್ದಾರೆ. ಅಲ್ಲದೆ, ವಿದ್ಯುತ್ ಪೂರೈಕೆಯಲ್ಲೂ ವ್ಯತ್ಯಯವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕಳೆದ 7 ದಶಕಗಳಲ್ಲಿ ಇದೇ ಮೊಟ್ಟ ಮೊದಲ ಬಾರಿಗೆ ಸಿಲ್ಚಾರ್ ಪಟ್ಟಣದಲ್ಲಿ ಇಷ್ಟು ದೊಡ್ಡ ಪ್ರಮಾಣದ ಪ್ರವಾಹ ಎದುರಾಗಿದೆ ಎಂದು ಸಿಲ್ಚಾರ್ ಸಂಸದ ರಾಜದೀಪ್ ರಾಯ್ ಅವರು ಸೋಮವಾರ ತಿಳಿಸಿದ್ದಾರೆ.

ಬ್ಯಾರಕ್ ಮತ್ತು ಕುಶಿಯಾರ ನದಿಗಳು ಅಪಾಯದ ಮಟ್ಟವನ್ನು ತುಂಬಿ ಹರಿಯುತ್ತಿದ್ದು, ಬ್ಯಾರಕ್ ಕಣಿವೆಯ ವ್ಯಾಪ್ತಿಯಲ್ಲಿರುವ ಕಚಾರ್, ಕರೀಂಗಂಜ್ ಮತ್ತು ಹೈಲಕಂಡಿ ಜಿಲ್ಲೆಗಳಲ್ಲಿ ನೆರೆ ಉಂಟಾಗಿದೆ. ಇದರಿಂದಾಗಿ ಕಚಾರ್ ಮತ್ತು ಕರೀಂಗಂಜ್‌ನ 10ಕ್ಕೂ ಹೆಚ್ಚು ಗ್ರಾಮಗಳ 6 ಲಕ್ಷಕ್ಕೂ ಹೆಚ್ಚು ಜನರು ಪ್ರವಾಹ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಮುಖ್ಯಮಂತ್ರಿ ಹಿಮಂತಾ ಬಿಸ್ವಾ ಶರ್ಮಾ ಅವರು ವೈಮಾನಿಕ ಸಮೀಕ್ಷೆ ನಡೆಸಿ, ಕೆಲವು ಪರಿಹಾರ ಶಿಬಿರಗಳಿಗೆ ಭೇಟಿ ನೀಡಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮೇ ತಿಂಗಳ ಮಧ್ಯ ಭಾಗದಿಂದ ಇಲ್ಲಿಯವರೆಗೆ ಪ್ರವಾಹದಿಂದ ಮೃತಪಟ್ಟವರ ಸಂಖ್ಯೆ 101ಕ್ಕೆ ಏರಿದೆ. ಬ್ರಹ್ಮಪುತ್ರ ಹಾಗೂ ಬಾರಕ್ ನದಿ ಮತ್ತು ಅವುಗಳ ಉಪನದಿಗಳ ಪಾತ್ರದ 32 ಜಿಲ್ಲೆಗಳು ಪ್ರವಾಹಕ್ಕೆ ತುತ್ತಾಗಿವೆ. ರಾಷ್ಟ್ರೀಯ ವಿಪತ್ತು ರಕ್ಷಣಾ ಪಡೆ (ಎನ್‌ಡಿಆರ್‌ಎಫ್) ಹಾಗೂ ರಾಜ್ಯ ವಿಪತ್ತು ರಕ್ಷಣಾ ಪಡೆಯ (ಎಸ್‌ಡಿಆರ್‌ಎಫ್) ಸಹಾಯದಿಂದ ಪ್ರವಾಹದಲ್ಲಿ ಸಿಲುಕಿದ್ದ 3,658 ಮಂದಿಯನ್ನು 276 ಹಡಗುಗಳ ಮೂಲಕ ರಕ್ಷಿಸಲಾಗಿದೆ' ಎಂದು ಅವರು ಹೇಳಿದರು.

'12 ಪ್ರವಾಹ ಪೀಡಿತ ಜಿಲ್ಲೆಗಳ 14,500 ಮಂದಿಯನ್ನು ರಕ್ಷಣೆ ಮಾಡಲಾಗಿದೆ. ಎನ್‌ಡಿಆರ್‌ಎಫ್‌ನ ಮೊದಲನೇ ಬೆಟಾಲಿಯನ್ 12 ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ. ರಕ್ಷಣಾ ಕಾರ್ಯಕ್ಕೆ 400 ಎನ್‌ಡಿಆರ್‌ಎಫ್ ಸಿಬ್ಬಂದಿ ಹಾಗೂ 70 ಹಡಗುಗಳನ್ನು ನಿಯೋಜಿಸಲಾಗಿದೆ' ಎಂದು ಸಹಾಯಕ ಕಮಾಂಡೆಂಟ್ ಸಂತೋಷ್ ಕುಮಾರ್ ಸಿಂಗ್ ತಿಳಿಸಿದರು.

ಪರಿಹಾರಕ್ಕೆ ₹ 10 ಲಕ್ಷ ನೀಡಿದ ದಲೈಲಾಮ: ಅಸ್ಸಾಂ ಪ್ರವಾಹ ಪರಿಹಾರ ಕಾರ್ಯಕ್ಕೆ ಟಿಬೆಟ್‌ನ ಅಧ್ಯಾತ್ಮ ಗುರು ದಲೈಲಾಮ ಅವರು ₹ 10 ಲಕ್ಷ ದೇಣಿಗೆ ನೀಡಿದ್ದಾರೆ.

ಗೀತಾ ಪಿಕ್ಚರ್ಸ್‌ನ 'ವೇದಾ'ಂತರಂಗ

ಗೀತಾ ಪಿಕ್ಚರ್ಸ್ ಲಾಂಛನ ಬಿಡುಗಡೆ ಸಮಾರಂಭದಲ್ಲಿ ನಟ ಶಿವರಾಜ್‌ಕುಮಾರ್, ಗೀತಾ ಶಿವರಾಜ್‌ಕುಮಾರ್ ಹಾಗೂ ಕುಟುಂಬದವರು ಒಟ್ಟಾಗಿ ಕಾಣಿಸಿಕೊಂಡದ್ದು ಹೀಗೆ

ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಮೂಡಿಬರುತ್ತಿರುವ 'ವೇದಾ' ಸಿನಿಮಾ ಶಿವರಾಜ್‌ಕುಮಾರ್ ಅವರ 125ನೇ ಸಿನಿಮಾ ಎಂಬುವುದಷ್ಟೇ ವಿಶೇಷವಲ್ಲ. ಎ.ಹರ್ಷ ಹಾಗೂ ಶಿವರಾಜ್‌ಕುಮಾರ್ ಅವರ ಕಾಂಬಿನೇಷನ್‌ನ ನಾಲ್ಕನೇ ಸಿನಿಮಾವೂ ಇದಾಗಿದೆ. ಚಿತ್ರದ ಶೇ 60ರಷ್ಟು ಚಿತ್ರೀಕರಣ ಈಗಾಗಲೇ ಪೂರ್ಣಗೊಂಡಿದೆ...

ನಟ ಶಿವರಾಜ್‌ಕುಮಾರ್ ಅವರ 125ನೇ ಚಿತ್ರದ ಶೀರ್ಷಿಕೆ ಅನಾವರಣ, ಗೀತಾ ಪಿಕ್ಚರ್ಸ್‌ನ ಲಾಂಛನ ಬಿಡುಗಡೆ, ಗೀತಾ ಶಿವರಾಜ್‌ಕುಮಾರ್ ಅವರ ಜನ್ಮದಿನ... ಹೀಗೆ ಸಾಲು ಸಂಭ್ರಮಗಳಿಗೆ ಬೆಂಗಳೂರಿನ ಅರಮನೆ ಮೈದಾನದ ಅದ್ದೂರಿ ವೇದಿಕೆಯಲ್ಲಿ ನಡೆದ ವರ್ಣರಂಜಿತ ಸಮಾರಂಭ ಸಾಕ್ಷಿಯಾಯಿತು.

ಅಂದಹಾಗೆ, ಈ ಮೆಗಾ ಕಾರ್ಯಕ್ರಮದಲ್ಲಿ ದೊಡ್ಮನೆ ಕುಟುಂಬದ ಎಲ್ಲ ಸದಸ್ಯರು ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡರು. ಚಂದನವನದ ಎಲ್ಲ ಗಣ್ಯರು ಹಾಜರಿದ್ದು ಶುಭಕೋರಿದರು.

'ವೇದಾ' ಚಿತ್ರದ ಶೀರ್ಷಿಕೆ ಬಿಡುಗಡೆ ಬಳಿಕ ಪತ್ನಿ ಗೀತಾ ಅವರಿಗೆ ಶುಭಕೋರಿ ಮಾತನಾಡಿದ ಶಿವರಾಜ್‌ಕುಮಾರ್, 'ಅಪ್ಪ–ಅಮ್ಮ, ವರದರಾಜ್, ಸಹೋದರರು, ಉದಯಶಂಕರ್ ಅವರೆಲ್ಲಾ ನನಗೆ ಒಳ್ಳೆಯ ಬುನಾದಿ ಹಾಕಿಕೊಟ್ಟರು. ಮುಂದೆ ಚಿತ್ರರಂಗದ ಹಿರಿಯರು, ನಿರ್ಮಾಪಕರು, ನಿರ್ದೇಶಕರು ನನ್ನನ್ನು ಯಾವತ್ತೂ ಕೆಳಗಿಳಿಯಲು ಬಿಡಲಿಲ್ಲ. ಸದಾ ಬ್ಯುಸಿ ಆಗಿರುವಂತೆ ಮಾಡಿದರು. ಹಾಗೆಯೇ ಅಭಿಮಾನಿಗಳು ಕೂಡಾ. ಇವರೆಲ್ಲ ಇಲ್ಲವಾದರೆ ಮೊದಲ ಚಿತ್ರದಿಂದ 125ನೇ ಚಿತ್ರದವರೆಗೆ ಬರಲು ಸಾಧ್ಯವಾಗುತ್ತಲೇ ಇರಲಿಲ್ಲ. ಅಭಿಮಾನಿಗಳ ಜೊತೆ ಅಪರೂಪದ ಸಂಬಂಧ ನನ್ನದು. ನಾನಿವತ್ತು ಇಲ್ಲಿರಲು ನೀವೇ ಕಾರಣ' ಎಂದು ಕೃತಜ್ಞತೆ ಅರ್ಪಿಸಿದರು.

ಇದೇ ಮಾತನ್ನು ಅನುಮೋದಿಸಿದ ಗೀತಾ ಶಿವರಾಜ್‌ಕುಮಾರ್, 'ಶಿವರಾಜ್‌ಕುಮಾರ್ ಅವರ ಹಿಂದಿನ ಶಕ್ತಿ ನೀವು (ಅಭಿಮಾನಿಗಳು). ಜೊತೆಗೆ ಅವರ ಅಪ್ಪ–ಅಮ್ಮ, ಸಹೋದರರು ಸೇರಿ ಕುಟುಂಬದ ಎಲ್ಲರೂ ಅವರ ಯಶಸ್ಸಿಗೆ ಕಾರಣರಾಗಿದ್ದಾರೆ. 100ನೇ ಚಿತ್ರದ ಸಂದರ್ಭದಲ್ಲಿ ಸಂಭ್ರಮಾಚರಣೆ ಮಾಡಬೇಕಿತ್ತು. ಆದರೆ, ಮಾಡಲಾಗಿರಲಿಲ್ಲ. ಈಗ ಆ ಸಂದರ್ಭ ಬಂದಿದೆ. 'ವೇದಾ' ಇದು ನಿಮ್ಮೆಲ್ಲರ ಚಿತ್ರ' ಎಂದು ಹೇಳಿದರು.

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

'ಚಿತ್ರ ನಿರ್ಮಾಣದ ಬಗ್ಗೆ ಏನೊಂದೂ ಗೊತ್ತಿಲ್ಲದ ನನಗೆ ನಿರ್ದೇಶಕ ಹರ್ಷ ಅವರು ಆಗಾಗ ಮಾರ್ಗದರ್ಶನ ನೀಡುತ್ತಿದ್ದರು. ಹೀಗೆ ಎಲ್ಲರ ಮಾರ್ಗದರ್ಶನ, ಬೆಂಬಲ ಬೇಕು' ಎಂದು ಅವರು ಆಶಿಸಿದರು.

ಲಾಂಛನ ಬಿಡುಗಡೆ ಮಾಡಿದ ನಟ ಅನಂತ್‌ನಾಗ್, 'ನನ್ನ ಮನಸ್ಸಿನ ಪಟಲದ ಮೇಲೆ ಕಳೆದ ಐವತ್ತು ವರ್ಷಗಳೇ ಹಾದು ಹೋಗುತ್ತವೆ. ನಾನು ಚಿತ್ರರಂಗಕ್ಕೆ ಬಂದ ಕೆಲಕಾಲದಲ್ಲೇ ಡಾ.ರಾಜ್‌ಕುಮಾರ್ ಕುಟುಂಬದವರ ಪರಿಚಯವಾಯಿತು. ಅವರಿಂದ ಏಕಲವ್ಯನ ಹಾಗೆ ಸಾಕಷ್ಟು ಕಲಿತೆ. ರಾಜ್‌ಕುಮಾರ್ ತಾವಾಗಿಯೇ ಏನನ್ನೂ ಹೇಳುತ್ತಿರಲಿಲ್ಲ. ಕೇಳಿದರೆ ಹೇಳುತ್ತಿದ್ದರು. ಅವರ ನಟನಾ ಶೈಲಿಯ ಮೂಲಕವೇ ಕಲಿಸಿದರು. ರಾಜ್‌ಕುಮಾರ್ ಅವರ ಜೊತೆ ದೊಡ್ಡ ಸೃಜನಶೀಲ ತಂಡ ಇತ್ತು. ಒಳ್ಳೆಯ ಕಥೆಗಳನ್ನು ಆರಿಸಿ, ಭಿನ್ನವಾದ ವಿಷಯಗಳನ್ನು ಆಧರಿಸಿ ಚಿತ್ರ ಮಾಡುತ್ತಿದ್ದರು. 'ವೇದಾ' ಚಿತ್ರ ಹಾಗೂ ಗೀತಾ ಪಿಕ್ಚರ್ಸ್ ಹಾಗೆಯೇ ಯಶಸ್ವಿಯಾಗಲಿ' ಎಂದು ಹಾರೈಸಿದರು.

ಕ್ರಿಕೆಟಿಗ ಅನಿಲ್ ಕುಂಬ್ಳೆ, ಮಧು ಬಂಗಾರಪ್ಪ, ಸಂಗೀತ ನಿರ್ದೇಶಕರಾದ ಗುರುಕಿರಣ್, ಅರ್ಜುನ್ ಜನ್ಯ, ಜೀ ಸ್ಟುಡಿಯೋಸ್‌ನ ಸಿಇಒ ಶಾರೀಕ್ ಪಟೇಲ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಗೀತಾ ಪಿಕ್ಚರ್ಸ್‌ನ ಮೊದಲ ಚಿತ್ರವಾಗಿ 'ವೇದಾ' ಮೂಡಿಬರುತ್ತಿದೆ. ಈ ಚಿತ್ರಕ್ಕೆ ಜೀ ಸ್ಟುಡಿಯೋಸ್ ಕೈಜೋಡಿಸಿದೆ. ಶೀರ್ಷಿಕೆಯೇ ಕುತೂಹಲ ಮೂಡಿಸುವಂತಿದೆ. ಚಿತ್ರಕ್ಕೆ ಎ.ಹರ್ಷ ಅವರ ನಿರ್ದೇಶನವಿದೆ. ಹರ್ಷ ಹಾಗೂ ಶಿವರಾಜ್‌ಕುಮಾರ್ ಅವರ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ನಾಲ್ಕನೇ ಸಿನಿಮಾ ಇದಾಗಿದೆ. 2022ರಲ್ಲೇ 'ವೇದಾ' ತೆರೆಕಾಣಲಿದೆ. ವರ್ಷಾಂತ್ಯಕ್ಕೆ ಬಿಡುಗಡೆ ಮಾಡುವ ಯೋಚನೆ ಇದೆ ಎಂದು ಗೀತಾ ಶಿವರಾಜ್‌ಕುಮಾರ್ ಈ ಹಿಂದೆಯೇ ಹೇಳಿದ್ದರು. ❖



ವೇದಾ
ಶಿವರಾಜ್‌ಕುಮಾರ್



ವಿಕ್ರಮ್ ರವಿಚಂದ್ರ

ಮನೆಯೇ ಪಾಠ ಶಾಲೆ

ಶರತ್ ಹೆಗ್ಡೆ

ಅಪ್ಪ, ಕ್ರೇಜಿಸ್ಟಾರ್ ರವಿಚಂದ್ರ ವಿ. ಅವರ ಗರಡಿಯಲ್ಲಿ ಪಳಗಿ, ಮನೆಯನ್ನೇ ನಟನೆಯ ಪಾಠಶಾಲೆಯಾಗಿ ಮಾಡಿಕೊಂಡವರು ವಿಕ್ರಮ್. ಅವರ ಚೊಚ್ಚಲ ಚಿತ್ರ 'ತ್ರಿವಿಕ್ರಮ' ಇಂದು(ಜೂನ್ 24) ಬಿಡುಗಡೆಯಾಗುತ್ತಿದ್ದು, ಈ ಹೊತ್ತಿನಲ್ಲಿ ಒಂದಿಷ್ಟು ಮಾತು..

- **ನಟನೆಯ ಹಿನ್ನೆಲೆ ಏನು?**

ಅಪ್ಪನ (ರವಿಚಂದ್ರ ವಿ.) ಜೊತೆಗೆ 'ಮಲ್ಲ', 'ಹಠವಾದಿ', 'ಕ್ರೇಜಿ ಸ್ಟಾರ್' ಸೇರಿದಂತೆ ಹಲವು ಚಿತ್ರಗಳಲ್ಲಿ ಅಭಿನಯಿಸಿದ್ದೆ. ಕೆಲಕಾಲ ಅಭಿನಯ ತರಂಗ ನಟನಾ ಶಾಲೆಯಲ್ಲೂ ಕಲಿತೆ. ಈ ಕ್ಷೇತ್ರಕ್ಕೆ ಬರಲು ಮನೆಯೇ ಕಾರ್ಯಾಗಾರ ಆಗಿತ್ತು. ಚಿಕ್ಕಂದಿನಿಂದಲೂ ಕಲಿಯುತ್ತಲೇ ಬೆಳೆದಿದ್ದೇನೆ.

- **ಅಪ್ಪ, ಅಣ್ಣನ ಪ್ರಭಾವ ನಿಮ್ಮ ಮೇಲೆ ಎಷ್ಟಿದೆ?**

ಖಂಡಿತವಾಗಿಯೂ ಇದೆ. ನನ್ನ ಬದುಕಿನ ಬೆನ್ನೆಲುಬು ಅವರೇ. ಕಲಿಸಿ, ತಿದ್ದಿ ತೀಡಿದ್ದಾರೆ. ಅವರು ಜನರ ಪ್ರೀತಿ ಗಳಿಸಿದ್ದಾರೆ. ಅದನ್ನು ಉಳಿಸಿ ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿ ನನಗಿದೆ. ಅಪ್ಪ ಹೇಳುವುದು ಒಂದೇ ಮಾತು. ಜನ ಬೆಳೆಸಿದ್ದಾರೆ. ಅವರ ಪ್ರೀತಿ ಉಳಿಸಿಕೊಂಡು ಹೋಗಬೇಕು ಅಷ್ಟೆ.

- **ತ್ರಿವಿಕ್ರಮ ಸಿನಿಮಾದ ಅನುಭವ?**

ಮೊದಲ ಸಿನಿಮಾ ಸಹಜವಾಗಿಯೇ ಖುಷಿ, ಆತಂಕ ಎರಡೂ ಇದೆ. ಒಂದು ಒಳ್ಳೆಯ ಪ್ರಯಾಣ. ಇದರ ಗೆಲುವಿನಲ್ಲೇ ನನ್ನ ಕನಸುಗಳಿವೆ. ಚಿತ್ರೀಕರಣ ಸಂದರ್ಭದ ಅನುಭವಗಳು ಮರೆಯಲಾಗದಂಥವು. ಜನ ಹೇಗೆ ಸ್ವೀಕರಿಸುತ್ತಾರೋ ನೋಡಬೇಕು.

- **ಅಪ್ಪನ ರೊಮ್ಯಾನ್ಸ್ ದೃಶ್ಯಗಳನ್ನು ವಿಕ್ರಮ್ ಕೂಡಾ ಮಾಡಬಹುದೇ?**

ಕನ್ನಡಕ್ಕೊಬ್ಬರೇ ಕ್ರೇಜಿಸ್ಟಾರ್. ಅದನ್ನೆಲ್ಲ ನನ್ನಿಂದ ಮಾಡಲಾಗದು. ಆದರೆ, ರೊಮ್ಯಾನ್ಸ್ ಅನ್ನು ಕಥೆ ಬಯಸಿದರೆ, ನಿರ್ದೇಶಕರು ಹೇಳಿದರೆ ಮಾಡಲೇಬೇಕಾಗುತ್ತದೆ. ಹಾಗೆಂದು ಅದೊಂದೇ ಆದ್ಯತೆ ಅಲ್ಲ.

- **ನಿರ್ಮಾಣಕ್ಕೆ 8 ವರ್ಷ ಬೇಕಾಯಿತೇ?**

ನಿರ್ಮಾಣವೊಂದೇ ಅಲ್ಲ. ಕಥೆಯ ಕುರಿತ ಬೇರೆ ಬೇರೆ ಸ್ವರೂಪದ ಪ್ರಸ್ತುತಿಗೆ, ಅಧ್ಯಯನಕ್ಕೆ ನಿರ್ದೇಶಕರು (ಸಹನಾಮೂರ್ತಿ) ಸಮಯ ಮೀಸಲಿಟ್ಟರು. ನಾನು ಈ ತಂಡ ಸೇರಿದ್ದು 2019ರಲ್ಲಿ. ಮಧ್ಯೆ ಕೋವಿಡ್ ಬಂದು ಎಲ್ಲವೂ ಸ್ಥಗಿತಗೊಂಡಿತು. ನಿರ್ದೇಶಕರಿಗೆ ಬದ್ಧತೆ, ಅಧ್ಯಯನದ ಆಸಕ್ತಿ ತುಂಬಾ ಇದೆ. ಎಲ್ಲೂ ರಾಜಿಯಾಗುವವರಲ್ಲ. ಹಾಗಾಗಿ ಚಿತ್ರ ಅದ್ಭುತವಾಗಿ ಬರಲು ಸಾಧ್ಯವಾಯಿತು.

- **'ತ್ರಿವಿಕ್ರಮ'ದ ಮಧ್ಯಮವರ್ಗದ ಹುಡುಗ ಹೇಗಿದ್ದಾನೆ?**

ತುಂಬಾ ಬಿಂದಾಸ್ ಆಗಿದ್ದಾನೆ. ಮಧ್ಯಮವರ್ಗದ ಜನ ಅಂದರೆ ಗೊತ್ತಲ್ಲಾ. ಒಂಥರಾ ಹೊಂದಾಣಿಕೆಯ ಬದುಕು. ಒಂದಿಷ್ಟು ಲೆಕ್ಕಾಚಾರ, ಜೀವಮಾನವಿಡೀ ಹಾಗೇ ಇರುತ್ತಾರೆ. ಅಂಥದ್ದೊಂದು ಪಾತ್ರ ನನಗೆ ಸಿಕ್ಕಿದೆ. ಇದು ಕುಟುಂಬ ಸಮೇತ ನೋಡಬಹುದಾದ ಚಿತ್ರ. ಕಥೆ ನವಿರಾಗಿ ನೋಡಿಸಿಕೊಂಡು ಹೋಗುತ್ತದೆ.

- **ಚಿತ್ರದಾಚೆ ನಿಮ್ಮ ಆಸಕ್ತಿಗಳು?**

ನಾನು ಓದಿದ್ದು ಬಿಬಿಎ. ವಿದ್ಯಾರ್ಥಿ ಜೀವನದಲ್ಲಿ ರಾಷ್ಟ್ರಮಟ್ಟದ ಟೆನಿಸ್ ಆಟಗಾರನಾಗಿದ್ದೆ. ಸದ್ಯ ಈಗ ಸಿನಿಮಾ ನೋಡುವುದು, ನಟನೆ ಅಭ್ಯಾಸ, ಕತೆ ಬರೆಯುವುದು, ಸಿನಿಮಾ ನಿರ್ಮಾಣ, ವಿತರಣೆಗೆ ಸಂಬಂಧಿಸಿದ ಯೋಜನೆ ರೂಪಿಸುವುದು ಎಲ್ಲವನ್ನೂ ಮಾಡುತ್ತಿರುತ್ತೇನೆ. ❖

ಬೆಂಗಳೂರು
ORION PVR, FORUM PVR, GT Mall PVR, VAISHNAVI PVR, REGALIA PVR, MARKETCITY PVR, VR Mall PVR, AURA PVR, VEGACITY PVR, SPIRIT PVR, ARENA PVR, UPTOWN PVR, MANTRI INOX, CENTRAL INOX, SWAGATH INOX, GARUDA INOX, RMZ INOX, LIDO INOX, YELAHANKA INOX, FORUM INOX, SBR HORIZON INOX, BROOKFIELD INOX, ETA Cinépolis, SJR Cinépolis, MEENAKSHI Cinépolis, FUN Cinépolis, ORION EAST Cinépolis, SHANTINIKETAN Cinépolis, ARCH GOPALAN CINEMAS, GRAND GOPALAN CINEMAS, INNOVATION GOPALAN CINEMAS, LEGACY GOPALAN CINEMAS, SIGNATURE GOPALAN CINEMAS, JALAHALLI ROCKLINE, SEEGEHALLI KINO CINEMAS, MARATHHALLI INNOVATIVE

ತುಮಕೂರು INOX
ಮೈಸೂರು DRC CINEMAS, PVR FORUM, PVR GARUDA, INOX, VISION CINEMAS
ದಾವಣಗೆರೆ MOVIE TIME
ಬಳ್ಳಾರಿ MOVIE TIME
ಶಿವಮೊಗ್ಗ Bharath Cinemas
ಹುಬ್ಬಳ್ಳಿ PVR LAKSHMI PRIDE, Cinépolis
ಬೆಳಗಾವಿ INOX
ಗುಲ್ಬರ್ಗ SHETTY'S MULTIPLEX, MIRAJ
ರಾಯಚೂರು MIRAJ
ಮಂಗಳೂರು PVR, Cinépolis, Bharath Cinemas
ಮಣಿಪಾಲ Bharath Cinemas, INOX
ಕುಂದಾಪುರ Bharath Cinemas
ಹಾಗೂ ರಾಜ್ಯಾದ್ಯಂತ ಇನ್ನಿತರ ಚಿತ್ರಮಂದಿರಗಳಲ್ಲಿ

ಮಾಗಡಿ ರಸ್ತೆ ಪ್ರಸನ್ನ 4ಆಟ; ರಾಜಾಜಿನಗರ ನವರಂಗ್ 4ಆಟ; ಮಾಗಡಿರಸ್ತೆ ವಿಕ್ಟರಿ ಸಿನಿಮಾ VICTORY CINEMA 4ಆಟ; ಜೆ.ಪಿ.ನಗರ ಸಿದ್ದಲಿಂಗೇಶ್ವರ 4ಆಟ; ಸುಂಕದಕಟ್ಟೆ ಮೋಹನ್ 4ಆಟ; ಕಮಲಾನಗರ ವೀರಭದ್ರೇಶ್ವರ 4ಆಟ; ಮಲ್ಲತ್ತಹಳ್ಳಿ ವಿ.ಆರ್.ಸಿನಿಮಾಸ್ 4ಆಟ; ಕೆಂಗೇರಿ ವೆಂಕಟೇಶ್ವರ 4ಆಟ; ಗೊಲ್ಲರಹಟ್ಟಿ ವೆಂಕಟೇಶ್ವರ 4ಆಟ; ಯಶವಂತಪುರ ಉಲ್ಲಾಸ್ 4ಆಟ; ವಿದ್ಯಾಪೀಠ ಚಂದ್ರೋದಯ 4ಆಟ; ಜೆ.ಪಿ.ನಗರ ರೇಣುಕ ಪ್ರಸನ್ನ 4ಆಟ; ಕೋಣನಕುಂಟೆ ಮಾನಸ 4ಆಟ; ಮತ್ತಿಕೆರೆ ಮುರಳಿಗೋಕುಲ 4ಆಟ; ಅಗರ ತಿರುಮಲ 4ಆಟ; ಆರ್.ಟಿ.ನಗರ ರಾಧಕೃಷ್ಣ 4ಆಟ; ಮಾರತ್ತಹಳ್ಳಿ ವಿನಾಯಕ 4ಆಟ; ಕಾಡುಗೋಡಿ ಶ್ರೀನಿವಾಸ 4ಆಟ; ಸರ್ಜಾಪುರ ರವಿ 4ಆಟ

ಮಾಲೂರು ಬಾಲಾಜಿ 4ಆಟ; ಯಲಹಂಕ ಪ್ರಕಾಶ್ 4ಆಟ; ಹೆಸರುಘಟ್ಟ ಎಸ್.ಎಲ್.ಎನ್ 4ಆಟ; ನೆಲಮಂಗಲ ರೂಪ 4ಆಟ; ತುಮಕುರು ಗಾಯಿತ್ರಿ 4ಆಟ; ದೊಡ್ಡಬಳ್ಳಾಪುರ ಸೌಂದರ್ಯಮಾಲ್ 4ಆಟ; ಚನ್ನಪಟ್ಟಣ ಲಕ್ಷ್ಮೀ 4ಆಟ; ತಿಪಟೂರು ತ್ರಿಮೂರ್ತಿ 4ಆಟ; ಶಿರಾ ಸಪ್ತಗಿರಿ 4ಆಟ; ರಾಮನಗರ ಶ್ರೀರಾಮ್ 4ಆಟ; ಮಾಗಡಿ ಬಾಲಾಜಿ 4ಆಟ; ಮಧುಗಿರಿ ಶಂಕರ್ 4ಆಟ; ಕನಕಪುರ ಗೋಪಾಲಕೃಷ್ಣ 4ಆಟ; ಬಿಡದಿ ದೀಪಕ್ 4ಆಟ; ಶಿಡ್ಲಘಟ್ಟ ಮಯೂರ 4ಆಟ

PVR CINEMAS: ORION, FORUM MALL, G T WORLD MALL, VAISHNAVI SAPPHIRE MALL, VEGA CITY, PHOENIX MARKET CITY, ELEMENT MALL REGALIA, V R MALL, SOUL SPRINT, ARENA, ORION UPTOWN, AURO PARK SQUARE
INOX: MANTRI SQUARE, CENTRAL, SWAGATH MALL, NEIGHBOURHOOD MALL, GARUDA MALL, BROOKEFIELD MALL, LIDO MALL, RMZ GALLERIA MALL, GARUDA, YELANKA, SBR HORIZON
Cinépolis: MEENAKSHI MALL, ETA MALL, FUN MALL, ORION EAST, FORUM SHANTINIKETAN, CENTAL MALL
GOPALAN CINEMAS: INNOVATION MALL, ARCH MALL, LEGESSY MALL, SIGNATURE MALL, GRAND MALL
JALAHALLI ROCKLINE MALL; SEEGEHALLI KINO CINEMAS
ಮೈಸೂರು ಪ್ರಭಾ; DRC Cinemas; PVR FORUM CENTRE MALL, GARUDA MALL; INOX; MYSURU VISION CINEMAS; ತಿಬ್ಬಾದೇವಿ 4ಆಟ; ಮಂಡ್ಯ ಗುರುಶ್ರೀ 4ಆಟ; ಹಾಸನ ಪಿಕ್ಚರ್ ಪ್ಯಾಲೇಸ್ 4ಆಟ; ಚಾಮರಾಜನಗರ ಭ್ರಮರಾಂಭ 4ಆಟ; ಕೊಳ್ಳೇಗಾಲ ಶ್ರೀನಿವಾಸ 4ಆಟ; ಕೆ.ಆರ್.ನಗರ ಗೌರಿಶಂಕರ 4ಆಟ; ಚನ್ನರಾಯಪಟ್ಟಣ ಧನಲಕ್ಷ್ಮಿ 4ಆಟ; ಗುಂಡ್ಲುಪೇಟೆ ಸೂರ್ಯ 4ಆಟ

ಟಿ.ನರಸೀಪುರ ಮುರುಗನ್ 4ಆಟ; ಪಾಂಡವಪುರ ಲಾಲ್‌ಬಹದ್ದೂರ್ 4ಆಟ; ಬನ್ನೂರು ರತ್ನಮಾಲ್ 4ಆಟ; ಮದ್ದೂರು ಮಹಾವೀರ 4ಆಟ; ಕೆ.ಎಂದೊಡ್ಡಿ ಸುಮಾ 4ಆಟ; ಅರಸಿಕೆರೆ ರತ್ನ 4ಆಟ; ಬಾಬುರಾಯನಕೊಪ್ಪಲು ಭಾರತಿ 4ಆಟ; ಸಾಲಿಗ್ರಾಮ ಪದ್ಮ 4ಆಟ; ಹುಲಹಳ್ಳಿ ವಿನಾಯಕ 4ಆಟ; ನಾಗಮಂಗಲ ವೆಂಕಟೇಶ್ವರ 4ಆಟ; ಕೇರಳಾಪುರ ಮಂಜುನಾಥ 4ಆಟ; ಅರಕೆರೆ ಮಂಜುನಾಥ 4ಆಟ; ಶಿವಮೊಗ್ಗ ಹೆಚ್.ಪಿ.ಸಿ Bharath Cinemas 4ಆಟ; ಚಿಕ್ಕಮಗಳುರು ಮಿಲನ 4ಆಟ; ಭದ್ರಾವತಿ ನೇತ್ರಾವತಿ 4ಆಟ; ಕಡುರು ಅನ್ನಪೂರ್ಣ 4ಆಟ; ಶಿಕಾರಿಪುರ ಕಿರಣ್ 4ಆಟ; ಚನ್ನಗಿರಿ ಲಕ್ಷ್ಮೀ 4ಆಟ

ತೀರ್ಥಹಳ್ಳಿ ವೆಂಕಟೇಶ್ವರ 4ಆಟ; ತರಿಕೆರೆ ವಿನಾಯಕ 4ಆಟ; ಆನವೇರಿ ಶ್ರೀದೇವಿ 4ಆಟ; ದಾವಣಗೆರೆ ಅಶೋಕ ಮೂವಿಟ್ಯಾಮ್ 4ಆಟ; ಚಿತ್ರದುರ್ಗ ವೆಂಕಟೇಶ್ವರ 4ಆಟ; ಬಳ್ಳಾರಿ ನಟರಾಜಕಾಂಪ್ಲೆಸ್ 4ಆಟ; ಹೊಸಪೇಟೆ ಲಕ್ಷ್ಮೀ 4ಆಟ; ಹಿರಿಯೂರು ಶ್ರೀಶೈಲಾ 4ಆಟ; ಹಗ್ಗರಿಬೊಮ್ಮನಹಳ್ಳಿ ವಿಷ್ಣು 4ಆಟ; ಹುವಿನಹಡಗಲಿ ಶಂಕರ್ 4ಆಟ; ಚಳ್ಳಕೆರೆ ರಾಮಕೃಷ್ಣ 4ಆಟ; ಸಂಡೂರು ವಾಸವಿ 4ಆಟ; ಕಂಪ್ಲಿ ಭಾರತಿ 4ಆಟ; ಮಳೆಬೆನ್ನೂರು ಜ್ಯೋತಿ 4ಆಟ; ಹುಬ್ಬಳ್ಳಿ ಶೃಂಗಾರ್ PVR CINEMAS Cinépolis 4ಆಟ; ದಾರವಾಡ ಪದ್ಮ 4ಆಟ; ಬಿಜಾಪುರ ಜಯಶ್ರೀ 4ಆಟ

ಬೆಳಗಾಂ ನಿರ್ಮಲ GLOBAL MALL INOX 4ಆಟ; ಗದಗ ಕೃಷ್ಣ 4ಆಟ; ರಾಣಿಬೆನ್ನೂರು ವೀಣಾ 4ಆಟ; ಗೋಕಾಕ್ ಆನಂದ್ 4ಆಟ; ಬಾಗಲಕೋಟೆ ಕೃಷ್ಣ 4ಆಟ; ಬೈಲಹೊಂಗಲ ಭಾರತಿ 4ಆಟ; ಗಜೇಂದ್ರಗಡ ಅಲಂಕಾರ್ 4ಆಟ; ಮುದೋಳ್ ಶುಭಾಷಿಣಿ 4ಆಟ; ಹಾನಗಲ್ ಭಾಗಿರತಿ 4ಆಟ; ರಾಮದುರ್ಗ ವೆಂಕಟೇಶ್ವರ 4ಆಟ; ಬಾದಾಮಿ ಶೀತಲ್ 4ಆಟ; ಸಿಂದಗಿ ಪ್ರಶಾಂತ್ 4ಆಟ; ಯಾದವಾಡ ಬಸವೇಶ್ವರ 4ಆಟ; ಹಾರೋಗೆರೆ ಚಂದ್ರಮಾ 4ಆಟ; ಶಿಂಗಾವ್ ರಾಜಶ್ರೀ 4ಆಟ; ಗುಲ್ಬರ್ಗ ಸಂಗಮ್ SHETTY'S MULTIPLEX MIRAJ CINEMAS 4ಆಟ

ಗಂಗಾವತಿ ಕನಕದುರ್ಗ 4ಆಟ; ರಾಯಚೂರು ಪೂರ್ಣಿಮ 4ಆಟ; ಸಿದ್ದನೂರು ಶರಣಬಸವೇಶ್ವರ 4ಆಟ; ಕೊಪ್ಪಳ ಶಾರಧ 4ಆಟ; ಬೀದರ್ ಸ್ವಪ್ನಮಾಲ್ 4ಆಟ; ಶಹಪುರ ಜಯಶ್ರೀ 4ಆಟ; ಮಸ್ಕಿ ವಿಜಯ್ 4ಆಟ; ಕುಷ್ಟಗಿ ಬಸವರಾಜು 4ಆಟ; ಲಿಂಗಸೂರು ಎಂಪೈರ್ 4ಆಟ; ದೇವದುರ್ಗ ಭಾರತ್ 4ಆಟ; ಕರಟಗಿ ಲಕ್ಷ್ಮೀ 4ಆಟ; ಮಾನವಿ ಅರ್ಪಣ 4ಆಟ; ಬಾಸ್ಕಿ ಸಂಗಮೇಶ್ವರ 4ಆಟ; ಮಂಗಳೂರು ಪ್ರಭಾತ್ Bharath Cinemas PVR CINEMAS Cinépolis 4ಆಟ; ಮಣಿಪಾಲ್ INOX 4ಆಟ; ಕುಂದಾಪುರ Bharath Cinemas 4ಆಟ; ಹಾಗೂರಾಜ್ಯಾದ್ಯಂತ

ಕೋವಿಡ್ ಸಾವು ಸರ್ಕಾರದ ತಪ್ಪು ಲೆಕ್ಕ

• ಶ್ರೀಗಿರೀಶ್ ಜಾಲಿಹಾಳ್, ತಪಸ್ಯ

ಭಾರತದಲ್ಲಿ 2020ರಲ್ಲಿ 100.51 ಲಕ್ಷ ಮಂದಿ ಮೃತಪಟ್ಟಿದ್ದಾರೆ; ಅದರಲ್ಲಿ 8.30 ಲಕ್ಷ ಮಂದಿ ಕೋವಿಡ್‌ನಿಂದ ಮೃತಪಟ್ಟವರು ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಅಂದಾಜಿಸಿದೆ. ಈ ಅಂದಾಜನ್ನು ಭಾರತವು ತಳ್ಳಿ ಹಾಕಿದೆ. ಕೋವಿಡ್ ನಿರ್ವಹಣೆಯಲ್ಲಿ ಅತ್ಯುತ್ತಮ ಕೆಲಸ ಮಾಡಿರುವುದಾಗಿ ಕೇಂದ್ರ ಸರ್ಕಾರ ಹೇಳಿಕೊಳ್ಳುತ್ತಿದೆ. ಆದರೆ, ಡಬ್ಲ್ಯುಎಚ್‌ಒ ಅಂದಾಜನ್ನು ತಳ್ಳಿ ಹಾಕುವುದಕ್ಕಾಗಿ ಲೋಪಗಳಿಂದ ಕೂಡಿದ ದತ್ತಾಂಶವನ್ನು ಬಳಸಿಕೊಂಡಿದೆ.

'ಭಾರತದಲ್ಲಿ ಜನನ ಮತ್ತು ಮರಣ ನೋಂದಣಿ ವ್ಯವಸ್ಥೆಯು ಅತ್ಯುತ್ತಮವಾಗಿದೆ. ಇದಕ್ಕೆ ದಶಕಗಳಷ್ಟು ಹಳೆಯದಾದ ಕಾಯ್ದೆಯ ಚೌಕಟ್ಟು (ಜನನಗಳು ಮತ್ತು ಮರಣಗಳ ನೋಂದಣಿ ಕಾಯ್ದೆ 1969) ಇದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಮೇ 5ರಂದು ಹೇಳಿದೆ.

2020ರಲ್ಲಿನ ಸಾವುಗಳ ಪೈಕಿ ಶೇ 99.9ರಷ್ಟು ದಾಖಲಾಗಿವೆ. ಮೃತರ ಒಟ್ಟು ಸಂಖ್ಯೆ 81.20 ಲಕ್ಷ. ಕೋವಿಡ್ ಸಾಂಕ್ರಾಮಿಕಕ್ಕೂ ಮುಂಚಿನ ವರ್ಷವಾದ 2019ಕ್ಕಿಂತಲೂ 2020 ರಲ್ಲಿ ಸಾವಿನ ಸಂಖ್ಯೆ ಕಡಿಮೆ ಆಗಿದೆ. ಕೋವಿಡ್‌ನಿಂದಾಗಿ 8.30 ಲಕ್ಷ ಹೆಚ್ಚು ಸಾವು ಸಂಭವಿಸಲು ಸಾಧ್ಯವೇ ಇಲ್ಲ ಎಂದು ಆರೋಗ್ಯ ಸಚಿವಾಲಯ ಹೇಳಿದೆ. ಈ ಅಂಕಿ ಅಂಶಗಳನ್ನು ಮುಂದಿಟ್ಟುಕೊಂಡು ಡಬ್ಲ್ಯುಎಚ್‌ಒ ಅಂದಾಜನ್ನು ಅಲ್ಲಗಳೆಯಲಾಗಿದೆ.

ಈ ವರ್ಷ ಆರೋಗ್ಯ ಸಚಿವಾಲಯವೇ ಬಿಡುಗಡೆ ಮಾಡಿದ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್) ವರದಿ ಪ್ರಕಾರ ಸಚಿವಾಲಯವು ಈ ಮುಂಚೆ ಮುಂದಿಟ್ಟಿದ್ದ ಅಂಕಿ ಅಂಶಗಳು ಸುಳ್ಳು.

ಐದನೇ ಎನ್‌ಎಫ್‌ಎಚ್‌ಎಸ್ ವರದಿಯ ಪ್ರಕಾರ, 2016ರಿಂದ 2020ರ ಅವಧಿಯಲ್ಲಿ ಸಾವಿನ ನೋಂದಣಿಯ ಸರಾಸರಿ ಪ್ರಮಾಣವು ಶೇ 70.80ರಷ್ಟು ಮಾತ್ರ. ಇದರ ಪ್ರಕಾರ ಮತ್ತು ನಾಗರಿಕ ನೋಂದಣಿ ವ್ಯವಸ್ಥೆಯಲ್ಲಿ (ಸಿಆರ್‌ಎಸ್) ಆಗಿರುವ ಸಾವಿನ ಒಟ್ಟು ದಾಖಲೆಗಳನ್ನು ಒಟ್ಟಿಗೆ ಇರಿಸಿ ಲೆಕ್ಕ ಹಾಕಿದರೆ, 2020ರಲ್ಲಿನ ಸಾವಿನ ಸಂಖ್ಯೆಯನ್ನು 114.07 ಲಕ್ಷ ಎಂದು ಅಂದಾಜಿಸಬಹುದು.

ಇದರ ಪ್ರಕಾರ, ಡಬ್ಲ್ಯುಎಚ್‌ಒ ಅಂದಾಜು ಮತ್ತು ಎನ್‌ಎಫ್‌ಎಚ್‌ಎಸ್ ಅಂದಾಜು ಹತ್ತಿರ ಹತ್ತಿರ ಬರುತ್ತವೆ. ಡಬ್ಲ್ಯುಎಚ್‌ಒ ಅಂದಾಜನ್ನು ಅಲ್ಲಗಳೆಯಲು ಸರ್ಕಾರ ಬಳಸಿದ ದತ್ತಾಂಶದಲ್ಲಿ ಲೋಪವಿದೆ ಎಂಬುದು ಅರಿವಾಗುತ್ತದೆ.

ಸರ್ಕಾರ ನೀಡಿದ ಲೆಕ್ಕ



ಶೇ 99.9ರ ಪ್ರಮಾಣ ದೊರೆತದ್ದೆಲ್ಲಿ?

ವಿಶ್ವ ಆರೋಗ್ಯ ಸಂಸ್ಥೆಯ ಪ್ರತಿಪಾದನೆಯನ್ನು ಕೇಂದ್ರ ಸರ್ಕಾರವು, '2020ರಲ್ಲಿ ದೇಶದಲ್ಲಾದ ಒಟ್ಟು ಸಾವುಗಳಲ್ಲಿ ಶೇ 99.9ರಷ್ಟು ನೋಂದಣಿಯಾಗಿವೆ' ಎಂಬ ದತ್ತಾಂಶವನ್ನು ಮುಂದಿಟ್ಟು ತಳ್ಳಿ ಹಾಕಿತ್ತು. ಸರ್ಕಾರಿ ಸಂಸ್ಥೆಗಳು ಪ್ರತಿ ವರ್ಷ ನಡೆಸುವ ಎರಡು ಲೆಕ್ಕಾಚಾರಗಳನ್ನು ಅಧರಿಸಿ, ಶೇ 99.9ರಷ್ಟು ಸಾವು ನೋಂದಣಿಯಾಗಿವೆ ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ.

ಸರ್ಕಾರವು ಪ್ರತಿ ವರ್ಷ ನಡೆಸುವ 'ಮಾದರಿ ನೋಂದಣಿ ಸಮೀಕ್ಷೆ' (ಎಸ್‌ಆರ್‌ಎಸ್) ಮತ್ತು 'ನಾಗರಿಕ ನೋಂದಣಿ ವ್ಯವಸ್ಥೆ' (ಸಿಆರ್‌ಎಸ್) ವರದಿಗಳನ್ನು ಆಧಾರವಾಗಿ ಇರಿಸಿಕೊಂಡು ಸರ್ಕಾರವು ನೋಂದಣಿ ಪ್ರಮಾಣವನ್ನು ಲೆಕ್ಕಹಾಕಿದೆ. ಇದರಲ್ಲಿ ಸಿಆರ್‌ಎಸ್ ಲೆಕ್ಕಾಚಾರವು ಹೆಚ್ಚು ನಿಖರ. ಏಕೆಂದರೆ, ಪ್ರತಿ ವರ್ಷ ನೋಂದಣಿಯಾದ ಜನನ ಮತ್ತು ಮರಣಗಳ ಕರಾರುವಾಕ್ಕಾದ ಸಂಖ್ಯೆಯನ್ನು ಇದು ಒಳಗೊಂಡಿರುತ್ತದೆ. ಆದರೆ, ಎಸ್‌ಆರ್‌ಎಸ್ ವರದಿಯಲ್ಲಿನ ಸಾವಿನ ಅಂದಾಜು ನಿಖರತೆಯಿಂದ ಬಹಳ ದೂರ. ಅಂದರೆ ವಾಸ್ತವದಲ್ಲಿನ ಸಾವುಗಳಿಗೂ, ಎಸ್‌ಆರ್‌ಎಸ್ ವರದಿಯಲ್ಲಿ ಮಾಡಲಾಗುವ ಸಾವಿನ ಅಂದಾಜಿನ ನಡುವಣ ವ್ಯತ್ಯಾಸ ದೊಡ್ಡದು.

ಎಸ್‌ಆರ್‌ಎಸ್ ಸಮೀಕ್ಷೆ ನಡೆಸುವಾಗ ಅಧಿಕಾರಿಗಳು ಆಯ್ದ ಕೆಲವೇ ಮನೆಗಳಿಗೆ ಭೇಟಿ ನೀಡಿ, ಒಂದು ವರ್ಷದ ಅವಧಿಯಲ್ಲಿ ಎಷ್ಟು ಜನರು ಮರಣ ಹೊಂದಿದ್ದಾರೆ ಎಂದು ಕೇಳುತ್ತಾರೆ. ಆ ಮನೆಗಳಲ್ಲಿ ಮೃತಪಟ್ಟವರ ಸಂಖ್ಯೆಯನ್ನು ಲೆಕ್ಕ ಹಾಕುತ್ತಾರೆ. ಸಾಮಾನ್ಯವಾಗಿ 1,000 ಮನೆಗಳಲ್ಲಿ ಇಂತಹ ಸಮೀಕ್ಷೆ ನಡೆಸುವುದು ರೂಢಿ. ಒಂದು ಸಾವಿರ ಮನೆಗಳಲ್ಲಿ ಮೃತಪಟ್ಟವರ ಸಂಖ್ಯೆಯನ್ನು ಸಾವಿರದ ಅನುಪಾತದಲ್ಲಿ ಲೆಕ್ಕಹಾಕಲಾಗುತ್ತದೆ. ಅಂದರೆ ಒಂದು ಸಾವಿರ ಮನೆಯಲ್ಲಿ 100 ಮಂದಿ ಮೃತಪಟ್ಟಿದ್ದರೆ, ಈ ಮರಣ ದರವನ್ನು ಇಡೀ ದೇಶದ ಜನಸಂಖ್ಯೆಗೆ ಅನ್ವಯಿಸಿ ಲೆಕ್ಕ ಹಾಕಲಾಗುತ್ತದೆ. ಹೀಗೆ ಎಸ್‌ಆರ್‌ಎಸ್ ಮೂಲಕ ಮಾಡುವ ಲೆಕ್ಕಾಚಾರವು ಒಂದು ಅಂದಾಜು ಮಾತ್ರ ಎಂಬುದನ್ನು ನೆನಪಿಡಬೇಕು.

ಎಸ್‌ಆರ್‌ಎಸ್‌ನಲ್ಲಿ ಅಂದಾಜಿಸಲಾದ ಸಾವಿಗಿಂತ ಹೆಚ್ಚು ಸಾವು ನೋಂದಣಿಯಾದರೆ, ಶೇ 100ರಷ್ಟು ಸಾವು ನೋಂದಣಿಯಾಗಿದೆ ಎಂದು ಸರ್ಕಾರವು ಪರಿಗಣಿಸುತ್ತದೆ. ಉದಾಹರಣೆಗೆ 2018ರಲ್ಲಿ ಆಂಧ್ರಪ್ರದೇಶದಲ್ಲಿ 3.53 ಲಕ್ಷ ಸಾವು ಸಂಭವಿಸಬಹುದು ಎಂದು ಎಸ್‌ಆರ್‌ಎಸ್‌ನಲ್ಲಿ ಅಂದಾಜಿಸಲಾಗಿತ್ತು. ಆದರೆ, ಆ ವರ್ಷ ಅಲ್ಲಿ ನೋಂದಣಿಯಾದ ಮರಣ ಸಂಖ್ಯೆ 3.76 ಲಕ್ಷ. 2018ರಲ್ಲಿ ಆಂಧ್ರಪ್ರದೇಶದಲ್ಲಿ ಶೇ 100ರಷ್ಟು ಸಾವು ನೋಂದಣಿಯಾಗಿವೆ ಎಂದು ಸರ್ಕಾರವು ಹೇಳಿದೆ. 2020ರಲ್ಲಿ ಈ ರೀತಿ ಎಲ್ಲಾ ರಾಜ್ಯಗಳಲ್ಲಿ ಮರಣ ನೋಂದಣಿ ಶೇ 100ರಷ್ಟಾಗಿದೆ ಎಂದು ಸರ್ಕಾರವು ಪರಿಗಣಿಸಿದೆ. ಹೀಗಾಗಿಯೇ 2020ರಲ್ಲಿ ಶೇ 99.9ರಷ್ಟು ಸಾವು ನೋಂದಣಿಯಾಗಿವೆ ಎಂದು ಸರ್ಕಾರವು ಹೇಳಿದೆ.

2020ರಲ್ಲಿ ಸರ್ಕಾರವು ಹೀಗೆ ಅಂದಾಜಿಸಿದ ಒಟ್ಟು ಸಾವಿನ ಸಂಖ್ಯೆ 81.2 ಲಕ್ಷ. 2020ರಲ್ಲಿ ಸಿಆರ್‌ಎಸ್‌ನಲ್ಲಿ ನೋಂದಣಿಯಾದ ಮರಣಗಳ ಸಂಖ್ಯೆ 81.15 ಲಕ್ಷ. ಹೀಗಾಗಿ ದೇಶದಲ್ಲಿ ಸಂಭವಿಸಿದ ಸಾವಿನಲ್ಲಿ ಶೇ 99.9ರಷ್ಟು ನೋಂದಣಿಯಾಗಿವೆ ಎಂದು ಸರ್ಕಾರವು ಲೆಕ್ಕಾಚಾರ ನೀಡಿದೆ.

ವ್ಯತ್ಯಾಸ ಏರಿಕೆ

ಮರಣ ನೋಂದಣಿ ಪ್ರಮಾಣವನ್ನು ಪರಿಗಣಿಸುವಾಗ, ಎಸ್‌ಆರ್‌ಎಸ್ ಅಂದಾಜನ್ನೇ ಒಟ್ಟು ಸಾವು ಎಂದು ಸರ್ಕಾರ ಪರಿಗಣಿಸುತ್ತದೆ. ನೋಂದಣಿಯಾದ ಒಟ್ಟು ಮರಣ ಸಂಖ್ಯೆಯನ್ನೂ ಪರಿಗಣಿಸುವುದಿಲ್ಲ. ಬದಲಿಗೆ ಶೇ 100ರಷ್ಟು ಎಂದು ಪರಿಗಣಿಸಲಾದ ನೋಂದಣಿ ಪ್ರಮಾಣವನ್ನೇ ಲೆಕ್ಕ ಹಾಕುತ್ತದೆ. ಹೀಗಾಗಿ ನಿಜವಾಗಿಯೂ ಸಂಭವಿಸಿದ ಸಾವಿನ ಸಂಖ್ಯೆ ದೊರೆಯುವುದಿಲ್ಲ. ಗಣಿತಜ್ಞ ಮುರುಡ್ ಬನಾಜಿ ಮತ್ತು ಹಾರ್ವರ್ಡ್ ವಿಶ್ವವಿದ್ಯಾಲಯದ ಗಣಿತಜ್ಞರಾದ ಆಶಿಶ್ ಗುಪ್ತಾ ಅವರು ನೈಜ ಸಾವಿನ ಲೆಕ್ಕಾಚಾರ ವಿಧಾನವನ್ನು ರೂಪಿಸಿದ್ದಾರೆ.

ಮರಣ ನೋಂದಣಿ ಪ್ರಮಾಣ ಶೇ 100ರಷ್ಟು ಎಂದು ಸರ್ಕಾರ ಘೋಷಿಸಿದ ರಾಜ್ಯಗಳಲ್ಲಿ, ನೋಂದಣಿಯಾದ ಒಟ್ಟು ಸಾವುಗಳನ್ನು ಲೆಕ್ಕ ಮಾಡಲಾಗುತ್ತದೆ. ಆ ಮೂಲಕ ಆ ವರ್ಷದಲ್ಲಿ ಸಂಭವಿಸಿದ ಒಟ್ಟು ಸಾವಿನ ಸಂಖ್ಯೆಗೆ, ಹತ್ತಿರವಿರುವ ಮತ್ತೊಂದು ಅಂದಾಜನ್ನು ಮಾಡಲಾಗುತ್ತದೆ. 2020ರ ಎಸ್‌ಆರ್‌ಎಸ್ ಮತ್ತು ಸಿಆರ್‌ಎಸ್ ದತ್ತಾಂಶಗಳಿಗೆ ಈ ವಿಧಾನವನ್ನು ಅನ್ವಯಿಸಿದಾಗ, ಆ ವರ್ಷದ ಸಾವಿನ ಅಂದಾಜು 91.82 ಲಕ್ಷ ಎಂಬ ತೀರ್ಮಾನಕ್ಕೆ ಬರಲಾಗಿದೆ. ಅದರೆ ಎಸ್‌ಆರ್‌ಎಸ್ ಅಂದಾಜಿಗಿಂತ 10 ಲಕ್ಷಕ್ಕೂ ಹೆಚ್ಚು ಸಾವುಗಳು ಸಂಭವಿಸಿವೆ ಎಂದು ಪರಿಷ್ಕೃತ ಅಂದಾಜು ಮಾಡಲಾಗಿದೆ. ನೋಂದಣಿ ಆಗದೇ ಇರುವ ಶೇ 11.6 ರಷ್ಟು ಸಾವನ್ನು ಸೇರಿಸಿದರೆ, ಒಟ್ಟು ಸಾವಿನ ಸಂಖ್ಯೆ 114.07 ಲಕ್ಷದಷ್ಟಾಗುತ್ತದೆ. ಇದನ್ನು 10 ವರ್ಷಗಳ ದತ್ತಾಂಶಕ್ಕೆ ಅನ್ವಯಿಸಿ ಮರು ಅಂದಾಜಿಸಲಾಗಿದೆ.

ಎಸ್‌ಆರ್‌ಎಸ್‌ನಲ್ಲಿನ ಸಾವಿನ ಅಂದಾಜನ್ನು ಮರು ಅಂದಾಜಿಸಿದಾಗ ಬರುವ ಸಂಖ್ಯೆ ಮತ್ತು ಸಿಆರ್‌ಎಸ್‌ನಲ್ಲಿನ ಮರಣ ನೋಂದಣಿ ಸಂಖ್ಯೆಯ ನಡುವೆ ವ್ಯತ್ಯಾಸ ಇದ್ದೇ ಇರುತ್ತದೆ. ಆದರೆ 2014ರಿಂದ ಈಚೆಗೆ ಈ ವ್ಯತ್ಯಾಸ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿದೆ. ಎಸ್‌ಆರ್‌ಎಸ್‌ನಲ್ಲಿ ಸಾವಿನ ಅಂದಾಜು ಲೆಕ್ಕಾಚಾರ ವಿಧಾನವನ್ನು ಪ್ರತಿ 10 ವರ್ಷಕ್ಕೊಮ್ಮೆ ಬದಲಿಸಲಾಗುತ್ತದೆ. ಈ ಹಿಂದೆ 2014ರಲ್ಲಿ ಈ ವಿಧಾನವನ್ನು ಪರಿಷ್ಕರಿಸಲಾಗಿತ್ತು. ಆನಂತರವೇ ಎಸ್‌ಆರ್‌ಎಸ್ ಸಾವಿನ ಅಂದಾಜು ಮತ್ತು ಸಿಆರ್‌ಎಸ್ ಮರಣ ನೋಂದಣಿ ನಡುವಣ ವ್ಯತ್ಯಾಸ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ.

ಮರು ಅಂದಾಜಿಸಲಾದ ಮರಣ ಸಂಖ್ಯೆ ಮತ್ತು ನೋಂದಣಿಯಾದ ಮರಣದ ನಡುವಣ ವ್ಯತ್ಯಾಸ



ತಪ್ಪಾಗಿದ್ದೆಲ್ಲಿ?

ಸರ್ಕಾರದ ಈ ಲೆಕ್ಕಾಚಾರದ ವಿಧಾನದಲ್ಲೇ ಬಹಳ ಸಮಸ್ಯೆಗಳಿವೆ. ಏಕೆಂದರೆ 2020ರಲ್ಲಿ ಹೀಗೆ 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸಂಬಂಧಿಸಿದಂತೆ ಸರ್ಕಾರವು ಹಾಕಿದ ಲೆಕ್ಕಾಚಾರವು, 20 ರಾಜ್ಯಗಳಲ್ಲಿ ತಪ್ಪಾಗಿದೆ. ಕೆಲವು ರಾಜ್ಯಗಳಲ್ಲಿ ಸರ್ಕಾರದ ಅಂದಾಜಿಗಿಂತ ಹಲವುಪಟ್ಟು ಹೆಚ್ಚು ಮರಣ ನೋಂದಣಿಯಾಗಿವೆ. ಚಂಡೀಗಡದಲ್ಲಿ ಸರ್ಕಾರದ ಅಂದಾಜಿಗಿಂತ ಶೇ 394.8ರಷ್ಟು ಹೆಚ್ಚು ಮರಣ ನೋಂದಣಿಯಾಗಿವೆ. ದೆಹಲಿಯಲ್ಲಿ ಸರ್ಕಾರದ ಅಂದಾಜಿಗಿಂತ ಶೇ 196.42ರಷ್ಟು ಹೆಚ್ಚು ಮರಣ ನೋಂದಣಿಯಾಗಿವೆ. 'ಸಣ್ಣ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾದರಿಯ ಗಾತ್ರ ತೀರಾ ಕಡಿಮೆ ಇರುತ್ತದೆ. ಹೀಗಾಗಿ ಅಲ್ಲಿನ ಅಂದಾಜನ್ನು ಗಂಭೀರವಾಗಿ ಪರಿಗಣಿಸಲು ಸಾಧ್ಯವಿಲ್ಲ' ಎಂದು ಎಸ್‌ಆರ್‌ಎಸ್ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಆದರೆ, ದೊಡ್ಡ ರಾಜ್ಯಗಳಿಗೆ ಸಂಬಂಧಿಸಿದಂತೆ ಎಸ್‌ಆರ್‌ಎಸ್ ಮಾಡಿದ ಅಂದಾಜೂ ತಪ್ಪಾಗಿದೆ. 2020ರಲ್ಲಿ ತಮಿಳುನಾಡಿನಲ್ಲಿ ಸಂಭವಿಸಿದ ಸಾವಿಗೆ ಸಂಬಂಧಿಸಿದಂತೆ ಎಸ್‌ಆರ್‌ಎಸ್ ಮಾಡಿದ್ದ ಅಂದಾಜಿಗಿಂತ ಶೇ 148.14ರಷ್ಟು ಹೆಚ್ಚು ಮರಣ ನೋಂದಣಿಯಾಗಿವೆ. ಆಂಧ್ರಪ್ರದೇಶದಲ್ಲಿ ಎಸ್‌ಆರ್‌ಎಸ್ ಅಂದಾಜಿಗಿಂತ ಶೇ 137.56ರಷ್ಟು ಹೆಚ್ಚು ಮರಣ ನೋಂದಣಿಯಾಗಿವೆ.

ಎಸ್‌ಆರ್‌ಎಸ್ ಮತ್ತು ಸಿಆರ್‌ಎಸ್ ಎರಡನ್ನೂ ಮಹಾನೋಂದಣಾಧಿಕಾರಿ ಕಚೇರಿಯು ನಿರ್ವಹಿಸುತ್ತದೆ. ಎರಡೂ ವರದಿಗಳಲ್ಲಿನ ಸಾವಿನ ಸಂಖ್ಯೆಯಲ್ಲಿರುವ ವ್ಯತ್ಯಾಸದ ಬಗ್ಗೆ ಈ ಕಚೇರಿಯ ಅಧಿಕಾರಿಗಳನ್ನು ಮಾತನಾಡಿಸಲಾಯಿತು. ಈ ಬಗ್ಗೆ ಅಲ್ಲಿನ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು. 'ಎಸ್‌ಆರ್‌ಎಸ್ ವರದಿ ಸಿದ್ಧಪಡಿಸುವಾಗ ಒಂದು ರಾಜ್ಯದಲ್ಲಿರುವ, ಅಲ್ಲಿನದೇ ಕುಟುಂಬದ ಮಾಹಿತಿಯನ್ನು ಮಾತ್ರ ಸಂಗ್ರಹಿಸಲಾಗುತ್ತದೆ. ಆ ರಾಜ್ಯದ ವ್ಯಕ್ತಿ ಬೇರೊಂದು ರಾಜ್ಯದಲ್ಲಿ ಮೃತಪಟ್ಟಿದ್ದರೆ, ಅದು ವ್ಯಕ್ತಿ ಮೃತಪಟ್ಟ ರಾಜ್ಯದಲ್ಲೇ ನೋಂದಣಿಯಾಗುತ್ತದೆ. ಇದರಿಂದ ಆ ರಾಜ್ಯದಲ್ಲಿನ ಸಾವಿನ ನೋಂದಣಿ ಸಂಖ್ಯೆಯಲ್ಲಿ ಏರಿಕೆಯಾಗುತ್ತದೆ' ಎಂದು ಅವರು ವಿವರಿಸಿದರು.

ಅವರ ಸ್ಪಷ್ಟನೆ ಪ್ರಕಾರ ಹೇಳುವುದಾದರೆ, ದೆಹಲಿ ಮತ್ತು ಚಂಡೀಗಡದಂತಹ ಸಣ್ಣ ಕೇಂದ್ರಾಡಳಿತ ಪ್ರದೇಶ ಮತ್ತು ರಾಜ್ಯಗಳಿಗೆ ಈ ವಿವರಣೆ ಅನ್ವಯವಾಗುತ್ತದೆ. ಆದರೆ ದೇಶದ 20 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ, ಇಂತಹ ವ್ಯತ್ಯಾಸವಾಗಿದೆ. ಹೀಗಾಗಿ ಈ ವಿವರಣೆಯನ್ನು ಒಪ್ಪಲು ಸಾಧ್ಯವಿಲ್ಲ. ಈ ಬಗ್ಗೆ ಮಹಾನೋಂದಣಾಧಿಕಾರಿ ಕಚೇರಿಗೆ ವಿವರವಾದ ಪ್ರಶ್ನೆಗಳನ್ನು ಕಳುಹಿಸಲಾಗಿದೆ. ಆದರೆ ಈ ವರದಿ ಪ್ರಕಟಿಸುವ ವೇಳೆಯಲ್ಲಿ ಆ ಕಚೇರಿಯಿಂದ ಉತ್ತರ ಬಂದಿರಲಿಲ್ಲ.

ವರದಿಗಾರರು ರಿಪೋರ್ಟರ್ಸ್ ಕಲೆಕ್ಟಿವ್‌ನ ಸದಸ್ಯರು, ವರದಿಯ ಇಂಗ್ಲಿಷ್ ಆವೃತ್ತಿಯು 'ದಿ ವೈರ್'ನಲ್ಲಿ ಪ್ರಕಟವಾಗಿದೆ

ಮತ್ತೆ ಕಾಮವಿಕಾರನಾದ ಬ್ರಹ್ಮ

ದಕ್ಷಪ್ರಜಾಪತಿಯು ಶಿವನಿಗೆ ತನ್ನ ಪುತ್ರಿಯನ್ನು ಮದುವೆಮಾಡಿಕೊಟ್ಟ ನಂತರ, ಅಳಿಯನಿಗೆ ಅನೇಕ ಬಗೆಯ ಬಳುವಳಿಗಳನ್ನು ಕೊಟ್ಟ. ಈ ಸಂದರ್ಭದಲ್ಲಿ ಹರಿಯು ತನ್ನ ಪತ್ನಿ ಲಕ್ಷ್ಮಿಯೊಡನೆ ಶಿವನ ಬಳಿಗೆ ಬಂದು ಕೈಮುಗಿದುಕೊಂಡು ಹೇಳಿದ: 'ಓ ಮಹಾದೇವನೆ, ನೀನು ಜಗತ್ತಿಗೆಲ್ಲಾ ತಂದೆಯು. ಸತೀದೇವಿಯು ಮಾತೆಯು. ನೀವೀರ್ವರೂ ಸತ್ಪುರುಷರಿಗೆ ಕ್ಷೇಮವನ್ನುಂಟು ಮಾಡಿ, ದುಷ್ಟರನ್ನು ನಿಗ್ರಹಿಸಲು ಅವತರಿಸಿರುವಿರಿ. ಅನಾದಿಯಾದ ವೇದವೂ ಹಾಗೆಯೇ ಹೇಳುವುದು.

'ಎಲೈ ಶಂಕರನೇ, ನೀನು ಶುಭ್ರವಾದ ಬಿಳಿಬಣ್ಣದಿಂದ ಹೊಳೆಯುತ್ತಿದ್ದರೂ, ನಯವಾದ ಕಾಡಿಗೆಯಂತೆ ಕಪ್ಪಾದ ಶರೀರಕಾಂತಿಯುಳ್ಳ ಸತಿಯ ಕೈಹಿಡಿದಿರುವೆ. ನಾನು ಶ್ಯಾಮವರ್ಣವುಳ್ಳವನಾಗಿದ್ದರೂ,ಶುಭ್ರ ಬಿಳಿವರ್ಣದವಳಾದ ಲಕ್ಷ್ಮಿಯನ್ನು ವಿವಾಹನಾಗಿರುವೆ. ಅಂದರೆ, ನಿಮ್ಮ ಪತಿಪತ್ನೀಭಾವವು ನಮ್ಮ ಪತಿಪತ್ನೀಭಾವದಂತೆ ವ್ಯತಿರಿಕ್ತವಾಗಿವೆ. ನಾನು ಕಪ್ಪಗಿದ್ದರೂ, ಶ್ವೇತವರ್ಣದ ಲಕ್ಷ್ಮಿಯೊಂದಿಗೆ ಕಲೆತು ಒಂದಾಗಿ ಶೋಭಿಸುವಂತೆ, ನೀನೂ ಭಿನ್ನ ಬಣ್ಣದ ಸತಿಯೊಂದಿಗೆ ನನ್ನಂತೆಯೇ ಶೋಭಿಸುತ್ತಿರುವೆ. ಓ ಶಂಕರ, ಸತೀದೇವಿಯೊಡನೆ ಸತ್ಪುರುಷರಾ ದಂತಹ ದೇವತೆಗಳಿಗೂ ಮಾನವರಿಗೂ ಸಂಸಾರದುಃಖವನ್ನು ತಪ್ಪಿಸಿ ಸದಾ ಮಂಗಳವನ್ನುಂಟುಮಾಡು. ನನ್ನದೊಂದು ಮಾತನ್ನು ನೆರವೇರಿಸಿ ಕೊಡು. ಸತೀದೇವಿಯನ್ನು ಪರಪುರುಷನಾದವನು ನೋಡಿಯಾಗಲಿ ಅಥವಾ ಅವಳ ಸೌಂದರ್ಯವನ್ನು ಕೇಳಿಯಾಗಲೀ ಕಾಮ ವಿಕಾರ ತೋರಿಸಿದರೆ ಅಂತಹವನ್ನು ಸಂಹರಿಸು' ಎಂದು ವಿಷ್ಣು ವಿನಂತಿಸಿದ.

ಶಂಕರನು ಮಂದಹಾಸವನ್ನು ಸೂಸುತ್ತ ಹಾಗೆಯೇ ಆಗಲಿ ಎಂದು ಅಂಗೀಕರಿಸಿದ. ಶಿವನಿಂದ ವಾಗ್ದಾನ ಪಡೆದ ಹರಿ ತನ್ನ ಸ್ಥಾನಕ್ಕೆ ಬಂದು ಕುಳಿತು ಶಿವ-ಸತಿಯರ ವಿವಾಹ ಮಹೋತ್ಸವವನ್ನು ಸಾಂಗಗೊಳಿಸಿದ. ಆದರೆ, ಸತಿಯನ್ನು ಕಾಮಿಸಿದವರನ್ನು ಹರನು ಕೊಲ್ಲುವ ಸಮಾಚಾರ ವನ್ನು ಹರಿ ಬಹಿರಂಗಪಡಿಸಲಿಲ್ಲ.

ಇತ್ತ ಬ್ರಹ್ಮ ಗೃಹ್ಯಸೂತ್ರದಲ್ಲಿ ಹೇಳಿರುವ ವಿಧಿಯಂತೆ ಶಿವಮತ್ತು ಸತೀದೇವಿಯರಿಗೆ ಸಂಪೂರ್ಣವಾಗಿ ವಿವಾಹಹೋಮ ಮುಂತಾದ ಅಗ್ನಿಕಾರ್ಯಗಳನ್ನು ಮಾಡಿಸಿದ. ಶಿವ ಮತ್ತು ಸತೀದೇವಿಯರು ಪುರೋಹಿತನಾದ ಬ್ರಹ್ಮನ ಅಪ್ಪಣೆಯಂತೆ ವಿಧಿವತ್ತಾಗಿ ಸಂತೋಷದಿಂದ ಅಗ್ನಿಗೆ ಪ್ರದಕ್ಷಿಣೆ ಮಾಡಿದರು. ಹೀಗೆ ಶಿವ-ಸತೀದೇವಿಯರವಿವಾಹ ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ಮದುವೆಗೆ ಬಂದವರೆ ಲ್ಲರಿಗೂ ಆನಂದವಾಗುವಂತೆ ಗಾನ-ನರ್ತನ, ನಾನಾವಾದ್ಯಗಳ ಸಂಗೀತ ಕಾರ್ಯಕ್ರಮ ನಡೆದವು.

ಆಗ ಅಲ್ಲಿ ಇನ್ನೊಂದು ಅತ್ಯಾಶ್ಚರ್ಯಕರವಾದ ಘಟನೆ ನಡೆಯಿತು. ಇಂಥ ಘಟನೆಗಳು ಶಂಕರನ ಮಾಯೆಯಿಂದಲ್ಲದೆ ಬೇರೆ ಯಾವುದರಿಂದಲೂ ನಡೆಯಲಾರದು. ಶಂಕರನ ಮಾಯೆಯನ್ನು ತಿಳಿ ಯಲು ಯಾರಿಗೂ ಸಾಧ್ಯವಿಲ್ಲ. ಶಿವಮಾಯೆಯಿಂದ ಸ್ಥಾವರಜಂಗಮ ರೂಪವಾದ ಈ ಜಗತ್ತೆಲ್ಲವೂ ನಿರ್ಮಾಣಗೊಂಡಿದೆ. ಈ ಜಗತ್ತಿನೊಳಗಿರುವ ದೇವತೆಗಳು, ಅಸುರರು, ಮನುಷ್ಯರು ಮತ್ತಿತರ ಜೀವಿಗಳೆಲ್ಲ ಶಿವನಿಂದ ಮೋಹಗೊಳಿಸಲ್ಪಟ್ಟವರು. ಇದಕ್ಕೆ ಪಿತಾಮಹನಾದ ಬ್ರಹ್ಮ ಮತ್ತು ಜಗದ್ರಕ್ಷಕನಾದ ವಿಷ್ಣು ಸಹ ಅತೀತರಲ್ಲ.

ಯಾವ ಶಂಕರನನ್ನು ಹಿಂದೆ ಕಪಟದಿಂದ ಮೋಹಗೊಳಿಸಬೇಕೆಂದು ಕೊಂಡಿದ್ದನೋ ಆ ಬ್ರಹ್ಮನೇ ಶಂಕರನ ಮೋಹದ ಲೀಲಾಬಲೆಗೆ ಬಿದ್ದ. ಪರರಿಗೆ ಕೆಡುಕನ್ನು ಬಯಸಿದರೆ ಅದು ತನಗೇ ಬರುವುದು ಎಂಬುದು ಪರಮ ನಿಶ್ಚಯವಾದುದು. ಆದ್ದರಿಂದ ವಿವೇಕಿಯಾದವನು ಇದನ್ನು ತಿಳಿದುಕೊಳ್ಳಬೇಕು. ಪರರಿಗೆ ಕೆಡುಕನ್ನು ಮಾಡುವ ಯೋಚನೆ ಸಹ ಮಾಡಬಾರದು. ಶಿವನಿಗೆ ಕಾಮವಿಕಾರದ ಕೆಡುಕನ್ನು ಬಯಸಿದ್ದ ಬ್ರಹ್ಮನಿಗೆ ಈಗ ಕಾಮವಿಕಾರವಾಗುವ ಕೇಡುಬುದ್ಧಿ ಬಂದಿತು. ಅದೂ ಶಿವನೊಂದಿಗೆ ಸತೀದೇವಿಗೆ ವಿವಾಹ ಮಾಡಿಕೊಡುವಾಗಲೇ ಬ್ರಹ್ಮನಿಗೆ ಕಾಮವಿಕಾರ ಮೂಡಿತು. ಹೇಗೆಂದರೆ, ಶಿವನೊಂದಿಗೆ ಸತೀದೇವಿ ಅಗ್ನಿಗೆ ಪ್ರದಕ್ಷಿಣೆ ಮಾಡುವಾಗ, ಅವಳ ಪಾದವನ್ನಾವರಿಸಿದ್ದ ಸೀರೆಯು ಸ್ವಲ್ಪ ಸರಿದು ಅವಳ ಸುಂದರವಾದ ಪಾದಗಳು ಬ್ರಹ್ಮನಿಗೆ ಕಾಣಿಸಿದವು.

ಇಷ್ಟಕ್ಕೆ ಬ್ರಹ್ಮ ಮನ್ಮಥವಿಕಾರವನ್ನು ಹೊಂದಿದವನಾಗಿ ಸತೀದೇವಿಯ ಸುಂದರವಾದ ಮುಖ ನೋಡಬೇಕೆಂಬ ಆಸೆ ಹುಟ್ಟಿತು. ಅವನಲ್ಲಿ ಕಾಮವಿಕಾರವು ಹೆಚ್ಚಾಯಿತು. ಪತಿವ್ರತೆಯಾದ ಸತಿಯ ಪಾದವನ್ನಷ್ಟೇ ನೋಡಿ ಮನ್ಮಥವಿಕಾರವುಳ್ಳವನಾದ ಬ್ರಹ್ಮ, ಅವಳ ಮುಖವನ್ನು ನೋಡಲುದ್ಯುಕ್ತನಾದ. ಆದರೆ ಸತೀದೇವಿ ತನ್ನ ಮುಖವನ್ನು ಮುಚ್ಚಿಕೊಂಡಿದ್ದಳು. ಹೇಗಾದರೂ ಸತಿಯ ಮುಖವನ್ನು ನೋಡಲೇಬೇಕೆಂಬ ದುರಾಸೆಯಿಂದ ಬ್ರಹ್ಮ ಒಂದು ಉಪಾಯವನ್ನು ಮಾಡಿದ. •

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಎರಡು ಪ್ರತ್ಯೇಕ ಸ್ಕ್ರೀನ್‌ಶಾಟ್‌ಗಳನ್ನು ಹೊಂದಿರುವ ಟ್ವೀಟ್ ವೈರಲ್ ಆಗಿದೆ. ಮೊದಲನೇ ಸ್ಕ್ರೀನ್‌ಶಾಟ್ ವಾಟ್ಸ್ಆ್ಯಪ್ ಗುಂಪಿನಲ್ಲಿ ನಡೆದಿರುವ ಸಂಭಾಷಣೆಯದ್ದಾಗಿದೆ. 'ರಮಾದೇವಿ ಪೊಲೀಸ್ ಠಾಣೆಗೆ ಬೆಂಕಿ ಹಚ್ಚೋಣ' ಎಂಬ ಸಂದೇಶವನ್ನು ಈ ಸ್ಕ್ರೀನ್‌ಶಾಟ್‌ನಲ್ಲಿ ಎದ್ದುಕಾಣುವಂತೆ ತೋರಿಸಲಾಗಿದೆ. ಎರಡನೆಯದು ಟ್ರೂಕಾಲರ್ ಮೂಲಕ ಡಯಲ್ ಆಗಿರುವ ದೂರವಾಣಿ ಸಂಖ್ಯೆ ಮತ್ತು ವ್ಯಕ್ತಿಯ ಹೆಸರು ಇರುವ ಸ್ಕ್ರೀನ್‌ಶಾಟ್. ಆಯುಷ್ ಠಾಕೂರ್ ಎಂಬ ಹೆಸರಿನಲ್ಲಿ ಸಂದೇಶ ಇದೆ. ಆದರೆ ಟ್ರೂಕಾಲರ್ ಸ್ಕ್ರೀನ್‌ಶಾಟ್‌ನಲ್ಲೂ ಅದೇ ಮೊಬೈಲ್ ಸಂಖ್ಯೆ ಶಮಿ ಅಸ್ಲಮ್ ಎಂಬವರ ಹೆಸರಿನಲ್ಲಿ ಇದೆ. ಅಗ್ನಿಪಥ ಹೋರಾಟದ ಹೆಸರಿನಲ್ಲಿ ಮುಸ್ಲಿಮರ ಗುಂಪೊಂದು ಉತ್ತರಪ್ರದೇಶದಲ್ಲಿ ಗಲಭೆಗೆ ರೂಪುರೇಷೆ ತಯಾರಿಸಿದೆ ಎಂಬ ಮಾಹಿತಿಯೊಂದಿಗೆ ಟ್ವೀಟ್ ಮಾಡಲಾಗಿದೆ.

ಸ್ಕ್ರೀನ್‌ಶಾಟ್‌ಗಳ ಜೊತೆ ನೀಡಲಾಗಿರುವುದು ತಿರುಚಲಾದ ಮಾಹಿತಿ ಎಂದು 'ದಿ ಲಾಜಿಕಲ್ ಇಂಡಿಯನ್' ವೇದಿಕೆ ವರದಿ ಮಾಡಿದೆ. ವಾಟ್ಸ್ಆ್ಯಪ್ ಸಂಭಾಷಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆಯುಷ್ (20) ಮತ್ತು ಇತರ ಐವರನ್ನು ಬಂಧಿಸಲಾಗಿದೆ ಎಂದು ಕಾನ್ಪುರ ನಗರ ಪೊಲೀಸ್ ಆಯುಕ್ತರು ತಿಳಿಸಿದ್ದಾರೆ. ವಾಟ್ಸ್ಆ್ಯಪ್ ಸಂಭಾಷಣೆಯಲ್ಲಿ ನಮೂದಾಗಿರುವ ಮೊಬೈಲ್ ಸಂಖ್ಯೆ ಆಯುಷ್‌ನದ್ದೇ. ಆತನ ಟ್ವಿಟರ್ ಖಾತೆಯೂ ಅದೇ ಸಂಖ್ಯೆ ಜೊತೆ ಜೋಡಣೆಯಾಗಿದೆ. ಶಮಿ ಎಂಬುವವರು ಈ ಮೊಬೈಲ್ ಸಂಖ್ಯೆಯನ್ನು 2010ರ ಮೊದಲು ಬಳಸುತ್ತಿದ್ದರು. ಹಾಗಾಗಿ ಟ್ರೂಕಾಲರ್ ಶಮಿ ಅವರ ಹೆಸರನ್ನು ತೋರಿದೆ. ಈ ಅಂಶವನ್ನು ಬಳಸಿಕೊಂಡು ದುಷ್ಕರ್ಮಿಗಳು ಸುಳ್ಳು ಸುದ್ದಿ ಹಬ್ಬಿಸಿದ್ದಾರೆ ಎಂದು ದಿ ಲಾಜಿಕಲ್ ಇಂಡಿಯನ್ ವರದಿಯಲ್ಲಿ ವಿವರಿಸಲಾಗಿದೆ.

ಗುಂಡಣ್ಣ

ಕೆಸರು ದಾರಿಯ ಪಯಣ

ಸಿರಿಮಾತ್ರಕೇನಲ್ಲ, ಪೆಣ್ ಮಾತ್ರಕೇನಲ್ಲ|
ಕರುಬಿ ಜನ ಕೆಸರು ದಾರಿಯಲಿ ಸಾಗುವುದು||
ಬಿರುದ ಗಳಿಸಲಿಕೆ ತಪ, ಹೆಸರ ಪಸರಿಸಲೆತಪ|
ದುರಿತಗಳ್ಗೆಣೆಯುಂಟೆ? – ಮಂಕುತಿಮ್ಮ ||657||

ಪದ-ಅರ್ಥ: ಸಿರಿಮಾತ್ರಕೇನಲ್ಲ = ಸಿರಿಮಾತ್ರಕೆ + ಏನಲ್ಲ, ಪೆಣ್ = ಹೆಣ್ಣು, ಕರುಬಿ = ಹೊಟ್ಟೆಕಿಚ್ಚುಪಟ್ಟು, ಪಸರಿಸಲೆತಪ = ಪಸರಿಸಲು + ತಪ, ದುರಿತಗಳ್ಗೆಣೆಯುಂಟೆ = ದುರಿತಗಳ್ಗೆ (ಕೆಟ್ಟತನಗಳಿಗೆ) + ಎಣೆಯುಂಟೆ.

ವಾಚ್ಯಾರ್ಥ: ಬರೀ ಹಣಕ್ಕಾಗಿಯಲ್ಲ, ಹೆಣ್ಣಿಗಾಗಿಯಲ್ಲ, ಜನ ಹೊಟ್ಟೆಕಿಚ್ಚಿನಿಂದ ಕೆಸರಿನ ದಾರಿಯಲ್ಲಿ ಸಾಗುತ್ತಿರುವುದು. ಬಿರುದುಗಳನ್ನು ಪಡೆಯಲು ಪ್ರಯತ್ನ, ಹೆಸರನ್ನು ಹರಡಲು ತಪಸ್ಸು, ಇಂಥ ಕೆಟ್ಟತನಗಳಿಗೆ ಮಿತಿಯುಂಟೆ?

ವಿವರಣೆ: ಇತಿಹಾಸದ, ಪುರಾಣದ ಪುಟಗಳನ್ನು ತಿರುವಿ ನೋಡಿದರೆ ಐಶ್ವರ್ಯಕ್ಕಾಗಿ, ಹೆಣ್ಣಿಗಾಗಿ ನಡೆದ ಅನಾಹುತಗಳಿಗೆ ಕೊನೆಯೇ ಇಲ್ಲ. ಸ್ಪಾರ್ಟಾದ ರಾಣಿ, ಅಪರೂಪದ ಸುಂದರಿ, ಹೆಲೆನ್‌ಳನ್ನು ಟ್ರೋಜನ್ ರಾಜಕುಮಾರ ಪ್ಯಾರಿಸ್ ಅಪಹರಿಸಿಕೊಂಡು ಹೋದ. ಅದರ ಪರಿಣಾಮ ಟ್ರೋಜನ್ ಮಹಾಯುದ್ಧ. ಲಕ್ಷಾಂತರ ಜನರ ಆಹುತಿಯಾಯಿತು.

ಇಂದ್ರಪ್ರಸ್ಥದಲ್ಲಿ ರಾಜಸೂಯ ಯಾಗದ ನಂತರ ಧರ್ಮರಾಜನ ಶ್ರೀಮಂತಿಕೆ ದುರ್ಯೋಧನನ ಹೊಟ್ಟೆಯಲ್ಲಿ ಕಿಚ್ಚನ್ನೆಬ್ಬಿಸಿತು. ಮೊದಲೇ ಇದ್ದ ದ್ವೇಷ ಭುಗಿಲೆಂದಿತು. ಆ ದ್ವೇಷ ಸಾಧನೆಗೆ ಕುರುಕ್ಷೇತ್ರ ಯುದ್ಧ, ಅಪಾರ ಪ್ರಾಣಹಾನಿ.

ಕಗ್ಗ, ಹೆಣ್ಣಿಗಾಗಿ, ಹಣಕ್ಕಾಗಿ ಅಸೂಯೆಯಿಂದ ಹೋರಾಡುವುದನ್ನು ಕೆಸರು ದಾರಿ ಎನ್ನುತ್ತದೆ. ಅದು ನಿಜವಾಗಿಯೂ ಕೆಸರಿನ ದಾರಿ. ಅದರಲ್ಲಿ ನಡೆಯುವವ ಭದ್ರವಾಗಿ ಕಾಲೂರಲಾರ, ಜಾರಿ ಬೀಳುವ ಸಾಧ್ಯತೆಗಳೇ ಹೆಚ್ಚು. ಅದಲ್ಲದೆ ಮನುಷ್ಯ ಕೆಸರಿನಲ್ಲಿ ನಡೆದಾಗ ಯಾರೂ ಅವರ ಹತ್ತಿರ ಬರುವುದಿಲ್ಲ. ಅವನ ಬಳಿ ಯಾರು ಹೋದರೂ ಅವರಿಗೂ ಕೆಸರು ತಗುಲುವುದು ಖಂಡಿತ.

ಕಗ್ಗ ಹೇಳುತ್ತದೆ, ಜನ ಹೀಗೆ ಕೆಸರು ದಾರಿಯಲ್ಲಿ ಸಾಗುವುದು ಕೇವಲ ಹಣಕ್ಕಾಗಿ ಮತ್ತು ಹೆಣ್ಣಿಗಾಗಿ ಅಲ್ಲ. ಬಹಳ ಜನ ಬೆನ್ನುಹತ್ತಿ ಓಡಾಡುವುದು ಬಿರುದುಗಳನ್ನು ಗಳಿಸಲಿಕ್ಕೆ ಮತ್ತು ತಮ್ಮ ಹೆಸರನ್ನು ಪಸರಿಸಲಿಕ್ಕೆ. ನಾವೆಲ್ಲ ಕಂಡಿದ್ದೇವೆ, ಪ್ರಶಸ್ತಿಗಳನ್ನು ಪಡೆಯುವುದಕ್ಕೆ ಎಷ್ಟು ಒದ್ದಾಡುತ್ತಾರೆ ಜನ! ಮೊದಲು ಡಾಕ್ಟರೇಟ್ ಪಡೆಯಲು ಎಷ್ಟೊಂದು ಪರಿಶ್ರಮಪಡಬೇಕಿತ್ತು. ಆ ಪ್ರಶಸ್ತಿಗೆ ಒಂದು ಬೆಲೆ ಇತ್ತು. ಈಗ, ಒಂದು ದೊಡ್ಡ ಸಭಾಗ್ರಹದಲ್ಲಿ ಜನರನ್ನು ಕೂಡಿ ಹಾಕಿ, ಇಷ್ಟು ಹಣ ಕೊಟ್ಟರೆ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ಹಂಚುವ ಕಾರ್ಯಗಳು ನಡೆದದ್ದು ವಾಸ್ತವ. ಸಣ್ಣಸಣ್ಣ ದಾನಗಳನ್ನು ಮಾಡಿ ಬಹುದೊಡ್ಡ ಹೆಸರು ಗಳಿಸುವ ಪ್ರಯತ್ನಗಳು, ಯಾರ ಸಾಧನೆಗೋ, ತಮ್ಮ ಹೆಸರು ಜೋಡಿಸಿಕೊಂಡು ಸುಲಭದಲ್ಲಿ ಹೆಸರು ಪಡೆಯುವ ತಂತ್ರಗಳು, ಇವೆಲ್ಲ ದುರಿತಗಳೇ, ಕೆಟ್ಟ ಕೆಲಸಗಳೇ.

ಕಗ್ಗದ ಸೂಚನೆಯೆಂದರೆ, ಈ ದುರಿತ ಕಾರ್ಯಗಳು ಬೇಕೇ? ಹೆಸರಿಗೋಸ್ಕರ ಈ ಒದ್ದಾಟ, ಸಂಕಟದ ಅವಶ್ಯಕತೆ ಇದೆಯೇ? ಅದೊಂದು ಕೀಳಾದ ಕೆಸರುದಾರಿಯ ಪ್ರಯಾಣ. ಸ್ವಂತಕ್ಕೂ ಸುಖವಿಲ್ಲ, ಪ್ರಪಂಚದ ದೃಷ್ಟಿಯಲ್ಲೂ ಅಸಹ್ಯ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜೂನ್ 24, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಏಕಾದಶಿ ಗಂ. 23-13 ನಕ್ಷತ್ರ: ಅಶ್ವಿನಿ ಗಂ. 08-04 ಯೋಗ: ಸುಕರ್ಮ ಗಂ. 29-13 ಕರಣ: ಬವ ಗಂ. 10-24, ಮಿಥುನ ಮಾಸದ 09 ನೇ ದಿನ.

ರಾಹುಕಾಲ: ಬೆಳಿಗ್ಗೆ 10:30 – 12:00
ಸೂರ್ಯೋದಯ: 06-09 **ಸೂರ್ಯಾಸ್ತ:** 06-57
ಮುಸ್ಲಿಂ ದಿನಾಂಕ: 24 ಜುಲ್ಕಾಯದ್
ದಿನ ವಿಶೇಷ: ಯೋಗಿನಿ ಏಕಾದಶಿ
ಅದೃಷ್ಟ ಸಂಖ್ಯೆ: 4, 11

ಮೇಷ: ನಿರ್ಮಾಣ ಕಾರ್ಯದಲ್ಲಿ ತೊಡಗಿರುವವರಿಗೆ ಈ ದಿನ ಒಂದು ಆಶಾಕಿರಣ ದೊರಯುತ್ತದೆ. ನಿಮ್ಮ ಕೆಲಸದಲ್ಲಿ ತೊಡಕು ತಾಪತ್ರಯವನ್ನು ಉಂಟು ಮಾಡುವ ಶತ್ರುಗಳ ಪ್ರಯತ್ನ ವಿಫಲವಾಗುವುದು.

ವೃಷಭ: ಕಾನೂನು ವಿದ್ಯಾರ್ಥಿಗಳಿಗೆ ಹೆಚ್ಚಿನ ಪರಿಶ್ರಮ ಅಗತ್ಯವಿದ್ದು ಅನುಭವಕ್ಕೆಂದು ಹಿರಿಯ ವಕೀಲರ ಸಹಾಯಕನಾಗಿ ಸೇರಿಕೊಳ್ಳುವುದು ಉತ್ತಮ. ಕನಸುಗಳನ್ನು ಸಾಕಾರಗೊಳಿಸಲು ಅವಿರತ ಶ್ರಮ ಇರಲಿ.

ಮಿಥುನ: ತುಂಬಾ ಆತ್ಮೀಯರಂತೆ ಮುಖವಾಡ ಹೊಂದಿರುವ ನಿಮ್ಮ ಅಕ್ಕ-ಪಕ್ಕದ ಹಿತಶತ್ರುಗಳ ಬಣ್ಣ ನಿಮ್ಮೆದುರು ಬಯಲಾಗಲಿದೆ. ಅವಿವಾಹಿತ ಹೆಣ್ಣು ಮಕ್ಕಳಿಗೆ ಬಹಳ ದಿನಗಳಿಂದ ನಿರೀಕ್ಷಿಸಿದ ಸಂಬಂಧಗಳು ಕೂಡಿ ಬರಲಿದೆ.

ಕರ್ಕಾಟಕ: ವ್ಯಾವಹಾರಿಕವಾದ ಸುಖ ಸಂಪತ್ತು ಅಧಿಕ ಮಟ್ಟದಲ್ಲಿ ಇದ್ದರೂ ಭವಿಷ್ಯದ ಚಿಂತೆಯು ನಿದ್ದೆಗೆಡಿಸುತ್ತದೆ. ವಸ್ತ್ರ ವಿನ್ಯಾಸಗಾರರಿಗೆ, ಚಿತ್ರಕಲೆ, ಕಥೆ-ಕವನಗಳ ಬರವಣಿಗೆಯಲ್ಲಿ ಹೆಚ್ಚಿನ ಆಸಕ್ತಿ ಮೂಡಲಿದೆ.

ಸಿಂಹ: ಅಪೇಕ್ಷಿಸಿದ ಅವಶ್ಯಕ ವಸ್ತುಗಳ ಗಳಿಕೆಯಿಂದ ಸಂತೋಷ ವೃದ್ಧಿಯಾಗುವುದು. ಮಕ್ಕಳ ವಿದ್ಯಾಭ್ಯಾಸದ ವಿಚಾರದಲ್ಲಿ ಕಾಳಜಿ ತೋರುವ ಅನಿವಾರ್ಯತೆ ಹೆಚ್ಚಲಿದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿ.

ಕನ್ಯಾ: ಆರಕ್ಷಕ ಸೇವೆಯವರಿಗೆ ಈ ದಿನ ಹೆಚ್ಚಿನ ಜವಾಬ್ದಾರಿ ಇರುವುದು. ಸಮಾಧಾನಕರವಾದ ವಾತಾವರಣ ಉಂಟಾಗಿ ಸುಖ-ಶಾಂತಿ ವೃದ್ಧಿಯಾಗುವುದು.

ತುಲಾ: ಸಾಂಬಾರು ಪದಾರ್ಥದ ಅಥವಾ ಪರಿಮಳ ದ್ರವ್ಯಗಳ ರಫ್ತು ವ್ಯಾಪಾರಗಳು ಲಾಭ ತರಲಿದೆ. ಇಂದು ಮೇಲಧಿಕಾರಿಯಿಂದಲೋ, ಗುರು-ಹಿರಿಯರಿಂದಲೋ ಪ್ರಶಂಸೆಯ ಮಾತುಗಳು ಕೇಳಿಬರಲಿದೆ.

ವೃಶ್ಚಿಕ: ಹಲವು ದಿನದ ಬಳಿಕ ನಿಮ್ಮ ಅತಿಯಾದ ಖರ್ಚು ವೆಚ್ಚಗಳು ಈ ದಿನ ತಗ್ಗುವುದು. ನೆರೆಹೊರೆಯವರೊಂದಿಗೆ ಮತ್ತು ಸಹೋದರಿಯವರೊಂದಿಗೆ ಸೌಹಾರ್ದದಿಂದ ವರ್ತಿಸಿ.

ಧನು: ಮನೆಯ ಜವಾಬ್ದಾರಿಗಳು ಹೆಚ್ಚಲಿದೆ. ಆದ್ದರಿಂದ ನಿಮ್ಮ ಕೆಲಸ ಹಾಗೂ ವೃತ್ತಿ ಜೀವನದ ಬಗ್ಗೆ ಗಂಭೀರ ಆಲೋಚನೆ ಮಾಡುವುದು ಬಹಳ ಮುಖ್ಯ. ರಿಯಾಯಿತಿ ಮಾರಾಟಗಳಿಂದ ಮೋಸ ಹೋಗುವ ಸಾಧ್ಯತೆ.

ಮಕರ: ವೃತ್ತಿ ಕ್ಷೇತ್ರದಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ನಿಭಾಯಿಸಬೇಕಾಗುತ್ತದೆ. ಆಫೀಸಿನ ಕೆಲಸದ ಒತ್ತಡದಲ್ಲಿ ಮನೆಯ ಕೆಲಸಗಳತ್ತ ಗಮನ ಕಡಿಮೆಯಾಗುವುದು.

ಕುಂಭ: ಕೊಟ್ಟಂಥ ಮಾತನ್ನು ಕಳೆದುಕೊಳ್ಳಬೇಕಾದಂಥ ಪರಿಸ್ಥಿತಿ ಎದುರಾಗಬಹುದು. ಆದ್ದರಿಂದ ಸೂಕ್ಷ್ಮವಾಗಿ ಜಾಗರೂಕತೆಯಿಂದ ವ್ಯವಹರಿಸಿ. ಚಲನಚಿತ್ರರಂಗದವರಿಗೆ ಒಳ್ಳೆಯ ಅವಕಾಶ ದೊರೆಯುವುದು.

ಮೀನ: ಔಷಧಿಗಳು ಅಡ್ಡ ಪರಿಣಾಮ ಬೀರುವಂತಾಗಬಹುದು. ವೈದ್ಯರ ಸಲಹೆ ಇಲ್ಲದೆ ಔಷಧಿಗಳನ್ನು ಸೇವಿಸಬೇಡಿ. ಆಫೀಸಿನ ಕೆಲಸಕ್ಕಾಗಿ ವಿದೇಶಯಾನ ಮಾಡಬೇಕಾಗಬಹುದು.

ಪದಬಂಧ 4998

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಜರಿಯದೇ ವಹಿಸಿಕೊಂಡಿರುವ ಹೊಣೆಗಾರಿಕೆ! (4)
3.ತೊಡಕು ಹೀಗೆ ಬಂದಿದೆ (3)
4.ವೇದೋಕ್ತ ವಿಧಿಗಳನ್ನು ಮಾಡಿಸುವವನು (4)
6.ಒಲುಮೆಯಿಂದ ಮಾಡಿದ ಒತ್ತಾಯ! (3)
8.ನಿರಾಕಾರಣದಲ್ಲಿರುವ ಉದ್ದೇಶ ಗೊತ್ತಾಯಿತೇ? (3)
9.ಬೆಂದಕ್ಕಿ ಕಾಳು (3)
10.ಬೆಳ್ಳುಳ್ಳಿಯನ್ನು ಹೀಗೂ ಹೇಳುವರು (3)
12.ನಡುವೆ ಸರ ಧರಿಸಿ ಮಾಡಿದ ವ್ಯಾಯಾಮ (4)
14.ಆಳವಾದ ಗುಂಡಿ (3)
15.ಸೂಕ್ಷ್ಮವಾದ ಎಳೆಯಿದು (4)

ಮೇಲಿಂದ ಕೆಳಕ್ಕೆ
1.ಜಟಿಲತೆಯಿಂದ ಸಂಗ್ರಹಿಸಿದ ನೀರು (2)
2.ಪುಢಾರಿ ಜೊತೆಗಿರುವ ಶತ್ರು (2)
3.ಹಡಗು ಇಲ್ಲಿ ಕಾಣುತ್ತಿದೆ (3)
5.ತಾರುಣ್ಯವನ್ನು ಹೊಂದಿದವನು (3)
7.ಮಡಿಕೆಗಳನ್ನೊಳಗೊಂಡಿರುವ ಮಸ್ತಿಷ್ಕ (3)
8.ಕಾದ ನಂತರ ಕಾಣಿಸಿದ ಇನಿಯ! (3)
9.ಸಡಿಲವಾದುದನ್ನು ಹೀಗೆನ್ನಿ (3)
11.ನರಿಯಲ್ಲಿ ಉತ್ತಮ ಜಾತಿ ಜೇನುತುಪ್ಪ ಸಿಕ್ಕಿತೆ? (3)
13.ಮೂಗಿನ ಆಭರಣವಿಲ್ಲಿ ತಿರುವುಮುರುವಾಗಿದೆ (2)
14.ಮುಖ್ಯ ಬೆಳೆಯ ನಡುವೆ ಬೆಳೆಯುವ ಹುಲ್ಲು (2)



4997ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕರ್ಣಧಾರ 2.ಮಹಿಷ 4.ಸುದಾಮ 6.ಉಯಿಲು 7.ವಿರಹತಾಪ 10.ಸಾರಣೆ 11.ಧಿಮಾಕು 13.ನಗರ 14.ಪರಭಾರೆ

ಮೇಲಿಂದ ಕೆಳಕ್ಕೆ: 1.ಕಡಸು 2.ಮಡಿಲು 3.ಷರಬತ್ತು 5.ಮನವಿ 6.ಉದಾಹರಣೆ 8.ಪರಿಧಿ 9.ಪ್ರಹಸನ 10.ಸಾವಿರ 12.ಕುದುರೆ

ಸುಡೊಕು 5384

	9	8			5		6	
2			4			8		5
	4	5			9		3	
4	6				7			
				4		1		6
8		7	5				4	
		4			2		1	7
7			1			6		
	8		7			2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5383 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಷೇರುಪೇಟೆ ವಹಿವಾಟು 443



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	15,413
ಇಂದಿನ ಅಂತ್ಯ	15,556
▲	143
ದಿನದ ಗರಿಷ್ಠ	15,628

ವಿನಿಮಯ ದರ

$ ಡಾಲರ್	78.32
£ ಪೌಂಡ್	95.54
€ ಯುರೊ	82.38
¥ ಯೆನ್ (100ಕ್ಕೆ)	58

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹535
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹537

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1545)
ಸೋಯಾ (ರಿಫೈನ್ಡ್)	₹1350 (1335)
ಸೂರ್ಯಕಾಂತಿ (ರಿಫೈನ್ಡ್)	₹1680 (1700)
ಪಾಮೋಲಿನ್	₹1265 (1277)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹322-598
ದ್ವಿತಳಿ (ಬಿ.ವಿ)	₹400-888

ಎನ್.ಆರ್.ಪುರ ರಬ್ಬರ್

ಆರ್ಎಸ್ಎಸ್-4	₹173
ಆರ್ಎಸ್ಎಸ್-5	₹165
ಗುಡ್ ಲಾಟ್	₹157

(ಪ್ರತಿ ಕೆ.ಜಿಗೆ)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1300-1500
ಮಧ್ಯಮ	₹1000-1300
ಸಣ್ಣ	₹600-1000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿ ನೆನಪು



ಶ್ರೀ ಡಾ|| ಹೆಚ್.ಚೌಡಯ್ಯನವರು
ಮರಣ: 24-06-2021
ಸದಾ ಸ್ಮರಿಸುವ: ಪತ್ನಿ ಮತ್ತು ಕುಟುಂಬ ವರ್ಗದವರು

ಪರಿಹಾರ: ಬಿರುಸಿನ ಚರ್ಚೆ ಸಾಧ್ಯತೆ

ನವದೆಹಲಿ (ಪಿಟಿಐ): ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ರಾಜ್ಯಗಳಿಗೆ ಆಗಬಹುದಾದ ವರಮಾನ ನಷ್ಟವನ್ನು ಭರ್ತಿ ಮಾಡಿಕೊಡುವುದನ್ನು ಮುಂದುವರಿಸಬೇಕು ಎಂದು ಬಿಜೆಪಿಯ ವಿರೋಧ ಪಕ್ಷಗಳ ಆಳ್ವಿಕೆ ಇರುವ ರಾಜ್ಯಗಳು ಬಲವಾಗಿ ಆಗ್ರಹಿಸುತ್ತಿವೆ. ಇದರಿಂದಾಗಿ, ಮುಂದಿನ ವಾರ ನಡೆಯಲಿರುವ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಬಿರುಸಿನ ಚರ್ಚೆ ನಡೆಯುವ ನಿರೀಕ್ಷೆ ಇದೆ.

ಜಿಎಸ್‌ಟಿ ಪರಿಹಾರ ನಿಧಿಯಲ್ಲಿನ ಕೊರತೆ ತುಂಬಿಕೊಳ್ಳಲು ಕೇಂದ್ರವು 2020-21ರಲ್ಲಿ ಸಾಲ ಮಾಡಿ, ರಾಜ್ಯಗಳಿಗೆ ಒಟ್ಟು ₹ 1.1 ಲಕ್ಷ ಕೋಟಿ ಬಿಡುಗಡೆ ಮಾಡಿದೆ. 2021-22ರಲ್ಲಿ ₹ 1.59 ಲಕ್ಷ ಕೋಟಿ ಬಿಡುಗಡೆ ಮಾಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	470
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಚಿತ್ರದುರ್ಗ	
ಅಪಿ	49339-49779
ಬೆಟ್ಟೆ	38419-38889
ಕೆಂಪುಗೋಟು	27709-28110
ರಾಶಿ	48829-49269
ಕುಮಟ	
ಚಿಪ್ಪು	23509-32369
ಕೋಕ	15099-30269
ಹೊಸಚಾಲಿ	35301-40169
ಪುತ್ತೂರು	
ಕೋಕ	11000-26000
ಹೊಸತು	30500-43000
ಶಿವಮೊಗ್ಗ	
ಬೆಟ್ಟೆ	51530-52969
ಗೊರಬಲು	19000-37969
ರಾಶಿ	45000-49669
ಸರಕು	55069-80070
ಸಿದ್ದಾಪುರ	
ಬಿಳಿಗೋಟು	24169-32299
ಚಾಲಿ	36399-40009
ಕೋಕ	22769-32869
ಕೆಂಪುಗೋಟು	30299-32099
ರಾಶಿ	46899-48799
ತಟ್ಟಿಬೆಟ್ಟೆ	37099-46419
ಶಿರಸಿ	
ಬೆಟ್ಟೆ	36799-46699
ಬಿಳಿಗೋಟು	22309-33878
ಚಾಲಿ	33939-40571
ರಾಶಿ	42309-48909
ಯಲ್ಲಾಪುರ	
ಬಿಳಿಗೋಟು	26899-32399
ಚಾಲಿ	35380-40269
ಕೋಕ	18212-30050
ಕೆಂಪುಗೋಟು	31699-33899
ರಾಶಿ	46199-52629
ತಟ್ಟಿಬೆಟ್ಟೆ	36799-45319

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16500	16100	16100	233.20 ಸೆಂಟ್ಸ್
ಎಸಿ	9100	8600	8900	
ಆರ್‌ಪಿ	9750	9850	9975	ಲಂಡನ್
ಆರ್‌ಸಿ	4730	4500	4600	2087 ಡಾಲರ್ಸ್

ಹಿಂಜರಿತ ಎದುರಾಗಬಹುದು ಎಂದ ಅಮೆರಿಕದ ಫೆಡರಲ್ ರಿಸರ್ವ್ ಅಧ್ಯಕ್ಷ

ಆರ್ಥಿಕ ಹಿಂಜರಿತ ಸಾಧ್ಯತೆ ಶೇ 50ರಷ್ಟು

ಬೆಂಗಳೂರು (ರಾಯಿಟರ್ಸ್): ಜಾಗತಿಕ ಮಟ್ಟದಲ್ಲಿ ಆರ್ಥಿಕ ಹಿಂಜರಿತ ಶುರುವಾಗುವ ಸಾಧ್ಯತೆಯು ಶೇಕಡ 50ರಷ್ಟು ಇದೆ ಎಂದು ಸಿಟಿಗ್ರೂಪ್ ಅಂದಾಜು ಮಾಡಿದೆ.

ಜಗತ್ತಿನ ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಹಣದುಬ್ಬರ ಪ್ರಮಾಣ ಕಡಿಮೆ ಮಾಡಲು ಬಡ್ಡಿ ದರ ಜಾಸ್ತಿ ಮಾಡುತ್ತಿರುವ ಸಂದರ್ಭದಲ್ಲಿ ಸಿಟಿಗ್ರೂಪ್ ಈ ಅಂದಾಜು ಮಾಡಿದೆ.

'ಹಿಂಜರಿತದ ಅಪಾಯವು ಹೆಚ್ಚೆಚ್ಚು ಅನುಭವಕ್ಕೆ ಬರುತ್ತಿದೆ' ಎಂದು ಸಿಟಿಗ್ರೂಪ್‌ನ ವಿಶ್ಲೇಷಕರು ಬುಧವಾರ ಹೇಳಿದ್ದಾರೆ. 'ಹಣದುಬ್ಬರ ಕಡಿಮೆ ಮಾಡುವಾಗ ಬೆಳವಣಿಗೆಯ ಪ್ರಮಾಣವೂ ತಗ್ಗುತ್ತದೆ ಎಂಬುದನ್ನು ಹಿಂದಿನ ಅನುಭವ ಹೇಳುತ್ತದೆ. ಆರ್ಥಿಕ ಹಿಂಜರಿತ ಉಂಟಾಗುವ ಸಾಧ್ಯತೆಯು ಶೇ 50ರ ಸಮೀಪ ಬಂದಿದೆ' ಎಂದು ವಿಶ್ಲೇಷಕರು ಹೇಳಿದ್ದಾರೆ.

ಮುಖ್ಯಾಂಶಗಳು
- ಹಿಂಜರಿತದ ಅಪಾಯ ಅನುಭವಕ್ಕೆ ಹೆಚ್ಚು ಬರುತ್ತಿದೆ: ತಜ್ಞರು
- ಬಿಗಿ ಹಣಕಾಸು ನೀತಿಯ ಪರಿಣಾಮ
- ಯೂರೊ ವಲಯದಲ್ಲಿ ವರ್ಷಾಂತ್ಯಕ್ಕೆ ಆರ್ಥಿಕ ಹಿಂಜರಿಕೆ ಸಾಧ್ಯತೆ

ಅಮೆರಿಕದ ಫೆಡರಲ್ ರಿಸರ್ವ್ ಸೇರಿದಂತೆ ಹಲವು ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಸಾಲದ ಮೇಲಿನ ಬಡ್ಡಿ ದರವನ್ನು ತೀವ್ರವಾಗಿ ಹೆಚ್ಚಳ ಮಾಡಿವೆ. 'ನಾವು ಆರ್ಥಿಕ ಹಿಂಜರಿತಕ್ಕೆ ಇಂಬು ಕೊಡುವ ಯತ್ನ ಮಾಡುತ್ತಿಲ್ಲ. ಬದಲಿಗೆ, ಹಣದುಬ್ಬರವನ್ನು ನಿಯಂತ್ರಣಕ್ಕೆ ತರುವ ಬದ್ಧತೆಯನ್ನು ಹೊಂದಿದ್ದೇವೆ' ಎಂದು ಫೆಡರಲ್ ರಿಸರ್ವ್ ಅಧ್ಯಕ್ಷ ಜೆರೋಮ್ ಪೋವೆಲ್ ಬುಧವಾರ ಹೇಳಿದ್ದಾರೆ. ಅಲ್ಲದೆ, ಆರ್ಥಿಕ ಹಿಂಜರಿತದ ಸಾಧ್ಯತೆ ಖಂಡಿತವಾಗಿಯೂ ಇದೆ ಎಂದು ಕೂಡ ಪೋವೆಲ್ ಹೇಳಿದ್ದಾರೆ.

'ಜಾಗತಿಕ ಅರ್ಥ ವ್ಯವಸ್ಥೆಯು ಈಗಿನ ಹಂತದಲ್ಲಿ ಮಂದಗತಿಗೆ ತಿರುಗುವ ಹಲವು ಸೂಚನೆಗಳನ್ನು ನೀಡುತ್ತಿದೆ. ಪೂರೈಕೆ ವ್ಯವಸ್ಥೆಗೆ ಬಿದ್ದ ಏಟುಗಳು ಮಾತ್ರವೇ ಅಲ್ಲದೆ, ಕೇಂದ್ರೀಯ ಬ್ಯಾಂಕ್‌ಗಳ ಹಣಕಾಸು ನೀತಿಯನ್ನು ಬಿಗಿಗೊಳಿಸಿದ್ದು, ಹೆಚ್ಚಿನ ಹಣದುಬ್ಬರವು ಗ್ರಾಹಕರ ಮೇಲೆ ಬೀರುವ ಪರಿಣಾಮಗಳಿಂದಾಗಿಯೂ ಹೀಗಾಗುತ್ತಿದೆ' ಎಂದು ಸಿಟಿಗ್ರೂಪ್ ಹೇಳಿದೆ.

ಬ್ರಿಟನ್ನಿನ ಬಹುರಾಷ್ಟ್ರೀಯ ಬ್ಯಾಂಕ್ ಆಗಿರುವ ಬಾರ್ಕ್ಲೇಸ್ ಕೂಡ, ಅಭಿವೃದ್ಧಿ ಹೊಂದಿರುವ ಅರ್ಥ ವ್ಯವಸ್ಥೆಗಳ ಬೆಳವಣಿಗೆ ದರವು 2023ರಲ್ಲಿ ಶೇಕಡ 1ಕ್ಕೆ ಇಳಿಕೆ ಆಗಲಿದೆ ಎಂದು ಅಂದಾಜು ಮಾಡಿದೆ.

ಪ್ರಸಕ್ತ ಹಣಕಾಸು ವರ್ಷದ ನಾಲ್ಕನೆಯ ತ್ರೈಮಾಸಿಕದಿಂದ ಯೂರೊ ಪ್ರದೇಶವು ('ಯೂರೊ'ವನ್ನು ಕರೆನ್ಸಿಯಾಗಿ ಒಪ್ಪಿಕೊಂಡಿರುವ ದೇಶಗಳು) ಆರ್ಥಿಕ ಹಿಂಜರಿತಕ್ಕೆ ಜಾರುವ ಸಾಧ್ಯತೆ ಇದೆ ಎಂದು ಹೇಳಿದೆ.

2023ರಲ್ಲಿ ಅಮೆರಿಕದ ಅರ್ಥ ವ್ಯವಸ್ಥೆಯ ಬೆಳವಣಿಗೆ ದರವು ಶೇ 1.1ಕ್ಕೆ ಕುಸಿಯಲಿದೆ ಎಂದು ಬಾರ್ಕ್ಲೇಸ್ ಹೇಳಿದೆ. ಅಮೆರಿಕದ ಬೆಳವಣಿಗೆ ದರ 2021ರಲ್ಲಿ ಶೇ 5.7ರಷ್ಟಿತ್ತು.

ಶೇಕಡ 1ರವರೆಗೆ ಗಳಿಕೆ ಕಂಡ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕ

ವಾಹನ, ಐ.ಟಿ. ಷೇರು ಮೌಲ್ಯ ವೃದ್ಧಿ

ಮುಂಬೈ (ಪಿಟಿಐ): ವಾಹನ, ಐ.ಟಿ. ಮತ್ತು ಬ್ಯಾಂಕಿಂಗ್ ವಲಯದ ಷೇರುಗಳ ಗಳಿಕೆಯಿಂದಾಗಿ ದೇಶದ ಷೇರುಪೇಟೆಗಳು ಗುರುವಾರದ ವಹಿವಾಟಿನಲ್ಲಿ ಶೇಕಡ 1ರವರೆಗೆ ಏರಿಕೆ ಕಂಡವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 443 ಅಂಶ ಹೆಚ್ಚಾಗಿ 52,265 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 143 ಅಂಶ ಏರಿಕೆ ಕಂಡು 15,556 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಹಣದುಬ್ಬರ ನಿಯಂತ್ರಿಸಲು ಬಡ್ಡಿ ದರ ಹೆಚ್ಚಳ ಮಾಡುತ್ತಿರುವುದರಿಂದ ಆರ್ಥಿಕ ಹಿಂಜರಿತ ಉಂಟಾಗುವ ಸಾಧ್ಯತೆ ಇದೆ ಎಂದು ಅಮೆರಿಕದ ಫೆಡರಲ್ ರಿಸರ್ವ್ ಅಧ್ಯಕ್ಷ ಜೆರೊಮ್ ಪಾವೆಲ್ ಹೇಳಿದ್ದಾರೆ. ಇದು ಜಾಗತಿಕ ಷೇರುಪೇಟೆಗಳ ವಹಿವಾಟಿನ ಮೇಲೆ ಪರಿಣಾಮ ಬೀರಿದೆ.

'ಯುರೋಪಿನ ಮಾರುಕಟ್ಟೆಗಳು ಆರ್ಥಿಕ ಹಿಂಜರಿತದ ಭಯದಿಂದ ಹೊರಬರಲು ಹೆಣಗಾಡಿದ್ದರಿಂದ ಮಧ್ಯಾಹ್ನದ ವಹಿವಾಟಿನಲ್ಲಿ ಷೇರುಪೇಟೆಗಳು ತಮ್ಮ ಗಳಿಕೆಯಲ್ಲಿ ಒಂದಿಷ್ಟು ಕಳೆದುಕೊಂಡವು. ಆದರೆ, ಅಂತಿಮವಾಗಿ ಗಳಿಕೆಯೊಂದಿಗೆ ವಹಿವಾಟು ಅಂತ್ಯಗೊಳಿಸುವಲ್ಲಿ ಯಶಸ್ವಿಯಾದವು' ಎಂದು ಆನಂದ ರಾಠಿ ಕಂಪನಿಯ ಈಕ್ವಿಟಿ ಸಂಶೋಧನೆಯ ಮುಖ್ಯಸ್ಥ ನರೇಂದ್ರ ಸೋಲಂಕಿ ತಿಳಿಸಿದ್ದಾರೆ.

ವಾಹನ, ಐ.ಟಿ. ಷೇರು ಗಳಿಕೆ (%)

ಮಾರುತಿ	6.33
ಮಹೀಂದ್ರ	4.41
ಏಷ್ಯನ್ ಪೇಂಟ್ಸ್	3.39
ಭಾರ್ತಿ ಏರ್‌ಟೆಲ್	2.96
ಎಚ್‌ಯುಎಲ್	1.94

ಅಮೆರಿಕ ಮತ್ತು ಯುರೋಪ್‌ನ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಹೆಚ್ಚಳ ಮಾಡುತ್ತಿರುವುದರಿಂದಾಗಿ ಜಾಗತಿಕ ಬೆಳವಣಿಗೆಯು ಕುಗ್ಗಲಿದೆ ಎನ್ನುವುದು ಹೂಡಿಕೆದಾರರ ಆತಂಕವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 1.92ರಷ್ಟು ಇಳಿಕೆ ಕಂಡು ಬ್ಯಾರಲ್‌ಗೆ 109.60 ಡಾಲರ್‌ಗೆ ತಲುಪಿತು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ₹ 78.32ರಂತೆ ವಿನಿಮಯಗೊಂಡಿತು. ಡಾಲರ್ ಮೌಲ್ಯ ವೃದ್ಧಿ ಮತ್ತು ವಿದೇಶಿ ಬಂಡವಾಳ ಹೊರಹರಿವಿನಿಂದ ರೂಪಾಯಿ ಮೌಲ್ಯ ಇಳಿಕೆ ಕಂಡಿತು.

'ತೀವ್ರತೆ ಆಧರಿಸಿ ಪ್ರತಿಕ್ರಿಯೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂಜರಿತದ ಸಾಧ್ಯತೆ ಇದೆ ಎನ್ನುವುದು ಮಾರುಕಟ್ಟೆಗೆ ತಿಳಿದಿದೆ. ಹಿಂಜರಿತದ ಸಾಧ್ಯತೆಯನ್ನು ಮಾರುಕಟ್ಟೆಯು ಭಾಗಶಃ ಕಡೆಗಣಿಸಿದೆ; ಸಂಪೂರ್ಣವಾಗಿ ಅಲ್ಲ. ಹಿಂಜರಿತದ ತೀವ್ರತೆಯನ್ನು ಆಧರಿಸಿ ಮಾರುಕಟ್ಟೆಯು ಪ್ರತಿಕ್ರಿಯೆ ನೀಡಲಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ಡಾ.ವಿ.ಕೆ. ವಿಜಯಕುಮಾರ್ ಅಭಿಪ್ರಾಯಪಟ್ಟರು.

'ಹಿಂಜರಿತವು ಸೌಮ್ಯ ಸ್ವರೂಪದ್ದೂ ಅಲ್ಪಾವಧಿಯದ್ದೂ ಆಗಿರಲಿದೆ ಎನ್ನುವ ಸೂಚನೆ ದೊರೆತರೆ ಮಾರುಕಟ್ಟೆಯು ಮೈಕೊಡವಿಕೊಳ್ಳಲಿದ್ದು, ಬಲಗೊಳ್ಳಲಿದೆ. ಒಂದೊಮ್ಮೆ ಹಿಂಜರಿತದ ಸ್ವರೂಪ ತೀವ್ರವಾಗುವ ಸೂಚನೆ ದೊರೆತಲ್ಲಿ ಮಾರುಕಟ್ಟೆಯು ಇನ್ನಷ್ಟು ಕುಸಿತ ಕಾಣಲಿದೆ' ಎಂದು ಅವರು 'ಪ್ರಜಾವಾಣಿ'ಗೆ ವಿವರಿಸಿದರು.

ಕಚ್ಚಾ ತೈಲ ದರ ಯಾವ ಹಾದಿಯಲ್ಲಿ ಸಾಗಲಿದೆ ಎನ್ನುವುದು ಮುಖ್ಯವಾಗಲಿದೆ. ಉಕ್ರೇನ್ ಬಿಕ್ಕಟ್ಟು ಕಡಿಮೆ ಆದರೆ ಮತ್ತು ಕಚ್ಚಾ ತೈಲ ದರ ಇಳಿಕೆ ಕಂಡರೆ, ಆಗ ಹಣದುಬ್ಬರವು ಇಳಿಕೆ ಆಗುವ ನಿರೀಕ್ಷೆಯೊಂದಿಗೆ ಮಾರುಕಟ್ಟೆಯು ಚೇತರಿಕೆ ಕಾಣಲಿದೆ. ಇಂತಹ ಸಂದರ್ಭ ಎದುರಾದಲ್ಲಿ, ಅಮೆರಿಕದ ಫೆಡರಲ್ ರಿಸರ್ವ್, ಮಾರುಕಟ್ಟೆಯು ಈಗ ಆತಂಕಕ್ಕೆ ಒಳಗಾಗಿರುವ ಮಟ್ಟದಲ್ಲಿ ತನ್ನ ಹಣಕಾಸು ನೀತಿಯನ್ನು ಬಲಪಡಿಸುವ ಸಾಧ್ಯತೆ ಇರುವುದಿಲ್ಲ ಎಂದೂ ಅವರು ಹೇಳಿದರು.

ಚಿನ್ನದ ದರ ₹ 133, ಬೆಳ್ಳಿ ₹ 664 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನದ ದರ 10 ಗ್ರಾಂಗೆ ₹ 133ರಷ್ಟು ಇಳಿಕೆಯಾಗಿ ₹ 50,719ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆ ಕೆ.ಜಿಗೆ ₹ 664ರಷ್ಟು ಕಡಿಮೆಯಾಗಿ ₹ 59,781ಕ್ಕೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

23-6-2022

ಜಾವಾ 70/80(ಹೊಸ)	10700-10750
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	9950-10050
ದಪ್ಪ ಗುಜರಾತ್(ಹೊಸ)	10650-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1555)
ಒಂದು ವಾರದ ಡೆಲಿವರಿ	1545 (1550)
ಸೋಯಾ ಕಚ್ಚಾ	1270 (1255)
ಪಾಮ್ ವಾರದ ಡೆಲಿವರಿ	1263 (1275)
ಸೂರ್ಯಕಾಂತಿ ಎಣ್ಣೆ ಕಚ್ಚಾ	1660 (1680)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,750 (51,000)
ಬೆಳ್ಳಿ ಕೆ.ಜಿ 60,050 (60,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಫ್ತಿನ ದೀರ್ಘಾವಧಿ ಗುರಿ ನಿಗದಿಪಡಿಸಿ: ಮೋದಿ

ನವದೆಹಲಿ (ಪಿಟಿಐ): ರಫ್ತು ವಹಿವಾಟಿಗೆ ಸಂಬಂಧಿಸಿದಂತೆ ದೀರ್ಘಾವಧಿ ಗುರಿಗಳನ್ನು ಹಾಕಿಕೊಳ್ಳುವಂತೆ ಹಾಗೂ ಅವುಗಳನ್ನು ಸಾಧಿಸಲು ಇರುವ ಮಾರ್ಗಗಳ ಕುರಿತು ಸರ್ಕಾರಕ್ಕೆ ಸಲಹೆ ನೀಡುವಂತೆ ರಫ್ತುದಾರರು ಮತ್ತು ಉದ್ಯಮ ವಲಯವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಕೋರಿದ್ದಾರೆ.

ವಾಣಿಜ್ಯ ಭವನವನ್ನು ಉದ್ಘಾಟಿಸಿ ಗುರುವಾರ ಮಾತನಾಡಿದ ಅವರು, ದೇಶವನ್ನು ಅಭಿವೃದ್ಧಿ ಹೊಂದುತ್ತಿರುವ ಸ್ಥಾನದಿಂದ ಅಭಿವೃದ್ಧಿ ಹೊಂದಿದ ಸ್ಥಾನದೆಡೆಗೆ ಕರೆದೊಯ್ಯುವಲ್ಲಿ ರಫ್ತು ವಹಿವಾಟು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿದ್ದಾರೆ.

ಸರಕುಗಳ ರಫ್ತು ಮೌಲ್ಯ ₹ ಲಕ್ಷ ಕೋಟಿಗಳಲ್ಲಿ

2021-22	2020-21
₹31	₹30

ಹಿಂದಿನ ಹಣಕಾಸು ವರ್ಷದಲ್ಲಿ ಜಾಗತಿಕ ಮಟ್ಟದಲ್ಲಿ ಅಡಚಣೆಗಳ ಹೊರತಾಗಿಯೂ ಭಾರತದ ಸರಕು ಮತ್ತು ಸೇವೆಗಳ ರಫ್ತು ವಹಿವಾಟು ಮೌಲ್ಯವು ₹ 50 ಲಕ್ಷ ಕೋಟಿಗೆ ತಲುಪಿದೆ ಎಂದು ಮೋದಿ ತಿಳಿಸಿದ್ದಾರೆ.

ಜುಲೈ 1 ರಿಂದ ಬೆಲೆ ಏರಿಕೆ: ಹೀರೊ ಮೋಟೊಕಾರ್ಪ್

ನವದೆಹಲಿ (ಪಿಟಿಐ): ಹೀರೊ ಮೋಟೊಕಾರ್ಪ್ ಕಂಪನಿಯು ಜುಲೈ 1ರಿಂದ ಜಾರಿಗೆ ಬರುವಂತೆ ತನ್ನ ಎಲ್ಲ ಬೈಕ್ ಮತ್ತು ಸ್ಕೂಟರ್‌ಗಳ ಬೆಲೆಯನ್ನು ₹ 3 ಸಾವಿರದವರೆಗೆ ಹೆಚ್ಚಿಸುವುದಾಗಿ ಗುರುವಾರ ತಿಳಿಸಿದೆ.

ನಿರ್ದಿಷ್ಟ ಮಾದರಿ ಮತ್ತು ಮಾರುಕಟ್ಟೆಗೆ ಅನುಗುಣವಾಗಿ ಬೆಲೆಯು ಹೆಚ್ಚಾಗಲಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಸರಕುಗಳ ದರ ಸೇರಿದಂತೆ ಒಟ್ಟಾರೆ ವೆಚ್ಚವು ಹೆಚ್ಚಾಗುತ್ತಿರುವುದರಿಂದ ಅದನ್ನು ಭಾಗಶಃ ಸರಿದೂಗಿಸಲು ಬೆಲೆ ಏರಿಕೆ ಅನಿವಾರ್ಯ ಎಂದು ತಿಳಿಸಿದೆ.

ಕಂಪನಿಯು ₹ 51,450ರಿಂದ ₹1.32 ಲಕ್ಷದವರೆಗಿನ ಬೆಲೆಯ (ಎಕ್ಸ್ ಷೋರೂಂ) ವಿವಿಧ ಮಾದರಿಯ ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡುತ್ತಿದೆ.

'ನೆಕ್ಸಾನ್ ಇವಿ'ಗೆ ಬೆಂಕಿ: ವಿಚಾರಣೆಗೆ ಸರ್ಕಾರ ಆದೇಶ

ನವದೆಹಲಿ (ಪಿಟಿಐ): ನೆಕ್ಸಾನ್ ವಿದ್ಯುತ್ ಚಾಲಿತ (ಇ.ವಿ.) ಕಾರಿಗೆ ಮುಂಬೈನಲ್ಲಿ ಬೆಂಕಿ ಹೊತ್ತಿಕೊಂಡ ಪ್ರಕರಣದ ಕುರಿತು ಸ್ವತಂತ್ರ ವಿಚಾರಣೆಗೆ ಆದೇಶಿಸಲಾಗಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಯಾವ ಕಾರಣದಿಂದಾಗಿ ಬೆಂಕಿ ಹೊತ್ತಿಕೊಂಡಿತು ಹಾಗೂ ಮುಂದೆ ಹೀಗಾಗದಂತೆ ನೋಡಿಕೊಳ್ಳಲು ಏನು ಮಾಡಬೇಕು ಎಂಬುದನ್ನು ತಿಳಿಸುವಂತೆ ವಿಚಾರಣಾ ತಂಡಕ್ಕೆ ಹೇಳಲಾಗಿದೆ ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ. ಭಾರತೀಯ ವಿಜ್ಞಾನ ಸಂಸ್ಥೆಯೂ (ಐಐಎಸ್‌ಸಿ) ವಿಚಾರಣೆಯಲ್ಲಿ ಭಾಗಿಯಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಬೆಂಕಿ ಹೊತ್ತಿಕೊಂಡ ಪ್ರಕರಣ ಕುರಿತು ವಿಸ್ತೃತ ತನಿಖೆ ನಡೆಸುತ್ತಿರುವುದಾಗಿ ಟಾಟಾ ಮೋಟರ್ಸ್ ಹೇಳಿದೆ. ನೆಕ್ಸಾನ್ ಕಾರಿಗೆ ಬೆಂಕಿ ಹೊತ್ತಿಕೊಂಡ ದೃಶ್ಯವನ್ನು ಸಾಮಾಜಿಕ ಜಾಲತಾಣಗಳ ಮೂಲಕ ಹಲವರು ಹಂಚಿಕೊಂಡಿದ್ದಾರೆ.

ತನಿಖೆ ಪೂರ್ಣಗೊಂಡ ನಂತರದಲ್ಲಿ ವಿಸ್ತೃತ ಪ್ರತಿಕ್ರಿಯೆ ನೀಡಲಾಗುವುದು ಎಂದೂ ಕಂಪನಿ ಹೇಳಿದೆ. '30 ಸಾವಿರಕ್ಕೂ ಹೆಚ್ಚಿನ ವಿದ್ಯುತ್ ಚಾಲಿತ ವಾಹನಗಳು ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು 10 ಕೋಟಿಗೂ ಹೆಚ್ಚು ಕಿಲೋ ಮೀಟರ್ ಕ್ರಮಿಸಿವೆ. ಆದರೆ ಈ ರೀತಿ ಆಗುತ್ತಿರುವುದು ಇದೇ ಮೊದಲು' ಎಂದು ಅದು ಹೇಳಿದೆ. ಇ.ವಿ. ದ್ವಿಚಕ್ರ ವಾಹನಗಳಿಗೆ ಬೆಂಕಿ ಹೊತ್ತಿಕೊಂಡ ಹಲವು ಪ್ರಕರಣಗಳು ಈ ಹಿಂದೆ ವರದಿಯಾಗಿವೆ.

ಮುಂಬೈ: ಕೋವಿಡ್ ಹೆಚ್ಚಳ

ಮುಂಬೈ: ಮಹಾರಾಷ್ಟ್ರದಲ್ಲಿ ಕೊರೊನಾ ಸೋಂಕು ಏರಿಕೆಯಾಗುತ್ತಿದ್ದು, ಗುರುವಾರ 5,218 ಹೊಸ ಪ್ರಕರಣಗಳು ಪತ್ತೆಯಾಗಿದೆ. ಒಬ್ಬರು ಮೃತಪಟ್ಟಿದ್ದಾರೆ. ಇದರೊಂದಿಗೆ ಒಟ್ಟು ಪ್ರಕರಣಗಳ ಸಂಖ್ಯೆ 79,50,240 ಹಾಗೂ ಮೃತರ ಸಂಖ್ಯೆ 1,47,893ಕ್ಕೇರಿದೆ ಎಂದು ಆರೋಗ್ಯ ಇಲಾಖೆ ವರದಿ ತಿಳಿಸಿದೆ.

ಮುಂಬೈನಲ್ಲಿ 2,479 ಪ್ರಕರಣ ವರದಿಯಾಗಿವೆ. ಹಿಂದಿನ ದಿನಕ್ಕೆ ಹೋಲಿಸಿದರೆ ದೈನಂದಿನ ಪ್ರಕರಣಗಳು ಶೇಕಡಾ 60 ರಷ್ಟು ಏರಿಕೆಯಾಗಿದೆ. ಬುಧವಾರ 3,260 ಪ್ರಕರಣಗಳು ವರದಿಯಾಗಿದ್ದು, ಮೂವರು ಮೃತಪಟ್ಟಿದ್ದರು. ಸಕ್ರಿಯ ಪ್ರಕರಣಗಳ ಸಂಖ್ಯೆ 24,867 ಕ್ಕೇರಿದೆ.

ಥಾಣೆ ಮತ್ತು ಪುಣೆ ಜಿಲ್ಲೆಗಳಲ್ಲಿ ಸೋಂಕಿನ ಪ್ರಮಾಣ ಹೆಚ್ಚಿದೆ. 4,989 ರೋಗಿಗಳು ಮನೆ ಅಥವಾ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ. ಗುಣಮುಖರ ಪ್ರಮಾಣ ಶೇ 97.83 ಹಾಗೂ ಮರಣ ಶೇ 1.86ರಷ್ಟಿದೆ.

ದೇಶದಾದ್ಯಂತ ಗುರುವಾರ ಬೆಳಿಗ್ಗೆ ಕೊನೆಗೊಂಡಂತೆ 24 ಗಂಟೆ ಅವಧಿಯಲ್ಲಿ ಹೊಸದಾಗಿ 13,313 ಕೋವಿಡ್–19 ಪ್ರಕರಣಗಳು ದೃಢಪಟ್ಟಿವೆ. ಬುಧವಾರಕ್ಕೆ (12,249) ಹೋಲಿಸಿದರೆ ಪ್ರಕರಣಗಳಲ್ಲಿ ಏರಿಕೆಯಾಗಿವೆ. ಈ ಅವಧಿಯಲ್ಲಿ 38 ಮಂದಿ ಸಾವಿಗೀಡಾಗಿದ್ದಾರೆ.

ಇಪಿಎಸ್ ಪರ ಬಲಪ್ರದರ್ಶನಕ್ಕೆ ಎಐಎಡಿಎಂಕೆ ಸಭೆ ವೇದಿಕೆ

ಚೆನ್ನೈ (ಪಿಟಿಐ): ಮುಖಂಡರ ಸಮ್ಮುಖದಲ್ಲಿಯೇ ವಾಕ್ಸಮರ, ಕೂಗಾಟ, ವೇದಿಕೆಯತ್ತ ಬಾಟಲ್ ಎಸೆಯಲಾದ ಘಟನೆಗಳಿಗೆ ಗುರುವಾರ ಇಲ್ಲಿ ನಡೆದ ಎಐಎಡಿಎಂಕೆಯ ಸಾಮಾನ್ಯ ಸಭೆ ಸಾಕ್ಷಿಯಾಯಿತು.

'ಪಕ್ಷಕ್ಕೆ ಏಕ ನಾಯಕತ್ವ ವ್ಯವಸ್ಥೆ ಜಾರಿಗೆ ತರಬೇಕು' ಎಂಬುದೇ ಸಭೆಯ ಏಕೈಕ ಬೇಡಿಕೆ' ಎಂದು ಪಟ್ಟುಹಿಡಿದ ಸದಸ್ಯರು, ಸಭೆಯ ಕಾರ್ಯಸೂಚಿಯಲ್ಲಿದ್ದ ಎಲ್ಲ 23 ಪ್ರಸ್ತಾವ ಮತ್ತು ನಿರ್ಣಯಗಳನ್ನು ಸಾರಾಸಗಟಾಗಿ ತಿರಸ್ಕರಿಸಿದರು.

ಪಕ್ಷದ ಜಂಟಿ ಸಂಯೋಜಕರಾದ ಎಡಪ್ಪಾಡಿ ಕೆ.ಪಳನಿಸ್ವಾಮಿ (ಇಪಿಎಸ್) ಅವರ ಪರವಾಗಿ ಘೋಷಣೆಗಳನ್ನು ಕೂಗಲಾಯಿತು. ಗೊಂದಲ, ಕೂಗಾಟದ ನಡುವೆಯೂ ಸಂಯೋಜಕ, ಮಾಜಿ ಮುಖ್ಯಮಂತ್ರಿ ಒ.ಪನ್ನೀರ್‌ಸೆಲ್ವಂ (ಒಪಿಎಸ್) ಸಭೆಯಿಂದ ಮಧ್ಯದಲ್ಲಿಯೇ ನಿರ್ಗಮಿಸಿದರು. ಒಟ್ಟಾರೆಯಾಗಿ ಪಳನಿಸ್ವಾಮಿ ಪರವಾಗಿ ಬಲಾಬಲ ಪ್ರದರ್ಶನಕ್ಕೂ ಸಭೆ ವೇದಿಕೆಯಾಯಿತು.

ಗೊಂದಲದ ನಡುವೆಯೇ ಪಕ್ಷದ ಮುಂದಿನ ಸಾಮಾನ್ಯ ಸಭೆ ಜುಲೈ 11ರಂದು ನಡೆಯಲಿದೆ ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಹುಸೇನ್ ಅವರು ಪ್ರಕಟಿಸಿದರು. 'ಮುಂದಿನ ಸಭೆಯಲ್ಲಿ ಇ.ಪಳನಿಸ್ವಾಮಿ ಅವರು ಬಹುತೇಕ ಪಕ್ಷದ ನಾಯಕರಾಗಿ (ಪ್ರಧಾನ ಕಾರ್ಯದರ್ಶಿ) ಆಯ್ಕೆಯಾಗುವ ಸಂಭವವಿದೆ' ಎಂದು ಮುಖಂಡ ಮುನುಸ್ವಾಮಿ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ಪನ್ನೀರ್‌ಸೆಲ್ವಂ ಅವರು ವೇದಿಕೆಯಿಂದ ನಿರ್ಗಮಿಸುವ ವೇಳೆಗೆ ಅವರತ್ತ ಬಾಟಲ್ ಅನ್ನು ತೂರಲಾಯಿತು. ಒಂದು ಹಂತದಲ್ಲಿ ಪೋಡಿಯಂ ಬಳಿ ನಿಂತಿದ್ದಾಗ ಅವರು ಕೆಳಗೆ ಬೀಳುವ ಹಂತದಲ್ಲಿದ್ದರು. ಕೂಡಲೇ ಅವರ ಭದ್ರತಾ ಸಿಬ್ಬಂದಿ ನೆರವಿಗೆ ಬಂದರು. ಸಭಾಂಗಣದಿಂದ ಹೊರಬರುವಾಗ ನಿರ್ಗಮನ ದ್ವಾರದ ಬಳಿ ಇದ್ದಾಗಲೂ ಅವರತ್ತ ಬಾಟಲ್ ತೂರಲಾಯಿತು.

ಬಿಕ್ಕಟ್ಟಿನಿಂದ ಹೊರಬರಲು ನೆರವು: ಭಾರತ ಭರವಸೆ

ಕೊಲಂಬೊ (ಪಿಟಿಐ): ಆರ್ಥಿಕ ದುಸ್ಥಿತಿಗೆ ಸಿಲುಕಿದ ಶ್ರೀಲಂಕಾಕ್ಕೆ ಹಣಕಾಸಿನ ನೆರವಿನ ಅಗತ್ಯವಿದೆಯೇ ಎಂಬ ಪರಿಶೀಲನೆಗೆ ಗುರುವಾರ ಇಲ್ಲಿಗೆ ಬಂದಿರುವ ಭಾರತ ಸರ್ಕಾರದ ನಿಯೋಗವು ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರ ಜೊತೆ ಹಲವು ಮಹತ್ವದ ವಿಚಾರಗಳ ಚರ್ಚೆ ನಡೆಸಿದೆ.

ಈ ವೇಳೆ ರಾಜಪಕ್ಸ ಹಾಗೂ ಭಾರತದ ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾಟ್ರಾ ಅವರು ಪರಸ್ಪರ ಚರ್ಚೆ ನಡೆಸಿದರು.

ಸಭೆಯ ಬಳಿಕ ಮಾತನಾಡಿದ ವಿನಯ್ ಕ್ವಾಟ್ರಾ ಅವರು, 'ಶ್ರೀಲಂಕಾ ಅಧ್ಯಕ್ಷರ ಜೊತೆಗಿನ ಸಭೆಯು ಫಲಪ್ರದವಾಗಿತ್ತು. ಲಂಕಾ ಈ ಬಿಕ್ಕಟ್ಟಿನಿಂದ ಹೊರಬರಲು ಭಾರತ ಪೂರ್ಣ ಸಹಕಾರ, ನೆರವು ನೀಡಲಿದೆ' ಎಂದು ಹೇಳಿದರು.

ಗೋಪ್ಯ ಸ್ಥಳದಿಂದ ಕಾರಾಗೃಹಕ್ಕೆ ಸೂಕಿ

ಬ್ಯಾಂಕಾಕ್(ಪಿಟಿಐ): ಈವರೆಗೆ ಗೋಪ್ಯ ಕಾರಾಗೃಹದಲ್ಲಿ ಇರಿಸಲಾಗಿದ್ದ ನ್ಯಾಷನಲ್ ಲೀಗ್ ಫಾರ್ ಡೆಮಾಕ್ರಸಿ ಪಕ್ಷದ ನಾಯಕಿ ಆಂಗ್ ಸಾನ್ ಸೂಕಿ ಅವರನ್ನು ಇದೀಗ ಮ್ಯಾನ್ಮಾರ್ ರಾಜಧಾನಿ ನಾಯ್‌ಪೀಡಾ ನಗರದ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿದೆ ಎಂದು ಕಾನೂನು ಅಧಿಕಾರಿಗಳು ತಿಳಿಸಿದ್ದಾರೆ.

ಅವರ ವಿರುದ್ಧದ ಕೋರ್ಟ್ ಪ್ರಕರಣಗಳ ವಿಚಾರಣೆಯು ಕಾರಾಗೃಹ ಆವರಣದಲ್ಲಿ ನಿರ್ಮಿಸಲಾಗಿರುವ ಕಟ್ಟಡದಲ್ಲಿ ನಡೆಯಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿದ್ದ ಸೂಕಿ ಅವರ ಸರ್ಕಾರವನ್ನು 2021ರ ಫೆಬ್ರುವರಿ 1ರಂದು ಸೇನೆ ತನ್ನ ಸ್ವಾಧೀನಕ್ಕೆ ಪಡೆದುಕೊಂಡಿತ್ತು. ಬಳಿಕ ಸೂಕಿ ಅವರನ್ನು ಭ್ರಷ್ಟಾಚಾರ ಆರೋಪದ ಮೇರೆಗೆ ಸೇನೆ ವಶಕ್ಕೆ ಪಡೆದಿತ್ತು.

ವಾಕಿ-ಟಾಕಿಗಳ ಅಕ್ರಮ ಆಮದು ಮತ್ತು ಬಳಕೆ ಹಾಗೂ ಕೋವಿಡ್ ನಿಯಮಾವಳಿಗಳ ಉಲ್ಲಂಘನೆ ಪ್ರಕರಣದಲ್ಲಿ ದೋಷಿಯಾಗಿರುವ ಸೂಕಿ ಅವರಿಗೆ ಈಗಾಗಲೇ 11 ವರ್ಷಗಳ ಕಾರಾಗೃಹ ಶಿಕ್ಷೆಗೆ ವಿಧಿಸಲಾಗಿದೆ. ಅಲ್ಲದೆ, ಭ್ರಷ್ಟಾಚಾರ ಮತ್ತು ಚುನಾವಣೆ ಅಕ್ರಮ ಹಾಗೂ ಅಧಿಕಾರಿಗಳ ರಹಸ್ಯ ಕಾಯ್ದೆ ಉಲ್ಲಂಘನೆ ಆರೋಪಗಳು ಅವರ ಮೇಲೆ ಹೊರಿಸಲಾಗಿದೆ.

ಆದರೆ, ಸೂಕಿ ಬೆಂಬಲಿಗರು ಮತ್ತು ಮಾನವ ಹಕ್ಕುಗಳ ಹೋರಾಟಗಾರರು ಸೂಕಿ ಅವರ ಮೇಲಿನ ಆರೋಪಗಳು ರಾಜಕೀಯ ಪ್ರೇರಿತ ಎಂದು ಆರೋಪಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Marketing & Sales

GRT JEWELLERS
ಸೇಲ್ಸ್ ಸಿಬ್ಬಂದಿ ಬೇಕಾಗಿದ್ದಾರೆ
1964 ರಿಂದಲೂ ಅತ್ಯಂತ ವಿಶ್ವಾಸಾರ್ಹ ಜ್ಯುವೆಲ್ಲರ್ ಜಿಆರ್‌ಟಿ ಬೆಂಗಳೂರಿನ ಶೋರೂಮ್‌ಗಳಿಗೆ ಸೇಲ್ಸ್ ಸಿಬ್ಬಂದಿ ಬೇಕಾಗಿದ್ದಾರೆ. ಫ್ರೆಷರ್ ಮತ್ತು ಅನುಭವಿ ಅಭ್ಯರ್ಥಿಗಳು ತಮ್ಮ ಸ್ವವಿವರ ಮತ್ತು ಶೈಕ್ಷಣಿಕ ಪ್ರಮಾಣಪತ್ರಗಳೊಂದಿಗೆ ವಾಕ್ ಇನ್ ಸಂದರ್ಶನಕ್ಕೆ ಹಾಜರಾಗಬಹುದು. ಅಭ್ಯರ್ಥಿಗಳು ಕನ್ನಡ ಮಾತನಾಡುವವರಾಗಿರಬೇಕು.
ಸೇಲ್ಸ್‌ಮನ್/ಸೇಲ್ಸ್‌ಗರ್ಲ್ಸ್
ಕನಿಷ್ಠ ಅರ್ಹತೆ: 10ನೇ ತರಗತಿ, ಇಂಟರ್ ಅಥವಾ ಪಿಯುಸಿ ಪದವಿ
ವಯೋಮಿತಿ:18 ರಿಂದ 27
ಸೇಲ್ಸ್ ಅಸಿಸ್ಟೆಂಟ್ಸ್
ಕನಿಷ್ಠ ಅರ್ಹತೆ: 10ನೇ ತರಗತಿ, ಇಂಟರ್ ಅಥವಾ ಪಿಯುಸಿ (ಉತ್ತೀರ್ಣ ಅಥವಾ ಫೇಲ್)
ವಯೋಮಿತಿ:18 ರಿಂದ 22
ದಿನಾಂಕ ಮತ್ತು ಸಮಯ:
25 ಮತ್ತು 26 ಜೂನ್, 2022 (ಶನಿವಾರ ಮತ್ತು ಭಾನುವಾರ) (ಬೆಳಗ್ಗೆ 10 ರಿಂದ ಸಂಜೆ 5)
ಸಂದರ್ಶನ ಸ್ಥಳ:
ಒಕ್ಕಲಿಗರ ಕಲ್ಯಾಣ ಮಂಟಪ
ಬಿ.ಬಿ. ರೋಡ್, ಗವರ್ನ್‌ಮೆಂಟ್ ಹೈ ಸ್ಕೂಲ್ ಕಾಂಪ್ಲೆಕ್ಸ್ ಎದುರು, ಚಿಕ್ಕಬಳ್ಳಾಪುರ, ಕರ್ನಾಟಕ - 562 101.
ಸಂಪರ್ಕ ಸಂಖ್ಯೆಗಳು
9686905786
9686799333
9686702520
ಎಲ್ಲ ಇತರೆ ಸ್ಥಳಗಳಿಂದ ಬಂದ ಅಭ್ಯರ್ಥಿಗಳಿಗೆ ಆಹಾರ ಮತ್ತು ವಸತಿ ನೀಡಲಾಗುತ್ತದೆ.
ಇಮೇಲ್ recruitment@grtjewels.com

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹೋಂನರ್ಸ್‌ಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿ ಇದೆ. 10,000 -15,000. 8951315839, 9880545002

ನಿರುದ್ಯೋಗಿಗಳಿಗೆ ಸದವಕಾಶ. ನಮ್ಮ ಕಂಪನಿಯ ಅಮೃತಬಳ್ಳಿ ನೋನಿಯನ್ನು ಕಾರಿನಲ್ಲಿ ಹೋಗಿ ಪ್ರಚಾರಮಾಡಿ ಬಿಜಿನೆಸ್ ಮಾಡಿ ದಿನಕ್ಕೆ 800- 1200ರೂವರೆಗೆ ಪ್ರತಿದಿನ ಸಂಪಾದಿಸಿ. (ಉಚಿತ ವಸತಿ). 8904379634/ 9513670249

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಖಾಸಗಿ ಬ್ಯಾಂಕ್ ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC Degree ಸಂಬಳ 15000-28000 ಸಂಪರ್ಕಿಸಿರಿ: 8904879948, 8904879491

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಫ್ಲೋರ್ ಮಿಲ್ ಟರ್ನರ್ ಬೇಕಾಗಿದ್ದಾರೆ: ಫ್ಲೋರ್ ಮಿಲ್‌ನಲ್ಲಿ ಕಾರ್ಯ ನಿರ್ವಹಿಸಲು 2 ವರ್ಷ ಅನುಭವವಿರುವ ಫ್ಲೋರ್ ಮಿಲ್ ಟರ್ನರ್ ಬೇಕಾಗಿದ್ದಾರೆ. ಸ್ಥಳ: ಮಂಜುನಾಥ ಫ್ಲೋರ್ ಮಿಲ್, 1ನೇ ಕ್ರಾಸ್, ಮನೋರಾಯನ ಪಾಳ್ಯ, ಗೋಪಾಲಪ್ಪ ಬಡಾವಣೆ, ಆರ್.ಟಿ.ನಗರ ಪೋಸ್ಟ್, ಬೆಂಗಳೂರು -560 032. ಮಾಸಿಕ ವೇತನ: ರೂ.18,000/- ಸಂಪರ್ಕಿಸಿ: 94486 11584, 88849 33923

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವ್ಯಾಪಾರ

Business Offers

Machinery & Tools

STONE CRUSHER Good Condition (12/10 Size) along with Conveyor Belts, Vibrator Jali. Contact: 9133361013

ವೈಯಕ್ತಿಕ

Change of Name

I VINUTA Patil D/O Prakash Patil After Marriage My Name Has Been Changed To Vinuta Kalmani W/O. Kiran Kalmani For Future Purposes

ಪ್ರವಾಸ

Travel

4.7.2022 ಜೋಗ್ ಫಾಲ್ಸ್, ಯಾಣ, ಹೊನ್ನಾವರ. 15.7.2022,ಶಿರಡಿ, ಶನಿಸಿಂಗನಾಪುರ. 22.7.2022, ಚಿಕ್ಕಮಂಗಳೂರು, ಕೆಮ್ಮಣ್ಣುಗುಂಡಿ. 28.6.2022 ಸಿಗಂದೂರು, ಮುರುಡೇಶ್ವರ ಅನುಗ್ರಹಯಾತ್ರ. 9880079351

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6/12 ದಿನಗಳು. 06.07.2022 ಶಿರಡಿ,ಪಂಡರಾಪುರ, ಶನಿಸಿಂಗನಾಪುರ,ನಾಸಿಕ್ ತುಲಜಾಪುರ 6800/. 13.07.2022 ರಾಮೇಶ್ವರ ಕನ್ಯಾಕುಮಾರಿ,ಮದುರೈ ತಿರುಚೆಂದೂರ್ ಇತ್ಯಾದಿ 7200/. 21.07.2022ನವಗ್ರಹ ದರ್ಶನಸೇರಿ 18 ಕ್ಷೇತ್ರಗಳು 6200/. 16.08.2022 ವೈಷ್ಣೋದೇವಿ 06.09.2022 ಗುಜರಾತ್,ಮಧ್ಯಪ್ರದೇಶ. 9448390735 9449721678

ಅಗಸ್ಟ್‌ನಲ್ಲಿ 14 ದಿನಗಳ ಅಷ್ಟ ಜ್ಯೋತಿರ್ಲಿಂಗ ಅಕ್ಟೋಬರ್‌ನಲ್ಲಿ 12 ದಿನಗಳ ಬದರಿನಾಥ್, ಕೇದಾರನಾಥ್ ಯುಮುನೋತ್ರಿ,ಗಂಗೋತ್ರಿ. ನವಂಬರ್‌ನಲ್ಲಿ 8 ದಿನಗಳ ಕಾಶಿ,ಗಯಾ ಕೋಲ್ಕತ,ಭುವನೇಶ್ವರ್. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ, ಬೆಂಗಳೂರು. 9448294477

ಭವಿಷ್ಯ

Astrology

"ಶ್ರೀಆದಿಶಕ್ತಿ ಜ್ಯೋತಿಷ್ಯಂ" ಎಲ್ಲಿಯೂ ಪರಿಹಾರವಾಗದ ಕಠಿಣ ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಾಹ್ಮಿತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ ಗುಟ್ಟಹಳ್ಳಿ. ಬೆಂ.9620201188

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಶ್ರೀರಾಘವೇಂದ್ರ ಕುಲಕರ್ಣಿ: ಜನ ವಶೀಕರಣ, ಲಕ್ಷ್ಮಿ ವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣ, ಇನ್ನಿತರ ಸಮಸ್ಯೆಗಳಿಗೆ ಕೆಲವೇ ಗಂಟೆಗಳಲ್ಲಿ ಫೋನಿನ ಮೂಲಕ ಪರಿಹಾರ: 9535759222

"ಶ್ರೀಭಗವತಿ ಜ್ಯೋತಿಷ್ಯಾಲಯ" ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಉದ್ಯೋಗ, ಪ್ರೇಮವಿಚಾರ, ಇನ್ನಿತರ ಸಮಸ್ಯೆಗಳಿಗೆ 100% ಪರಿಹಾರ. ಪಂಡಿತ್ ಪರಶುರಾಮಶಾಸ್ತ್ರೀ. 8618839027

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

DH DECCAN HERALD   ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ರಣಜಿ ಫೈನಲ್: ಸರ್ಫರಾಜ್ ಖಾನ್ ಶತಕ ಸೊಬಗು; ಗೌರವ್‌ಗೆ ನಾಲ್ಕು ವಿಕೆಟ್

ಮುಂಬೈಗೆ ಮಧ್ಯಪ್ರದೇಶ ದಿಟ್ಟ ಉತ್ತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈನ 'ರನ್ ಯಂತ್ರ' ಸರ್ಫರಾಜ್ ಖಾನ್ ಈ ಬಾರಿಯ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ನಾಲ್ಕನೇ ಶತಕ ದಾಖಲಿಸಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಫೈನಲ್ ಪಂದ್ಯದ ಎರಡನೇ ದಿನದಾಟದಲ್ಲಿ ಸರ್ಫರಾಜ್ (134; 243ಎ, 4X13, 6X2) ಶತಕದ ಬಲದಿಂದ ಮುಂಬೈ 127.4 ಓವರ್‌ಗಳಲ್ಲಿ 374 ರನ್‌ಗಳ ಹೋರಾಟದ ಮೊತ್ತ ಗಳಿಸಿತು. ಇದಕ್ಕುತ್ತರವಾಗಿ ಮಧ್ಯಪ್ರದೇಶ 41 ಓವರ್‌ಗಳಲ್ಲಿ 1 ವಿಕೆಟ್‌ಗೆ 123 ರನ್ ಗಳಿಸಿತು. ಯಶ್ ದುಬೆ (ಬ್ಯಾಟಿಂಗ್ 44) ಮತ್ತು ಶುಭಂ ಶರ್ಮಾ (ಬ್ಯಾಟಿಂಗ್ 41) ಕ್ರೀಸ್‌ನಲ್ಲಿದ್ದಾರೆ. ಮುಂಬೈ ಬೌಲರ್‌ಗಳ ತಂತ್ರಗಳಿಗೆ ದಿಟ್ಟ ಉತ್ತರ ನೀಡಿದ್ದಾರೆ.

ಕಳೆದ ಪಂದ್ಯದಲ್ಲಿ ಶತಕ ಗಳಿಸಿದ್ದ ಹಿಮಾಂಶು ಮಂತ್ರಿ (31 ರನ್) 17ನೇ ಓವರ್‌ನಲ್ಲಿ ಔಟಾದರು.

ಖಾನ್ ರನ್ : ಪಂದ್ಯದ ಮೊದಲ ದಿನವಾದ ಬುಧವಾರ ಮುಂಬೈ ತಂಡವು ಗಳಿಸಿದ್ದ 5 ವಿಕೆಟ್‌ಗಳಿಗೆ 248 ಮೊತ್ತಕ್ಕೆ ಎರಡನೇ ದಿನ 126 ರನ್‌ಗಳನ್ನು ಸೇರಿಸಿತು. ಇದರಲ್ಲಿ ಸರ್ಫರಾಜ್ ಅವರದ್ದೇ ಸಿಂಹಪಾಲು.

ದಿನದ ಮೊದಲ ಓವರ್‌ನಲ್ಲಿ ಶಮ್ಸ್ ಮಲಾನಿ ಔಟಾದರು. ಈ ಹೊತ್ತಿನಲ್ಲಿ 40 ರನ್ ಗಳಿಸಿ ಕ್ರೀಸ್‌ನಲ್ಲಿದ್ದ ಸರ್ಫರಾಜ್ ಗುರುವಾರ ಬೆಳಿಗ್ಗೆಯಿಂದಲೇ ವೇಗವಾಗಿ ರನ್ ಗಳಿಸುವತ್ತ ಗಮನ ಹರಿಸಿದರು.

ಇನಿಂಗ್ಸ್‌ನ 114ನೇ ಓವರ್ ಬೌಲಿಂಗ್ ಮಾಡಿದ ಕುಮಾರ್ ಕಾರ್ತಿಕೆಯ ಎಸೆತವನ್ನು ಬೌಂಡರಿಗೆರೆ ದಾಟಿಸಿದರು. ಭಾವೋದ್ವೇಗಕ್ಕೆ ಒಳಗಾದ ಸರ್ಫರಾಜ್ ಕಣ್ಣೀರುಗರೆದರು. ಗಾಳಿಯಲ್ಲಿ ಬ್ಯಾಟ್ ಬೀಸಿ, ತೊಳಗಲಿಸಿ ಸಂತಸ ವ್ಯಕ್ತಪಡಿಸಿದರು. ನಂತರ ತಮ್ಮ ತೊಡೆ ತಟ್ಟಿದರು.

152ನೇ ಎಸೆತದಲ್ಲಿ ಅರ್ಧಶತಕ ಪೂರೈಸಿದ ಅವರು ನಂತರದ 38 ಎಸೆತಗಳಲ್ಲಿ 50 ರನ್ ಗಳಿಸಿ, ಶತಕ ಸಾಧನೆ ಮಾಡಿದರು. 24 ವರ್ಷದ ಸರ್ಫರಾಜ್‌ಗೆ ಇದು 25ನೇ ಪ್ರಥಮ ದರ್ಜೆ ಪಂದ್ಯವಾಗಿದೆ.

ಯಾದವ್‌ಗೆ ನಾಲ್ಕು ವಿಕೆಟ್: ಮುಂಬೈ ತಂಡದ ಕೆಳಕ್ರಮಾಂಕದ ಬ್ಯಾಟರ್‌ಗಳು ಸರ್ಫರಾಜ್ ಜೊತೆಗೆ ದೊಡ್ಡ ಜೊತೆಯಾಟ ಬೆಳೆಸದಂತೆ ಮಧ್ಯಮವೇಗಿ ಗೌರವ್ ಯಾದವ್ (106ಕ್ಕೆ4) ನೋಡಿಕೊಂಡರು.

ಶಮ್ಸ್ ಮಲಾನಿ, ತನುಷ್ ಕೋಟ್ಯಾನ್, ತುಷಾರ್ ದೇಶಪಾಂಡೆ ಮತ್ತು ಶತಕವೀರ ಸರ್ಫರಾಜ್ ವಿಕೆಟ್‌ಗಳನ್ನು ಅವರು ತಮ್ಮ ಬುಟ್ಟಿಗೆ ಹಾಕಿಕೊಂಡರು.

ಶತಕ ಸಂಭ್ರಮದಲ್ಲಿ ಮುಂಬೈ ತಂಡದ ಸರ್ಫರಾಜ್ ಖಾನ್ –ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಮುಂಬೈ: 374 (127.4 ಓವರ್‌ಗಳಲ್ಲಿ)
(ಬುಧವಾರ: 90 ಓವರ್‌ಗಳಲ್ಲಿ 5ಕ್ಕೆ248)
ಸರ್ಫರಾಜ್ ಸಿ ಶ್ರೀವಾಸ್ತವ ಬಿ ಯಾದವ್ 134 (243ಎ, 4X13, 6X2), ಶಮ್ಸ್ ಎಲ್‌ಬಿಡಬ್ಲ್ಯು ಬಿ ಯಾದವ್ 12 (45ಎ, 4X1), ತನುಷ್ ಬಿ ಯಾದವ್ 15 (39ಎ, 4X1), ಧವಳ್ ಸಿ ಹಿಮಾಂಶು ಬಿ ಅನುಭವ್ 1 (36ಎ), ತುಷಾರ್ ಸಿ ಹಿಮಾಂಶು ಬಿ ಯಾದವ್ 6 (20ಎ, 4X1), ಮೋಹಿತ್ ಔಟಾಗದೆ 7 (11ಎ, 6X1)
ಇತರೆ: 6 (ಬೈ 2, ಲೆಗ್‌ಬೈ 3, ವೈಡ್ 1)
ವಿಕೆಟ್ ಪತನ: 6–248 (ಶಮ್ಸ್ ಮಲಾನಿ; 90.2), 7–288 (ತನುಷ್ ಕೋಟ್ಯಾನ್; 102.6), 8–314 (ಧವಳ್ ಕುಲಕರ್ಣಿ; 112.3), 9–353 (ತುಷಾರ್ ದೇಶಪಾಂಡೆ; 123.4), 10–374 (ಸರ್ಫರಾಜ್ ಖಾನ್; 127.4)
ಬೌಲಿಂಗ್: ಕುಮಾರ್ ಕಾರ್ತಿಕೇಯ 41–6–133–1, ಅನುಭವ್ 29–5–81–3, ಸಾರಾಂಶ್ ಜೈನ್ 20–2–47–2, ಗೌರವ್ ಯಾದವ್ 35.4–8–106–4, ಪಾರ್ಥ್ ಸಹಾನಿ 2–0–2–0
ಮಧ್ಯಪ್ರದೇಶ 1 ವಿಕೆಟ್‌ಗೆ 123 (41 ಓವರ್)
ಯಶ್ ಬ್ಯಾಟಿಂಗ್ 44 (131ಎ ಹಿಮಾಂಶು ಎಲ್‌ಬಿಡಬ್ಲ್ಯು ಬಿ ತುಷಾರ್ 31 (50ಎ, 4X3, 6X2), ಶುಭಂ ಬ್ಯಾಟಿಂಗ್ 41 (65ಎ, 4X6)
ಇತರೆ: 7 (ಬೈ 6, ಲೆಗ್‌ಬೈ 1)
ವಿಕೆಟ್ ಪತನ: 1–47 (ಹಿಮಾಂಶು ಮಂತ್ರಿ; 16.3)
ಬೌಲಿಂಗ್: ಧವಳ್ ಕುಲಕರ್ಣಿ 9–2–22–0, ತುಷಾರ್ ದೇಶಪಾಂಡೆ 12–4–31–1, ಶಮ್ಸ್ ಮಲಾನಿ 11–0–46–0, ಮೋಹಿತ್ ಅವಸ್ತಿ 7–3–11–0, ತನುಷ್ ಕೊಟ್ಯಾನ್ 2–0–6–0

ತಂದೆಗೆ ಶತಕ ಅರ್ಪಿಸಿದ ಸರ್ಫರಾಜ್

ಸರ್ಫರಾಜ್ ಖಾನ್ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗಳಿಸಿದ ಶತಕವನ್ನು ತಮ್ಮ ತಂದೆ ಮತ್ತು ಕೋಚ್ ನೌಶಾದ್ ಖಾನ್ ಅವರಿಗೆ ಅರ್ಪಿಸಿದ್ದಾರೆ.

ಈಚೆಗೆ ಸಾವನ್ನಪ್ಪಿದ ಖ್ಯಾತ ಗಾಯಕ ಸಿಧು ಮೂಸೆವಾಲಾರಿಗೂ ಗೌರವ ತೋರಿದರು. ಮೂಸೆವಾಲಾ ಅವರ ಹಾಡೊಂದರ ನೃತ್ಯದಲ್ಲಿರುವ ಮಾದರಿಯಲ್ಲಿ ತಮ್ಮ ತೊಡೆ ತಟ್ಟಿಕೊಂಡ ಸರ್ಫರಾಜ್ ಗೌರವ ಸಲ್ಲಿಸಿದರು.

ಜೆಮಿಮಾ, ರಾಧಾ ಮಿಂಚು

ಟಿ20 ಪಂದ್ಯ: ಲಂಕಾ ಮಣಿಸಿದ ಭಾರತ ಮಹಿಳೆಯರು

ದಂಬುಲಾ (ಪಿಟಿಐ): ಅಲ್ಪಕಾಲದ ಬಿಡುವಿನ ಬಳಿಕ ತಂಡಕ್ಕೆ ಮರಳಿದ ಜೆಮಿಮಾ ರಾಡ್ರಿಗಸ್ ಅವರು ಶ್ರೀಲಂಕಾ ವಿರುದ್ಧದ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಭಾರತ ಮಹಿಳಾ ತಂಡಕ್ಕೆ ಗೆಲುವಿನ ಉಡುಗೊರೆ ನೀಡಿದರು.

ದಂಬುಲಾದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಕೌರ್ ಬಳಗ 34 ರನ್‌ಗಳ ಜಯ ಸಾಧಿಸಿ, ಮೂರು ಪಂದ್ಯಗಳ ಸರಣಿಯಲ್ಲಿ 1–0 ರಲ್ಲಿ ಮುನ್ನಡೆ ಗಳಿಸಿತು.

ಮೊದಲು ಬ್ಯಾಟ್ ಮಾಡಿದ ಭಾರತ ನಿಗದಿತ ಓವರ್‌ಗಳಲ್ಲಿ 6 ವಿಕೆಟ್‌ಗೆ 138 ರನ್ ಪೇರಿಸಿದರೆ, ಆತಿಥೇಯ ತಂಡ 5 ವಿಕೆಟ್ ಕಳೆದುಕೊಂಡು ಗಳಿಸಿದ್ದು 104 ರನ್ ಮಾತ್ರ.

ಐದನೇ ಕ್ರಮಾಂಕದಲ್ಲಿ ಕ್ರೀಸ್‌ಗಿಳಿದು ಬಿರುಸಿನ ಆಟವಾಡಿದ ಜೆಮಿಮಾ (ಅಜೇಯ 36, 27 ಎ, 4X3, 6X1) ಮತ್ತು ರಾಧಾ ಯಾದವ್ (22ಕ್ಕೆ 2) ಒಳಗೊಂಡಂತೆ ಪ್ರಭಾವಿ ದಾಳಿ ಸಂಘಟಿಸಿದ ಬೌಲರ್‌ಗಳು ಭಾರತದ ಗೆಲುವಿಗೆ ಕಾರಣರಾದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ, ಸ್ಮೃತಿ ಮಂದಾನ (1) ಮತ್ತು ಮೇಘನಾ (0) ಅವರನ್ನು ಬೇಗನೇ ಕಳೆದುಕೊಂಡಿತು.

ಜೆಮಿಮಾ ರಾಡ್ರಿಗಸ್ –ಸಂಗ್ರಹ ಚಿತ್ರ

ಶಫಾಲಿ ವರ್ಮ (31, 31 ಎ, 4X4) ಹಾಗೂ ನಾಯಕಿ ಹರ್ಮನ್‌ಪ್ರೀತ್ ಕೌರ್ (22, 20 ಎ, 4X3) ತಂಡವನ್ನು ಕುಸಿತದಿಂದ ಮೇಲಕ್ಕೆತ್ತಿದರು.

17ನೇ ಓವರ್ ಕೊನೆಗೊಂಡಾಗ 6 ವಿಕೆಟ್‌ಗೆ 106 ರನ್ ಗಳಿಸಿತ್ತು. ಕೊನೆಯಲ್ಲಿ ಜೆಮಿಮಾ ಬಿರುಸಿನ ಆಟವಾಡಿದ್ದರಿಂದ ಸವಾಲಿನ ಮೊತ್ತ ಪೇರಿಸಿತು.

ಗುರಿ ಬೆನ್ನಟ್ಟಿದ ಲಂಕಾ 27 ರನ್ ಗಳಿಸುವಷ್ಟರಲ್ಲಿ ಮೂರು ವಿಕೆಟ್ ಕಳೆದುಕೊಂಡಿತು. ಆ ಬಳಿಕ ಚೇತರಿಸಿಕೊಳ್ಳಲು ಆಗಲಿಲ್ಲ.

ಮುಖ್ಯಾಂಶಗಳು
- ಭಾರತಕ್ಕೆ 34 ರನ್ ಗೆಲುವು
- ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ
- ಜೆಮಿಮಾ 27 ಎಸೆತಗಳಲ್ಲಿ ಅಜೇಯ 36 ರನ್

ಕವಿಶಾ ದಿಲ್ಹರಿ (ಔಟಾಗದೆ 47, 49 ಎ, 4X6) ಅವರ ಏಕಾಂಗಿ ಹೋರಾಟ ವ್ಯರ್ಥವಾಯಿತು.

ಸಂಕ್ಷಿಪ್ತ ಸ್ಕೋರ್: ಭಾರತ 138ಕ್ಕೆ 6 (20 ಓವರ್) ಶಫಾಲಿ ವರ್ಮ 31, ಹರ್ಮನ್‌ಪ್ರೀತ್ ಕೌರ್ 22, ಜೆಮಿಮಾ ರಾಡ್ರಿಗಸ್ ಅಜೇಯ 36, ಪೂಜಾ ವಸ್ತ್ರಕರ್ 14, ದೀಪ್ತಿ ಶರ್ಮಾ ಔಟಾಗದೆ 17, ಇನೊಕ ರಣವೀರ 30ಕ್ಕೆ 3, ಒಶದಿ ರಣಸಿಂಘೆ 22ಕ್ಕೆ 2)

ಶ್ರೀಲಂಕಾ 104ಕ್ಕೆ 5 (20 ಓವರ್) ಕವಿಶಾ ದಿಲ್ಹರಿ ಔಟಾಗದೆ 47, ಚಾಮರಿ ಅಟಪಟ್ಟು 16, ರಾಧಾ ಯಾದವ್ 22ಕ್ಕೆ 2, ದೀಪ್ತಿ ಶರ್ಮಾ 9ಕ್ಕೆ 1, ಪೂಜಾ ವಸ್ತ್ರಕರ್ 13ಕ್ಕೆ 1, ಶಫಾಲಿ ವರ್ಮ 10ಕ್ಕೆ 1)

ಫಲಿತಾಂಶ: ಭಾರತ ತಂಡಕ್ಕೆ 34 ರನ್ ಜಯ

ಪಂದ್ಯಶ್ರೇಷ್ಠ: ಜೆಮಿಮಾ ರಾಡ್ರಿಗಸ್

'ಟಿಕೆಟ್: ಪೂರ್ತಿ ಹಣ ಮರುಪಾವತಿ ಆಗಲಿ'

ಬೆಂಗಳೂರು: 'ಭಾರತ– ದಕ್ಷಿಣ ಆಫ್ರಿಕಾ ನಡುವಿನ ಟಿ20 ಪಂದ್ಯ ರದ್ದಾಗಿರುವುದರಿಂದ ಟಿಕೆಟ್‌ನ ಶೇ 100 ರಷ್ಟು ಹಣ ಮರುಪಾವತಿ ಆಗಬೇಕು' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಆಜೀವ ಸದಸ್ಯ ಬಿ.ಶ್ರೀಪತಿ ರಾವ್ ಆಗ್ರಹಿಸಿದ್ದಾರೆ.

'ಪಂದ್ಯಗಳು ಒಂದೂ ಎಸೆತವಿಲ್ಲದೇ ರದ್ದಾದಾಗ ಮಾತ್ರ ಪ್ರೇಕ್ಷಕರಿಗೆ ಪೂರ್ಣ ಹಣ ಮರಳಿಕೊಡಬೇಕು ಎಂಬ ನಿಯಮ ಇರುವುದು ನಿಜ. ಆದರೆ ಈ ಪಂದ್ಯದಲ್ಲಿ ಕೆಲವೇ ಎಸೆತಗಳ ಆಟ ನಡೆದಿತ್ತು. ಕ್ರೀಡಾಂಗಣದಲ್ಲಿ ನೆರೆದಿದ್ದ 40 ಸಾವಿರ ಪ್ರೇಕ್ಷಕರು ನಿರಾಸೆ ಅನುಭವಿಸಿದ್ದರು. ಅವರಿಗೆ ಟಿಕೆಟ್‌ನ ಪೂರ್ತಿ ಹಣ ವಾಪಸ್ ಮಾಡಬೇಕು' ಎಂದು ಕೆಎಸ್‌ಸಿಎ ಹಾಗೂ ಬಿಸಿಸಿಐ ಅಧ್ಯಕ್ಷರಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಭಾರತ– ದಕ್ಷಿಣ ಆಫ್ರಿಕಾ ನಡುವೆ ಜೂನ್ 19 ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಪಂದ್ಯ ಮಳೆಯಿಂದ ರದ್ದಾಗಿತ್ತು. 3.3 ಓವರ್ ಆಟ ಮಾತ್ರ ನಡೆದಿತ್ತು. ಟಿಕೆಟ್ ಮೊತ್ತದ ಶೇ 50 ರಷ್ಟು ಹಣ ಮರುಪಾವತಿ ಮಾಡುವುದಾಗಿ ಕೆಎಸ್‌ಸಿಎ ಪ್ರಕಟಿಸಿತ್ತು.

ಅಭ್ಯಾಸ ಪಂದ್ಯ; ರೋಮನ್ ವಾಕರ್‌ಗೆ ಐದು ವಿಕೆಟ್

ಭಾರತಕ್ಕೆ ಶ್ರೀಕರ್ ಭರತ್ ಆಸರೆ

ಗ್ರೇಸ್ ರೋಡ್(ಎಎಫ್‌ಪಿ/ ರಾಯಿಟರ್ಸ್): ವಿಕೆಟ್‌ಕೀಪರ್–ಬ್ಯಾಟರ್ ಶ್ರೀಕರ್ ಭರತ್ ಇಲ್ಲಿ ಆರಂಭವಾದ ಲೆಸ್ಟರ್‌ಶೈರ್ ಎದುರಿನ ಅಭ್ಯಾಸ ಪಂದ್ಯದಲ್ಲಿ ಅಲ್ಪಮೊತ್ತಕ್ಕೆ ಕುಸಿಯುವ ಆತಂಕದಲ್ಲಿದ್ದ ಭಾರತ ತಂಡಕ್ಕೆ ಆಸರೆಯಾದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ದಿನದಾಟದ ಅಂತ್ಯಕ್ಕೆ 60.2 ಓವರ್‌ಗಳಲ್ಲಿ 8ಕ್ಕೆ 246 ರನ್ ಗಳಿಸಿತು. ಲೆಸ್ಟರ್ ತಂಡದ ವೇಗಿ ರೋಮನ್ ವಾಕರ್ (24ಕ್ಕೆ5) ನಿಖರ ದಾಳಿಯಿಂದಾಗಿ ತಂಡವು 138 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಭರತ್ (ಬ್ಯಾಟಿಂಗ್ 70; 111ಎ, 4X8, 6X1) ಅರ್ಧಶತಕ ಗಳಿಸಿ ದಿಟ್ಟ ಉತ್ತರ ನೀಡಿದರು.

ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯಕ್ಕೂ ಮುನ್ನ ಭಾರತ ತಂಡದ ಪೂರ್ವಾಭ್ಯಾಸಕ್ಕಾಗಿ ನಾಲ್ಕು ದಿನಗಳ ಪಂದ್ಯ ಆಯೋಜಿಸಲಾಗಿದೆ. ಭಾರತದ ವಿಕೆಟ್‌ಕೀಪರ್ ರಿಷಭ್ ಪಂತ್, ಚೇತೇಶ್ವರ್ ಪೂಜಾರ, ಜಸ್‌ಪ್ರೀತ್ ಬೂಮ್ರಾ ಮತ್ತು ಪ್ರಸಿದ್ಧ ಕೃಷ್ಣ ಅವರು ಈ ಪಂದ್ಯದಲ್ಲಿ ಲೆಸ್ಟರ್ ತಂಡವನ್ನು ಪ್ರತಿನಿಧಿಸಿದ್ದಾರೆ. ಕನ್ನಡಿಗ ಪ್ರಸಿದ್ಧ ಬೌಲಿಂಗ್‌ನಲ್ಲಿ ರಿಷಬ್ ಪಂತ್ ಪಡೆದ ಕ್ಯಾಚ್‌ಗೆ ಶ್ರೇಯಸ್ ಅಯ್ಯರ್ ಔಟಾದರು. ಅವರು 11 ಎಸೆತ ಎದುರಿಸಿಯೂ ಖಾತೆ ತೆರೆಯಲಿಲ್ಲ.

ಕೋವಿಡ್‌ನಿಂದ ಚೇತರಿಸಿಕೊಂಡಿರುವ ವಿರಾಟ್ ಕೊಹ್ಲಿ (33; 69ಎ, 4X4, 6X1) ಆರಂಭದಲ್ಲಿ ಉತ್ತಮವಾಗಿ ಆಡಿದರು. ಆದರೆ ಅವರು ದೀರ್ಘ ಇನಿಂಗ್ಸ್ ಆಡುವಲ್ಲಿ ವಿಫಲರಾದರು.

ಸಂಕ್ಷಿಪ್ತ ಸ್ಕೋರು: ಭಾರತ 60.2 ಓವರ್‌ಗಳಲ್ಲಿ 8ಕ್ಕೆ246 (ರೋಹಿತ್ ಶರ್ಮಾ 25, ಶುಭಮನ್ ಗಿಲ್ 21, ವಿರಾಟ್ ಕೊಹ್ಲಿ 33, ಶ್ರೀಕರ್ ಭರತ್ ಬ್ಯಾಟಿಂಗ್ 70, ಉಮೇಶ್ ಯಾದವ್ 23, ಮೊಹಮ್ಮದ್ ಶಮಿ ಬ್ಯಾಟಿಂಗ್ 18, ವಿಲ್ ಡೇವಿಸ್ 64ಕ್ಕೆ2, ರೋಮನ್ ವಾಕರ್ 24ಕ್ಕೆ5, ಪ್ರಸಿದ್ಧ ಕೃಷ್ಣ 37ಕ್ಕೆ1) ಲೆಸ್ಟರ್‌ಶೈರ್ ವಿರುದ್ಧದ ಪಂದ್ಯ

ವಿರಾಟ್ ಕೊಹ್ಲಿ

ಕ್ರಿಕೆಟ್: ರುಮೇಲಿ ಧಾರ್ ನಿವೃತ್ತಿ

ಮುಂಬೈ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ರುಮೇಲಿ ಧಾರ್ ಎಲ್ಲ ಮಾದರಿಯ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದಾರೆ.

ಬಲಗೈ ಬ್ಯಾಟರ್ ಮತ್ತು ಮಧ್ಯಮವೇಗಿ ರುಮೇಲಿ ಅವರು ಇನ್ಸ್ಟಾಗ್ರಾಮ್‌ನಲ್ಲಿ ತಮ್ಮ ನಿವೃತ್ತಿ ಘೋಷಿಸಿದ್ದಾರೆ.

'ಪಶ್ಚಿಮ ಬಂಗಾಳದ ಶ್ಯಾಮ್‌ನಗರದಲ್ಲಿ ಆರಂಭವಾದ ನನ್ನ ಕ್ರಿಕೆಟ್ ಜೀವನಕ್ಕೆ ಈಗ 23 ವರ್ಷಗಳು ಸಂದಿವೆ. ಅಂತಿಮ ಘಟ್ಟಕ್ಕೆ ಬಂದು ನಿಂತಿದೆ. ಈ ಹೊತ್ತಿನಲ್ಲಿ ನಾನು ಎಲ್ಲ ಮಾದರಿಯ ಕ್ರಿಕೆಟ್‌ಗೆ ವಿದಾಯ ಹೇಳುತ್ತಿದ್ದೇನೆ' ಎಂದು 38 ವರ್ಷದ ರುಮೇಲಿ ಬರೆದಿದ್ದಾರೆ.

ಅವರು ನಾಲ್ಕು ಟೆಸ್ಟ್‌ಗಳಲ್ಲಿ ಆಡಿ 236 ರನ್ ಗಳಿಸಿದ್ದಾರೆ. ಅದರಲ್ಲಿ ಒಂದು ಅರ್ಧಶತಕವಿದೆ ಮತ್ತು ಎಂಟು ವಿಕೆಟ್‌ಗಳನ್ನೂ ಪಡೆದಿದ್ದಾರೆ.

78 ಅಂತರರಾಷ್ಟ್ರೀಯ ಏಕದಿನ ಪಂದ್ಯಗಳಿಂದ 961 ರನ್ ಮತ್ತು 63 ವಿಕೆಟ್ ಗಳಿಸಿದ್ದಾರೆ. ಆರು ಅರ್ಧಶತಕಗಳೂ ಇದರಲ್ಲಿವೆ. ಟಿ20 ಮಾದರಿಯ 18 ಪಂದ್ಯಗಳಲ್ಲಿ ಅವರು ಆಡಿದ್ದು, 131 ರನ್ ಗಳಿಸಿದ್ದಾರೆ. 13 ವಿಕೆಟ್ ಕೂಡ ಪಡೆದಿದ್ದಾರೆ. 2012ರಲ್ಲಿ ಕೊನೆಯ ಏಕದಿನ ಪಂದ್ಯದಲ್ಲಿ ಆಡಿದ್ದಾರು. ಆದರೆ ವಿದಾಯ ಘೋಷಿಸಿರಲಿಲ್ಲ. 2018ರಲ್ಲಿ ಮತ್ತೆ ಟಿ20 ಕ್ರಿಕೆಟ್‌ಗೆ ಮರಳಿದ್ದರು.

ಚಿರತೆ ದತ್ತು ನವೀಕರಿಸಿದ ವೇದಾ

ಮೈಸೂರು: ಭಾರತದ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ವೇದಾ ಕೃಷ್ಣಮೂರ್ತಿ ನಗರದ ಚಾಮರಾಜೇಂದ್ರ ಮೃಗಾಲಯದಲ್ಲಿ 'ಭಾವನಾ' ಹೆಸರಿನ ಚಿರತೆ ದತ್ತು ಸ್ವೀಕಾರವನ್ನು ನವೀಕರಿಸಿದ್ದಾರೆ. 'ಅವರು ₹ 50 ಸಾವಿರ ಪಾವತಿಸಿ 2023ರ ಜೂನ್ 22ರವರೆಗೆ ದತ್ತು ನವೀಕರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸವಿತಾ ಪೂನಿಯಾ ನಾಯಕತ್ವ

ನವದೆಹಲಿ (ಪಿಟಿಐ): ಗೋಲ್ ಕೀಪರ್ ಸವಿತಾ ಪೂನಿಯಾ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತ ಮಹಿಳಾ ಹಾಕಿ ತಂಡದ ನಾಯಕತ್ವ ವಹಿಸಲಿದ್ದಾರೆ.

ಗಾಯದಿಂದ ಚೇತರಿಸಿಕೊಳ್ಳದ ರಾಣಿ ರಾಂಪಾಲ್ ತಂಡಕ್ಕೆ ಆಯ್ಕೆಯಾಗಿಲ್ಲ. ಆದ್ದರಿಂದ ನಾಯಕಿಯ ಪಟ್ಟವನ್ನು ಸವಿತಾ ಅಲಂಕರಿಸಲಿದ್ದಾರೆ. ಅನುಭವಿ ಆಟಗಾರ್ತಿಯರಾದ ದೀಪ್ ಗ್ರೇಸ್ ಎಕ್ಕಾ ಅವರನ್ನು ಉಪನಾಯಕಿಯನ್ನಾಗಿ ನೇಮಕ ಮಾಡಲಾಗಿದೆ.

ಇದೇ ತಂಡವು ಜುಲೈ 1 ರಿಂದ 17ರವರೆಗೆ ನಡೆಯಲಿರುವ ವಿಶ್ವಕಪ್ ಹಾಕಿ ಟೂರ್ನಿಯಲ್ಲಿಯೂ ಆಡಲಿದೆ. ನೆದರ್ಲೆಂಡ್ಸ್ ಮತ್ತು ಸ್ಪೇನ್ ತಂಡಗಳ ಜಂಟಿಯಾಗಿ ಆತಿಥ್ಯ ವಹಿಸಲಿವೆ.

ತಂಡ: ಗೋಲ್‌ಕೀಪರ್: ಸವಿತಾ (ನಾಯಕಿ), ರಜನಿ ಇತಿಮರ್ಪು.

ಡಿಫೆಂಡರ್ಸ್: ದೀಪ್ ಗ್ರೇಸ್ ಎಕ್ಕಾ (ಉಪನಾಯಕಿ), ಗುರ್ಜಿತ್ ಕೌರ್, ನಿಕ್ಕಿ ಪ್ರಧಾನ್, ಉದಿತಾ.

ಮಿಡ್‌ಫೀಲ್ಡರ್ಸ್: ನಿಶಾ, ಸುಶೀಲಾ ಚಾನು ಪುಖರಂಬಮ್, ಮೋನಿಕಾ, ನೇಹಾ, ಜ್ಯೋತಿ, ನವಜ್ಯೋತ್ ಕೌರ್, ಸಲೀಮಾ ಟೆಟೆ.

ಫಾರ್ವರ್ಡ್ಸ್: ವಂದನಾ ಕಟಾರಿಯಾ, ಲಾಲ್‌ರೆಮ್ಸಿಯಾಮಿ, ನವನೀತ್ ಕೌರ್, ಶರ್ಮಿಳಾ ದೇವಿ, ಸಂಗೀತಾ ಕುಮಾರಿ.

ಸವಿತಾ

ಟೆಸ್ಟ್: ಕಿವೀಸ್ ಸಾಧಾರಣ ಮೊತ್ತ

ಲೀಡ್ಸ್ (ಎಎಫ್‌ಪಿ): ಡೆರಿಲ್ ಮಿಚೆಲ್ ಅವರ ಅರ್ಧಶತಕದ ನೆರವಿನಿಂದ ನ್ಯೂಜಿಲೆಂಡ್ ತಂಡ ಇಂಗ್ಲೆಂಡ್ ವಿರುದ್ಧದ ಮೂರನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಸಾಧಾರಣ ಮೊತ್ತ ಪೇರಿಸಿದೆ.

ಲೀಡ್ಸ್ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾದ ಪಂದ್ಯದ ಮೊದಲ ದಿನದಾಟದ ಅಂತ್ಯಕ್ಕೆ ನ್ಯೂಜಿಲೆಂಡ್ 90 ಓವರ್‌ಗಳಲ್ಲಿ 5 ವಿಕೆಟ್‌ಗೆ 225 ರನ್ ಗಳಿಸಿದೆ.

ಸ್ಟುವರ್ಟ್ ಬ್ರಾಡ್ ಮತ್ತು ಜಾಕ್ ಲೀಚ್ ಅವರ ಶಿಸ್ತಿನ ದಾಳಿಗೆ ನಲುಗಿದ ನ್ಯೂಜಿಲೆಂಡ್ 123 ರನ್ ಗಳಿಸುವಷ್ಟರಲ್ಲಿ 5 ವಿಕೆಟ್ ಕಳೆದುಕೊಂಡಿತು. ಆದರೆ ಡೆರಿಲ್ ಮಿಚೆಲ್ (ಔಟಾಗದೆ 78) ಮತ್ತು ಟಾಮ್ ಬ್ಲಂಡೆಲ್ (ಔಟಾಗದೆ 45) ಆರನೇ ವಿಕೆಟ್‌ಗೆ 102 ರನ್ ಸೇರಿಸಿ ತಂಡಕ್ಕೆ ಆಸರೆಯಾದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್ ನ್ಯೂಜಿಲೆಂಡ್ 5ಕ್ಕೆ 225 (90 ಓವರ್) ವಿಲ್ ಯಂಗ್ 20, ಕೇನ್ ವಿಲಿಯಮ್ಸನ್ 31, ಡೆವೊನ್ ಕಾನ್ವೆ 26, ಡೆರಿಲ್ ಮಿಚೆಲ್ ಬ್ಯಾಟಿಂಗ್ 78, ಟಾಮ್ ಬ್ಲಂಡೆಲ್ ಬ್ಯಾಟಿಂಗ್ 45, ಸ್ಟುವರ್ಟ್ ಬ್ರಾಡ್ 45ಕ್ಕೆ 2, ಜಾಕ್ ಲೀಚ್ 75ಕ್ಕೆ 2

ಸ್ಪರ್ಧೆಯ ವೇಳೆ ಪ್ರಜ್ಞೆತಪ್ಪಿ ಮುಳುಗಿದ ಅಲ್ವರೇಜ್ ಅವರನ್ನು ಈಜುಕೊಳದಿಂದ ಮೇಲೆತ್ತಲಾಯಿತು –ಎಪಿ ಚಿತ್ರ

ಈಜು: ಪ್ರಜ್ಞೆತಪ್ಪಿದ ಸ್ಪರ್ಧಿಯ ರಕ್ಷಣೆ

ಬುಡಾಪೆಸ್ಟ್ (ಎಎಫ್‌ಪಿ): ಈಜುಸ್ಪರ್ಧೆ ವೇಳೆ ಪ್ರಜ್ಞಾಹೀನರಾಗಿ ಈಜುಕೊಳದ ತಳಭಾಗಕ್ಕೆ ಮುಳುಗಿದ ಅಮೆರಿಕ ತಂಡದ ಮಹಿಳಾ ಸ್ಪರ್ಧಿಯನ್ನು ಅದೇ ತಂಡದ ಕೋಚ್ ರಕ್ಷಿಸಿದ್ದಾರೆ.

ಇಲ್ಲಿ ನಡೆಯುತ್ತಿರುವ ವಿಶ್ವ ಈಜು ಚಾಂಪಿಯನ್‌ಷಿಪ್‌ನ ಆರ್ಟಿಸ್ಟಿಕ್ ಸ್ಪರ್ಧೆಯ ವೈಯಕ್ತಿಕ ವಿಭಾಗದಲ್ಲಿ ಅನಿಟಾ ಅಲ್ವರೇಜ್ ಪ್ರದರ್ಶನ ನೀಡುತ್ತಿದ್ದಾಗಲೇ ಪ್ರಜ್ಞೆ ಕಳೆದುಕೊಂಡಿದ್ದಾರೆ.

ನೀರಲ್ಲಿ ಮುಳುಗಿ ಈಜುಕೊಳದ ತಳಭಾಗ ಸೇರಿದ್ದಾರೆ. ಏನೋ ಅನಾಹುತ ಆಗಿದೆ ಎಂಬುದನ್ನು ಅರಿತ ಅಮೆರಿಕ ಮಹಿಳಾ ತಂಡದ ಮುಖ್ಯ ಕೋಚ್ ಆಂಡ್ರಿಯಾ ಫುಯೆಂಟಸ್, ತಕ್ಷಣವೇ ನೀರಿಗೆ ಧುಮುಕಿ ಅಲ್ವರೇಜ್ ಅವರನ್ನು ಮೇಲಕ್ಕೆತ್ತಿದ್ದಾರೆ. ತಂಡದ ಇತರ ಸಿಬ್ಬಂದಿ ಕೂಡಾ ನೆರವಿಗೆ ಬಂದಿದ್ದಾರೆ.

'ಈಜುಕೊಳದ ಬಳಿಯಿದ್ದ ಲೈಫ್‌ಗಾರ್ಡ್‌ಗಳು ಗರಬಡಿದವರಂತೆ ನಿಂತಿದ್ದರೇ ಹೊರತು, ಕೂಡಲೇ ರಕ್ಷಣೆಗೆ ಮುಂದಾಗಲಿಲ್ಲ. ಆದ್ದರಿಂದ ನಾನೇ ನೀರಿಗೆ ಧುಮುಕಿದೆ' ಎಂದು ಫುಯೆಂಟಸ್ ಪ್ರತಿಕ್ರಿಯಿಸಿದ್ದಾರೆ.

'ಅಲ್ವಾರೆಜ್ ಅವರ ಆರೋಗ್ಯ ತಪಾಸಣೆ ಮಾಡಲಾಗಿದ್ದು, ಯಾವುದೇ ಅಪಾಯವಿಲ್ಲ ಎಂದು ವೈದ್ಯರು ತಿಳಿಸಿದ್ದಾರೆ. ಶುಕ್ರವಾರ ನಡೆಯುವ ತಂಡ ವಿಭಾಗದ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವರೇ ಎಂಬುದು ವೈದ್ಯರ ಸಲಹೆಯ ಬಳಿಕ ನಿರ್ಧರಿಸಲಾಗುವುದು' ಎಂದಿದ್ದಾರೆ.

ಬ್ಯಾಸ್ಕೆಟ್‌ಬಾಲ್ ಲೀಗ್ 9 ರಿಂದ

ಬೆಂಗಳೂರು: ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಜುಲೈ 9 ರಿಂದ 16ರ ವರೆಗೆ ಕಂಠೀರವ ಕ್ರೀಡಾಂಗಣದಲ್ಲಿ ಎಂ.ಸಿ.ಶ್ರೀನಿವಾಸ ಸ್ಮಾರಕ ಟ್ರೋಫಿಗಾಗಿ ರಾಜ್ಯ 'ಬಿ' ಡಿವಿಷನ್ ಲೀಗ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಆಯೋಜಿಸಿದೆ. ಒಟ್ಟು 10 ತಂಡಗಳು ಪಾಲ್ಗೊಳ್ಳಲಿವೆ.

ಶ್ರೀಹರಿ, ಅನೀಶ್‌ಗೆ ಚಿನ್ನ

ಸಿಂಗಪುರ (ಪಿಟಿಐ): ಒಲಿಂಪಿಯನ್ ಶ್ರೀಹರಿ ನಟರಾಜನ್ ಮತ್ತು ಮಾನಾ ಪಟೇಲ್ ಅವರು ಗುರುವಾರ ಇಲ್ಲಿ ಆರಂಭವಾದ ಸಿಂಗಪುರ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದರು.

ಸ್ಪರ್ಧೆಯ ಮೊದಲ ದಿನದಂದು ಭಾರತಕ್ಕೆ ಒಟ್ಟು ಐದು ಪದಕಗಳು ಒಲಿದವು. ಕನ್ನಡಿಗ ಶ್ರೀಹರಿ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ 55.32 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಪ್ರಥಮ ಸ್ಥಾನ ಗಳಿಸಿದರು. ಭಾರತದ ಶಿವ ಶ್ರೀಧರ್ ಕಂಚಿನ ಪದಕ ಪಡೆದರು.

ಮಹಿಳೆಯರ 100 ಮೀ. ಬ್ಯಾಕ್ ಸ್ಟ್ರೋಕ್‌ನಲ್ಲಿ ಮಾನಾ (1ನಿ,4.47ಸೆ) ಬೆಳ್ಳಿ ಪದಕ ಪಡೆದರು.

ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿದ (ಎ ದರ್ಜೆ) ಭಾರತದ ಅತಿ ಕಿರಿಯ ವಯಸ್ಸಿನ ಈಜುಪಟು ಎಂಬ ಹೆಗ್ಗಳಿಕೆ ಇರುವ ಶ್ರೀಹರಿ ಸಿಂಗಪುರ ಈಜುಕೊಳದಲ್ಲಿ ಪಾರಮ್ಯ ಮೆರೆದರು.

50 ಮೀಟರ್ಸ್ ಬಟರ್‌ಫ್ಲೈನಲ್ಲಿ ಮಿಹೀರ್ ಆಂಬ್ರೆ (24.66ಸೆ) ಹಾಗೂ 800 ಮೀ ಫ್ರೀಸ್ಟೈಲ್‌ನಲ್ಲಿ ಅನೀಶ್ ಗೌಡ (8ನಿ,14.08ಸೆ) ಚಿನ್ನದ ಸಾಧನೆ ಮಾಡಿದರು. ಅನೀಶ್ ಅವರು ಕಠಿಣ ಪೈಪೋಟಿ ಎದುರಿಸಿದರು.

ಸೇಂಟ್ ಜೋಸೆಫ್‌ಗೆ ಜಯ

ಬೆಂಗಳೂರು: ಹೊಂದಾಣಿಕೆಯ ಆಟವಾಡಿದ ಸೇಂಟ್ ಜೋಸೆಫ್ ಬಾಲಕರ ಹೈಸ್ಕೂಲ್ ತಂಡ, ಸುಬ್ರತೊ ಕಪ್ ಫುಟ್‌ಬಾಲ್ ವಲಯಮಟ್ಟದ ಅರ್ಹತಾ ಟೂರ್ನಿಯಲ್ಲಿ ಸುಲಭ ಜಯ ಸಾಧಿಸಿತು.

ಕೆಎಸ್‌ಎಫ್‌ಎ ಸಹಯೋಗದಲ್ಲಿ ಸೇಂಟ್ ಜೋಸೆಫ್ ಹೈಸ್ಕೂಲ್ ಆಯೋಜಿಸಿದ ಟೂರ್ನಿಯಲ್ಲಿ ಗುರುವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಸೇಂಟ್ ಜೋಸೆಫ್ 4–0 ಗೋಲುಗಳಿಂದ ಮಾರತಹಳ್ಳಿಯ ವಿಬ್ಗಯೊರ್ ಹೈಸ್ಕೂಲ್ ತಂಡವನ್ನು ಮಣಿಸಿತು.

ತಲಾ ಎರಡು ಗೋಲುಗಳನ್ನು ಗಳಿಸಿದ ಕನಿಕಾ ಅನಿಲ್ (2 ಮತ್ತು 27ನೇ ನಿ.) ಹಾಗೂ ಅಜಯ್ ಅರ್ಜುನ್ (9 ಮತ್ತು 29) ತಂಡದ ಗೆಲುವಿಗೆ ಕಾರಣರಾದರು.

'ಡಿ' ಗುಂಪಿನ ಪಂದ್ಯದಲ್ಲಿ ನ್ಯೂ ಶಮ್ಸ್ ಸ್ಕೂಲ್ 3–0 ರಲ್ಲಿ ಶಿಶುಗೃಹ ಸ್ಕೂಲ್ ವಿರುದ್ಧ ಜಯ ಪಡೆಯಿತು. ಮದನಿ (13), ಅಫ್ಥಾಮ್ ಮುಸ್ಬಾ (29, 30) ಗೋಲು ಗಳಿಸಿದರು.

ಬಿಷಪ್ ಕಾಟನ್ ತಂಡ 5–1 ರಲ್ಲಿ ರಯಾನ್ ಇಂಟರ್‌ನ್ಯಾಷನಲ್ ಸ್ಕೂಲ್ ತಂಡವನ್ನು ಸೋಲಿಸಿತು. ಎನ್.ತೇಜಸ್ (10), ಅಶ್ವಿನ್ ಸುನಿಲ್ (16, 31) ಹಾಗೂ ವಿಜಯ್ (45, 50) ಬಿಷಪ್ ಕಾಟನ್ ಗೆಲುವಿಗೆ ಕಾರಣರಾದರು.

ಬೈಡನ್ ನೇರ ನಿಷ್ಠುರ ಮಾತುಗಾರ: ಶ್ವೇತಭವನ

ವಾಷಿಂಗ್ಟನ್(ಪಿಟಿಐ): 'ಮಾನವೀಯ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದಂತಹ ಮಹತ್ವದ ವಿಷಯಗಳಲ್ಲಿ ವಿಶ್ವ ನಾಯಕರೊಂದಿಗೆ ನೇರ ಮಾತುಕತೆ ನಡೆಸಲು ಅಧ್ಯಕ್ಷ ಜೋ ಬೈಡನ್ ಅವರಿಗೆ ಯಾವುದೇ ಸಮಸ್ಯೆ ಇಲ್ಲ. ಅವರು ಇಂತಹ ವಿಚಾರಗಳಲ್ಲಿ ನೇರ ನಿಷ್ಠುರ ಮಾತುಗಾರ' ಎಂದು ಶ್ವೇತಭವನದ ವಕ್ತಾರರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ಜೋ ಬೈಡನ್

ಪ್ರವಾದಿ ಮೊಹಮ್ಮದ್ ವಿರುದ್ಧ ಸದ್ಯ ಅಮಾನತುಗೊಂಡಿರುವ ಇಬ್ಬರು ಬಿಜೆಪಿಯ ಪದಾಧಿಕಾರಿಗಳು ನೀಡಿದ ವಿವಾದಾತ್ಮಕ ಹೇಳಿಕೆಗಳಿಂದ ಭಾರತದಲ್ಲಿ ಪ್ರತಿಭಟನೆಗಳು ಹಿಂಸೆಗೆ ತಿರುಗಿವೆ. ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಬೈಡನ್ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯ ವಿಷಯ ಪ್ರಸ್ತಾಪಿಸುತ್ತಾರೆಯೇ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೀನ್ ಜೀನ್ ಪಿಯರ್ ಈ ಪ್ರತಿಕ್ರಿಯೆ ನೀಡಿದರು.

ಭಾರತದಲ್ಲಿ ಹಿಂಸಾಚಾರ ಸಂಬಂಧ ಅಲ್ಲಿನ ಅಧಿಕಾರಿಗಳು ಜನರ ಮನೆಗಳನ್ನು ನೆಲಸಮ ಮಾಡುತ್ತಿರುವುದಕ್ಕೆ ಶ್ವೇತಭವನದ ಪ್ರತಿಕ್ರಿಯೆ ಏನು? ಮುಂದಿನ ತಿಂಗಳು ಇಸ್ರೇಲ್ ಪ್ರವಾಸ ಕೈಗೊಳ್ಳಲಿರುವ ಬೈಡನ್ ಅವರು ಐ2ಯು2 ಶೃಂಗಸಭೆಯಲ್ಲಿ ಭಾರತದ ಅಲ್ಪಸಂಖ್ಯಾತ ಮುಸ್ಲಿಮರ ಹಕ್ಕಗಳನ್ನು ರಕ್ಷಿಸುವಂತೆ ಮೋದಿಯವರನ್ನು ಒತ್ತಾಯಿಸಲಿದ್ದಾರೆಯೇ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗಳಿಗೆ ಜೀನ್ ಪಿಯರ್ ನೇರ ಉತ್ತರ ನೀಡದೇ ನುಣುಚಿಕೊಂಡರು.

'ಭಾರತ ವಿರೋಧಿ ನಿರ್ಣಯ ಮಂಡಿಸಿದ ಅಮೆರಿಕ ಸಂಸದೆ'

ವಾಷಿಂಗ್ಟನ್ (ಪಿಟಿಐ): ಭಾರತ ವಿರೋಧಿ ಧೋರಣೆ ಮುಂದುವರಿಸಿರುವ ಡೆಮಾಕ್ರಟಿಕ್ ಸಂಸದೆ ಇಲ್ಹಾನ್ ಒಮರ್ ಅವರು 'ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆ ಆಗುತ್ತಿದೆ' ಎಂದು ಆರೋಪಿಸಿದ್ದು, ಇದಕ್ಕೆ ಸಂಬಂಧಿಸಿದ ನಿರ್ಣಯವೊಂದನ್ನು ಮಂಡಿಸಿದ್ದಾರೆ.

ಭಾರತಕ್ಕೆ ಧಾರ್ಮಿಕ ಸ್ವಾತಂತ್ರ್ಯ ಉಲ್ಲಂಘನೆಯಾಗುತ್ತಿರುವ ದೇಶವೆಂಬ ಹಣೆಪಟ್ಟಿ ಹಚ್ಚುವಂತೆ ಅವರು ಅಮೆರಿಕ ವಿದೇಶಾಂಗ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಸಂಸದೆಯರಾದ ರಶೀದಾ ತಾಲಿಬ್ ಮತ್ತು ಜುವಾನ್ ವರ್ಗಾಸ್ ಅವರು ಸಹ ಬೆಂಬಲಿಸಿರುವ ಈ ನಿರ್ಣಯದಲ್ಲಿ ಸತತ ಮೂರು ವರ್ಷಗಳವರೆಗೆ ಭಾರತವನ್ನು ಧಾರ್ಮಿಕ ಸ್ವಾತಂತ್ರ್ಯ ಉಲ್ಲಂಘನೆಯಾಗುತ್ತಿರುವ ದೇಶವೆಂದು ಪರಿಗಣಿಸಲು ಬೈಡನ್ ಆಡಳಿತವನ್ನು ಒತ್ತಾಯಿಸಲಾಗಿದೆ.

ಫಿಫಾ ರ್‍ಯಾಂಕಿಂಗ್: ಭಾರತ ತಂಡಕ್ಕೆ 104ನೇ ಸ್ಥಾನ

ನವದೆಹಲಿ (ಪಿಟಿಐ): ಫಿಫಾ ಬಿಡುಗಡೆ ಮಾಡಿದ ನೂತನ ರ್‍ಯಾಂಕಿಂಗ್ ಪಟ್ಟಿಯಲ್ಲಿ ಭಾರತ ಫುಟ್‌ಬಾಲ್ ತಂಡ ಎರಡು ಸ್ಥಾನ ಮೇಲಕ್ಕೇರಿ 104ನೇ ಸ್ಥಾನ ಗಳಿಸಿದೆ.

ಇತ್ತೀಚೆಗೆ ನಡೆದ ಏಷ್ಯನ್ ಕಪ್ ಅರ್ಹತಾ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದರಿಂದ ಎರಡು ಸ್ಥಾನ ಮೇಲಕ್ಕೇರಿದೆ. ಆದರೆ ಏಷ್ಯಾದ ತಂಡಗಳ ರ್‍ಯಾಂಕಿಂಗ್‌ನಲ್ಲಿ ಭಾರತದ ಸ್ಥಾನ (19ನೇ ರ್‍ಯಾಂಕ್) ಬದಲಾಗಿಲ್ಲ. ಫಿಫಾ ರ್‍ಯಾಂಕಿಂಗ್‌ನಲ್ಲಿ 23ನೇ ಸ್ಥಾನದಲ್ಲಿರುವ ಇರಾನ್, ಏಷ್ಯಾದಲ್ಲಿ ಅಗ್ರಸ್ಥಾನ ಹೊಂದಿದೆ.

ಬ್ರೆಜಿಲ್ ಅಗ್ರಸ್ಥಾನದಲ್ಲಿ ಮುಂದುವರಿದಿದ್ದು, ಬೆಲ್ಜಿಯಂ ಎರಡನೇ ಸ್ಥಾನದಲ್ಲಿದೆ. ಅರ್ಜೆಂಟಿನಾ 3, ಫ್ರಾನ್ಸ್ 4 ಹಾಗೂ ಇಂಗ್ಲೆಂಡ್ 5ನೇ ಸ್ಥಾನದಲ್ಲಿವೆ.

ದೀಪಿಕಾ ಕುಮಾರಿ

ಆರ್ಚರಿ: ಭಾರತ ಮಹಿಳೆಯರು ಫೈನಲ್‌ಗೆ ಲಗ್ಗೆ

ಪ್ಯಾರಿಸ್ (ಪಿಟಿಐ): ಭಾರತ ಮಹಿಳಾ ಆರ್ಚರಿ ತಂಡದವರು ಇಲ್ಲಿ ನಡೆಯುತ್ತಿರುವ ವಿಶ್ವಕಪ್ ಸ್ಟೇಜ್–3 ಸ್ಪರ್ಧೆಯ ರಿಕರ್ವ್ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ್ದು, ಪದಕ ಖಚಿತಪಡಿಸಿಕೊಂಡಿದ್ದಾರೆ.

ಬುಧವಾರ ನಡೆದ ಅರ್ಹತಾ ಸುತ್ತಿನಲ್ಲಿ ನೀರಸ ಪ್ರದರ್ಶನ ನೀಡಿದ್ದ ಭಾರತ, ಅಗ್ರ 30 ರಲ್ಲಿ ಕಾಣಿಸಿಕೊಳ್ಳುವಲ್ಲಿ ವಿಫಲವಾಗಿ 13ನೇ ಶ್ರೇಯಾಂಕ ಪಡೆದುಕೊಂಡಿತ್ತು.

ಆದರೆ ಗುರುವಾರ ನಡೆದ ಸ್ಪರ್ಧೆಯಲ್ಲಿ ದೀಪಿಕಾ ಕುಮಾರಿ, ಅಂಕಿತಾ ಭಕತ್ ಮತ್ತು ಸಿಮ್ರನ್‌ಜೀತ್ ಕೌರ್ ಅವರನ್ನೊಳಗೊಂಡ ತಂಡ ಸತತ ಮೂರು ಗೆಲುವು ಸಾಧಿಸಿ ಫೈನಲ್‌ಗೆ ಲಗ್ಗೆಯಿಟ್ಟಿತು.

ಮೊದಲ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕದ ಉಕ್ರೇನ್ ತಂಡವನ್ನು 5–1 ರಲ್ಲಿ ಮಣಿಸಿ ಶುಭಾರಂಭ ಮಾಡಿದ ತಂಡ, ಕ್ವಾರ್ಟರ್ ಫೈನಲ್‌ನಲ್ಲಿ 6–0 ರಲ್ಲಿ ಬ್ರಿಟನ್ ವಿರುದ್ಧ ಜಯ ಸಾಧಿಸಿತು. ಸೆಮಿಫೈನಲ್‌ನಲ್ಲಿ ಕೆಲವೊಂದು ಆತಂಕದ ಕ್ಷಣಗಳನ್ನು ಎದುರಿಸಿತಾದರೂ, 5–3 ರಲ್ಲಿ ಟರ್ಕಿ ವಿರುದ್ಧ ಗೆಲುವು ಪಡೆಯಿತು.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಭಾರತ ತಂಡ ಚೀನಾ ತೈಪೆಯ ಸವಾಲು ಎದುರಿಸಲಿದೆ.

ಪುರುಷರಿಗೆ ನಿರಾಸೆ: ಭಾರತ ಪುರುಷರ ರಿಕರ್ವ್ ತಂಡ ಮೊದಲ ಸುತ್ತಿನಲ್ಲಿ 4–5 ರಲ್ಲಿ ಸ್ವಿಟ್ಜರ್‌ಲೆಂಡ್ ಎದುರು ಸೋತು ಹೊರಬಿದ್ದಿತು. ತರುಣ್‌ದೀಪ್ ರಾಯ್, ಜಯಂತ್ ತಾಲುಕ್ದರ್ ಮತ್ತು ಪ್ರವೀಣ್ ಜಾಧವ್ ಅವರನ್ನೊಳಗೊಂಡ ಭಾರತ, ಎಂಟನೇ ಶ್ರೇಯಾಂಕ ಪಡೆದುಕೊಂಡಿತ್ತು.